ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಯಾನ

ಶ್ರೀನಗರದಲ್ಲಿ ಹಮ್ಮಿಕೊಂಡಿದ್ದ 'ಮೇರಿ ಮಾಟಿ ಮೇರಾ ದೇಶ್' ಅಭಿಯಾನದಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಪಾಲ್ಗೊಂಡಿದ್ದರು

ಸುವರ್ಣ ಗೋಲ್ಡನ್ ನಂಬರ್ ಕಾಂಟೆಸ್ಟ್

ಸುವರ್ಣ Golden ನಂಬರ್

"ಗುರುದೇವ್ ಹೊಯ್ಸಳ" ಸಿನಿಮಾವನ್ನು
ಮಿಸ್ ಮಾಡದೆ ನೋಡಿ ನಾವು ಕೇಳುವ ಸರಳ ಪ್ರಶ್ನೆಗೆ ಉತ್ತರ ನೀಡಿ
43 Inch LED TV ನಿಮ್ಮದಾಗಿಸಿಕೊಳ್ಳಿ

TV Sponsor

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

*TERMS AND CONDITIONS ON WWW.STARTV.COM

ಸಂಪೂರ್ಣ
ಸ್ವಾತಂತ್ರ್ಯ
0% ಬಡ್ಡಿ | 0 ಡೌನ್‌ಪೇಮೆಂಟ್
Up to
15%
Instant Cashback
on all smartphones
Order on
sangeethamobiles.com
and get
superfast delivery in 2 hours
iPhone 14
(128GB)
@₹92/Day
oppo
Reno 10 Pro+
5G
@₹204/Day
vivo
V27 Pro
@₹217/Day
Note 12 Pro
@₹133/Day
SAMSUNG
Introducing
Galaxy Z Fold5 | Z Flip5
Unfold your world
Get Galaxy Z Flip5 at ₹49999*
11R
@₹148/Day
realme
C53
@₹27/Day
itel
S23
@₹23/Day
NOKIA
C12 Pro
@₹23/Day
Smart TVs
EXPERIENCE WHOLESOME ENTERTAINMENT
Start @ ₹10,999
Laptops
WIDE RANGE OF
POWERFUL LAPTOPS
Start @ ₹13,999
Smartwatches
LATEST SMARTWATCHES
Start @ ₹799
2 HOUR DELIVERY
@sangeethamobiles.com
Shop @
sangeethamobiles.com
*T&C apply. Select offers applicable on Samsung products.
EASY EMI OPTIONS ▸
BAJAJ FINANCE
IDFC FIRST Bank
CleverPe
TVS CREDIT
kotak
Kotak Mahindra Bank
HDB FINANCIAL SERVICES
ShopSe
HDFC BANK
FEDERAL BANK
ಸಂಗೀತಾ
Sangeetha
mobiles.com
49 YEARS ▪ 7 STATES ▪ 800+ STORES ▪ 60 MILLION DELIGHTED CUSTOMERS
Feedback/suggestions: support@sangeethamobiles.com | SangeethaMobilesIndia | Sangeetha.since1974 | T & C: www.sangeethamobiles.com | Customer Care No.: 080-49397000
SAMSUNG realme NOKIA vivo oppo acer ASUS DELL hp Lenovo CHUWI PHILIPS FIRE-BOLTT URBAN pebble boAt noise

ಭಾನುವಾರ, ಆಗಸ್ಟ್ 13, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 224 | ಪುಟ 18
• www.prajavani.net
prajavani.net prajavani prajavani prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸ್ವಾತಂತ್ರ್ಯದ ನೆರಳಲ್ಲಿ ಸತ್ವದ ಹುಡುಕಾಟ

ಷೇರುಪೇಟೆ: ಲಾಭ ಗಳಿಕೆಗೆ ಗಮನ 8
ದೇಶದಲ್ಲಿ ನಕಾರಾತ್ಮಕತೆ ಹರಡುವಿಕೆಗೆ ಸೋಲು: ಪ್ರಧಾನಿ
ಲಕ್ಷದ್ವೀಪ: ವಿವಾದ ಸೃಷ್ಟಿಸಿದ ಶಾಲಾ ಸಮವಸ್ತ್ರ ನಿಯಮ 9
ಅವಿಶ್ವಾಸ ಮಂಡಿಸಿ ಕಾಲ್ಕಿತ್ತ 'ಇಂಡಿಯಾ' 9

ಮುಚ್ಚಿದ ಬಂಡವಾಳ ಮರುಗಳಿಕೆ ಮಾರ್ಗ • ಒಟಿಟಿಯಲ್ಲೂ ಸ್ಪಂದನೆಯಿಲ್ಲ

ಸಿನಿಮಾಗೆ ಬೇಕು ಜೀವಾನಿಲ

• ಅಭಿಲಾಷ್ ಪಿ.ಎಸ್
• ವಿನಾಯಕ ಕೆ.ಎಸ್.

2023ರ ಮೊದಲರ್ಧ ಕನ್ನಡ ಚಿತ್ರರಂಗ ಸಂಪೂರ್ಣ ಸೊರಗಿದ ಸ್ಥಿತಿಯಲ್ಲೇ ಕಳೆಯಿತು. ಕಳೆದೊಂದು ತಿಂಗಳಿನಿಂದ 'ಹಾಸ್ಟೆಲ್ ಹುಡುಗರು' ಸಿನಿಮಾ ಭರವಸೆಯ ಮಿಂಚು ಮೂಡಿಸಿದೆ. ಒಟಿಟಿ ವೇದಿಕೆಗಳೂ ಕನ್ನಡ ಚಿತ್ರಗಳನ್ನು ಮೂಸಿನೋಡದೇ ಇರುವ ಈ ಹೊತ್ತಿನಲ್ಲಿ ಇಡೀ ಚಿತ್ರರಂಗಕ್ಕೆ ಜೀವಾನಿಲ ಬೇಕಾಗಿದೆ...

ಬೆಂಗಳೂರು: 'ಒಟಿಟಿ ವಿಚಾರದಲ್ಲಿ ಕನ್ನಡ ಚಿತ್ರರಂಗವಷ್ಟೇ ಇಷ್ಟು ಕಷ್ಟ ಅನುಭವಿಸುತ್ತಿದೆ ಎನ್ನುವುದು ನನ್ನ ಗಮನಕ್ಕೆ ಬಂದಿರುವ ವಿಷಯ. ದಕ್ಷಿಣ ಭಾರತದಲ್ಲಿ ತೆಲುಗು, ತಮಿಳು ಚಿತ್ರರಂಗದಷ್ಟೇ ಸಂಖ್ಯೆಯಲ್ಲಿ ಕನ್ನಡ ಚಿತ್ರಗಳೂ ತಯಾರಾಗುತ್ತಿವೆ. ಕನ್ನಡದ ವಿಷಯದಲ್ಲಿ ಖಂಡಿತವಾಗಿಯೂ ಒಟಿಟಿಗಳು ತಾರತಮ್ಯ ತೋರುತ್ತಿವೆ. ಅಮೆಜಾನ್, ನೆಟ್‌ಫ್ಲಿಕ್ಸ್‌ಗೆ ಕನ್ನಡದ ಚಂದಾದಾರರ ಸಂಖ್ಯೆಯೇನೂ ಕಮ್ಮಿ ಇಲ್ಲ. ಆದರೆ ಇವರು ಕೊಡುವ ಹೆಚ್ಚಿನ ಕಂಟೆಂಟ್ ತಮಿಳು, ತೆಲುಗು, ಮಲಯಾಳ ಹಾಗೂ ಹಿಂದಿ ಭಾಷೆಯದ್ದು...'

'ನಾತಿಚರಾಮಿ' ಹಾಗೂ 'ಆಕ್ಟ್-1978' ಖ್ಯಾತಿಯ ನಿರ್ದೇಶಕ ಮಂಸೋರೆ ಒಟಿಟಿಯಲ್ಲಿ ಕನ್ನಡ ಚಿತ್ರಗಳಿಗೆ ಆಗುತ್ತಿರುವ ಅನ್ಯಾಯವನ್ನು ನೇರವಾಗಿ ಪ್ರಶ್ನಿಸಿದ್ದು ಹೀಗೆ.

'ನಾವೀಗ ಸವಾಲಿನ ಘಟ್ಟದಲ್ಲಿದ್ದೇವೆ. ಸಿನಿಮಾ ಎಲ್ಲಿಗೆ ಮಾಡಬೇಕು; ಚಿತ್ರಮಂದಿರಕ್ಕೋ? ಒಟಿಟಿಗೋ? ಎನ್ನುವ ದ್ವಂದ್ವ ನಮ್ಮನ್ನು ತೀವ್ರವಾಗಿ ಕಾಡುತ್ತಿದೆ...' ಹೀಗೆಂದವರು ಒಟಿಟಿಗೆ ಹೆಜ್ಜೆ ಇಟ್ಟ ಬಳಿಕ ಜನರಿಂದ ಮೆಚ್ಚುಗೆ ಪಡೆದುಕೊಳ್ಳುತ್ತಿರುವ 'ಹೊಂದಿಸಿ ಬರೆಯಿರಿ' ಸಿನಿಮಾದ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್.

ಕೋವಿಡ್ ಭೀತಿ ಸರಿದು ಚಂದನವನ ಕೊಂಚ ನಿರಾತಂಕದಿಂದ ಉಸಿರಾಡಿದ ವರ್ಷ 2022. 'ಕೆ.ಜಿ.ಎಫ್. ಚಾಪ್ಟರ್-2', '777 ಚಾರ್ಲಿ' ಹಾಗೂ 'ಕಾಂತಾರ'ದ ಯಶಸ್ಸಿನ ಗುಂಗಿನಲ್ಲೇ ತೇಲಾಡಿದ ವರ್ಷವದು. ಈ ಗುಂಗಿನಲ್ಲೇ 2023ರ ಮೊದಲಾರ್ಧ ಉರುಳಿದೆ.

6ನೇ ಪುಟ ನೋಡಿ

ಒಳನೋಟ
ನೆಲಕಚ್ಚಿದ ವಹಿವಾಟು
ಪ್ರತಿಕ್ರಿಯಿಸಿ: 9606038256
feedback@prajavani.co.in

ಪ್ರಯೋಗಶೀಲ ಸಿನಿಮಾಗಳಿಗೆ ಒಟಿಟಿ ಅದ್ಭುತ ವೇದಿಕೆಯಾಗಿದೆ. ಇಲ್ಲಿ ಬಂದ ಬಳಿಕ ಉತ್ತಮವಾದ ಪ್ರಚಾರ ನೀಡಿದರೆ ರೆವೆನ್ಯೂ ಶೇರಿಂಗ್ ಮಾದರಿಯೂ ಆದಾಯದ ವೇದಿಕೆಯಾಗುತ್ತದೆ.
ಆನಂದ್ ರಾಜ್, 'ರಾಘು' ಸಿನಿಮಾ ನಿರ್ದೇಶಕ.

'ಡೈನಾಮಿಕ್ ಪ್ರೈಸಿಂಗ್' ಚರ್ಚೆ

ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ 'ಡೈನಾಮಿಕ್ ಪ್ರೈಸಿಂಗ್' ಮಾದರಿಯನ್ನು ಜಾರಿಗೆ ತರುವ ಕುರಿತು ಕನ್ನಡದ ಪ್ರಮುಖ ವಿತರಕ ಸಂಸ್ಥೆ ಕೆಆರ್‌ಜಿ ಸ್ಟುಡಿಯೋಸ್ ಚಿಂತಿಸುತ್ತಿದೆ. ಈ ಕುರಿತು ಟ್ವೀಟ್ ಒಂದರಲ್ಲಿ ನಿರ್ಮಾಪಕ ಕಾರ್ತಿಕ್ ಗೌಡ ಹೀಗಂದಿದ್ದಾರೆ. 'ಸಿನಿಮಾವೊಂದು ನಿಗದಿತ ಟಿಕೆಟ್ ದರದೊಂದಿಗೆ ಆರಂಭವಾಗಲಿದ್ದು, ಪ್ರೇಕ್ಷಕರ ಸಂಖ್ಯೆ ಹೆಚ್ಚಿದಂತೆ ಹಂತ ಹಂತವಾಗಿ ಟಿಕೆಟ್ ದರ ಏರಿಕೆ ಮಾಡುವ ಮಾದರಿ ಇದಾಗಿದೆ.

6ನೇ ಪುಟ ನೋಡಿ

ಭಾರತಕ್ಕೆ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಗುರುಜಂತ್ ಸಿಂಗ್ ಮತ್ತು ಸಹ ಆಟಗಾರರ ಸಂಭ್ರಮ

ಚೆನ್ನೈ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿತು.

ಶನಿವಾರ ನಡೆದ ಫೈನಲ್‌ನಲ್ಲಿ ಭಾರತ ತಂಡವು 4-3ರಿಂದ ಮಲೇಷ್ಯಾ ಎದುರು ಜಯಗಳಿಸಿತು. ಪಂದ್ಯದ ಒಂಬತ್ತನೇ ನಿಮಿಷದಲ್ಲಿ ಭಾರತದ ಜುಗರಾಜ್ ಸಿಂಗ್ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿದರು. ಆದರೆ ಇದರ ನಂತರದಲ್ಲಿ ಮಲೇಷ್ಯಾ ತಂಡವು ತಿರುಗಿಬಿತ್ತು. ಮೂರು ಗೋಲುಗಳನ್ನು ಹೊಡೆದು ಒತ್ತಡ ಹೇರಿತು. ಎದೆಗುಂದದ ಭಾರತದ ಹರ್ಮನ್‌ಪ್ರೀತ್ (45ನೇ ನಿ), ಗುರುಜಂತ್ ಸಿಂಗ್ (45ನೇ ನಿ) ಮತ್ತು ಆಕಾಶದೀಪ್ ಸಿಂಗ್ (56ನೇ ನಿ) ಗೋಲು ಗಳಿಸಿ ಗೆಲುವಿನ ಕಾಣಿಕೆ ನೀಡಿದರು.

14

ಸುಪ್ರೀಂ ಕೋರ್ಟ್‌ನಿಂದ ಕೇಂದ್ರದ ಅಧಿಸೂಚನೆ ವಜಾ

ಬಿ.ಇಡಿ ಕಡ್ಡಾಯ ರದ್ದು

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಾಥಮಿಕ ಶಾಲೆಯ ಶಿಕ್ಷಕರಾಗಲು ಬಿ.ಇಡಿ ಅರ್ಹತೆ ಹೊಂದಿರಬೇಕು ಎಂದು ಕೇಂದ್ರ ಸರ್ಕಾರ ಕೈಗೊಂಡ ನಿರ್ಧಾರವು 'ಸ್ವೇಚ್ಛೆ'ಯಿಂದ ಕೂಡಿದೆ ಮತ್ತು 'ಅತಾರ್ಕಿಕ'ವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ಗುಣಮಟ್ಟದ ಶಿಕ್ಷಣ ನೀಡುವುದಕ್ಕಾಗಿ ರೂಪಿಸಲಾದ ಶಿಕ್ಷಣ ಹಕ್ಕು ಕಾಯ್ದೆಗೂ ಈ ನಿರ್ಧಾರಕ್ಕೂ ಸಂಬಂಧ ಇಲ್ಲ ಎಂದು ಕೋರ್ಟ್ ಹೇಳಿದೆ.

ಉದ್ಯೋಗ ನೀಡಿಕೆಯೇ ಗುರಿಯೇ?

'ನಮ್ಮ ಆದ್ಯತೆಯೇ ಬೇರೆ ಇದ್ದಂತೆ ತೋರುತ್ತಿದೆ. ಗುಣಮಟ್ಟದ ಶಿಕ್ಷಣ ನೀಡುವುದು ನಮ್ಮ ಉದ್ದೇಶ ಇದ್ದಂತಿಲ್ಲ. ಬದಲಿಗೆ ಬಿ.ಇಡಿ. ಕೋರ್ಸ್ ಮಾಡಿದ ಹೆಚ್ಚು ಹೆಚ್ಚು ಜನರಿಗೆ ಉದ್ಯೋಗ ಕೊಡಿಸುವುದೇ ನಮ್ಮ ಗುರಿ ಇದ್ದಂತಿದೆ. ಇಲ್ಲದೇ ಇದ್ದರೆ, ಪ್ರಾಥಮಿಕ ತರಗತಿಗಳಲ್ಲಿ ಬೋಧಿಸಲು ಬಿ.ಇಡಿ ಕೋರ್ಸ್ ಅಗತ್ಯ ಇಲ್ಲ ಎಂಬುದಕ್ಕೆ ಹಲವು ಪುರಾವೆ ಇದ್ದರೂ ಬಿ.ಇಡಿ ಅನ್ನು ಪ್ರಾಥಮಿಕ ಶಾಲೆಯಲ್ಲಿ ಬೋಧಿಸಲು ಅರ್ಹತೆಯಾಗಿ ಏಕೆ ನಿಗದಿ ಮಾಡಬೇಕಿತ್ತು' ಎಂದು ಪೀಠ ಪ್ರಶ್ನಿಸಿದೆ.

ಪ್ರಾಥಮಿಕ ಶಾಲಾ ಶಿಕ್ಷಕರಾಗಲು ಬಿ.ಇಡಿ. ಅನ್ನು ಅರ್ಹತೆಯಾಗಿ ನಿಗದಿ ಮಾಡಬೇಕು ಎಂದು ಬೋಧನಾ ಶಿಕ್ಷಣ ರಾಷ್ಟ್ರೀಯ ಪರಿಷತ್ 2018ರ ಜೂನ್ 28ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಕೋರ್ಟ್ ರದ್ದು ಮಾಡಿದೆ.

7ನೇ ಪುಟ ನೋಡಿ

ಎನ್‌ಇಪಿ ಶಿಫಾರಸು ಜಾರಿಗೆ ಉನ್ನತ ಶಿಕ್ಷಣ ಇಲಾಖೆ ತಡೆ

4 ವರ್ಷದ ಪದವಿ ಕೋರ್ಸ್ ಸ್ಥಗಿತ?

• ರಶ್ಮಿ ಬೇಲೂರು

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅಡಿಯಲ್ಲಿ ನಾಲ್ಕು ವರ್ಷಗಳ ಅವಧಿಯ ಆನರ್ಸ್ ಪದವಿ ಕೋರ್ಸ್ ಆರಂಭಿಸುವ ತೀರ್ಮಾನವನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ತಡೆಹಿಡಿಯುವ ಸಾಧ್ಯತೆ ಇದೆ.

ರಾಜ್ಯದಲ್ಲಿ ಎನ್‌ಇಪಿ ಅನುಷ್ಠಾನವನ್ನು ಕೈಬಿಟ್ಟು, ಪ್ರತ್ಯೇಕವಾದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೊಳಿಸಲು ಸರ್ಕಾರ ಸಿದ್ಧತೆ ನಡೆದಿದೆ. ಅದಕ್ಕೆ ಪೂರಕವಾಗಿ ನಾಲ್ಕು ವರ್ಷಗಳ ಪದವಿ ಕೋರ್ಸ್ ಪರಿಚಯಿಸುವ ಹಿಂದಿನ ಸರ್ಕಾರದ ನಿರ್ಧಾರವನ್ನು ಕೈಬಿಡುವ ದಿಸೆಯಲ್ಲಿ ಪ್ರಕ್ರಿಯೆಗಳು ಆರಂಭವಾಗಿವೆ.

ಪದವಿ ಕೋರ್ಸ್‌ಗಳನ್ನು ಮೂರು ವರ್ಷಗಳಿಗೆ ಸೀಮಿತಗೊಳಿಸುವ ಕುರಿತು ಶೀಘ್ರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು
ಡಾ.ಎಂ.ಸಿ. ಸುಧಾಕರ್
ಉನ್ನತ ಶಿಕ್ಷಣ ಸಚಿವ

ಈಗ ಇರುವಂತೆಯೇ ಸಾಂಪ್ರದಾಯಿಕವಾಗಿ ಮೂರು ವರ್ಷಗಳ ಪದವಿ ಕೋರ್ಸ್ ಮುಂದುವರಿಸಲು ಸರ್ಕಾರ ಒಲವು ತೋರಿದೆ. ಪದವಿ ತರಗತಿಗಳ ಆರಂಭಕ್ಕೆ ಪೂರ್ವಭಾವಿಯಾಗಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿಗಳಿಗೆ ಸುತ್ತೋಲೆ ಹೊರಡಿಸಿರುವ ಉನ್ನತ ಶಿಕ್ಷಣ ಇಲಾಖೆ, ಐದು ಮತ್ತು ಆರನೇ ಸೆಮಿಸ್ಟರ್‌ಗಳಿಗೆ ಮಾತ್ರ ಪಠ್ಯಕ್ರಮ ರೂಪಿಸುವಂತೆ ಸೂಚಿಸಿದೆ.

7ನೇ ಪುಟ ನೋಡಿ

ಹೊಸಹಟ್ಟಿ: 12 ಜನರಲ್ಲಿ ವಾಂತಿ–ಭೇದಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ತಾಲ್ಲೂಕಿನ ಮುದ್ದಾಪುರ ಹೊಸಹಟ್ಟಿ ಗ್ರಾಮದ 12 ಜನರಲ್ಲಿ ವಾಂತಿ-ಭೇದಿ ಕಾಣಿಸಿಕೊಂಡು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಗ್ರಾಮಕ್ಕೆ ಪೂರೈಕೆ ಮಾಡುತ್ತಿದ್ದ ನೀರಿನ ಮಾದರಿಯನ್ನು ಪರೀಕ್ಷೆಗೆ ಒಳಪಡಿಸಿದ್ದು, ಕುಡಿಯಲು ಯೋಗ್ಯವಾಗಿಲ್ಲ ಎಂಬುದು ದೃಢಪಟ್ಟಿದೆ.

ಕವಾಡಿಗರಹಟ್ಟಿಯ ವಾಂತಿ-ಭೇದಿ ಪ್ರಕರಣ ನಿಯಂತ್ರಣಕ್ಕೆ ಬಂದ ಕೆಲ ದಿನಗಳಲ್ಲೇ ಹೊಸಹಟ್ಟಿ ಗ್ರಾಮದಲ್ಲೂ ಈ ಸಮಸ್ಯೆ ಕಾಣಿಸಿಕೊಂಡಿದೆ. ತಾತ್ಕಾಲಿಕ ಆಸ್ಪತ್ರೆ ತೆರೆದು, ಜನರನ್ನು ತಪಾಸಣೆ ಮಾಡಲಾಗುತ್ತಿದೆ. ಕುಡಿಯುವ ನೀರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

'ಇದೇ 5ರಂದು ಮೊದಲ ಬಾರಿಗೆ ವಾಂತಿ-ಭೇದಿ ಪ್ರಕರಣ ಕಾಣಿಸಿಕೊಂಡಿತ್ತು. ಶುಕ್ರವಾರ ಮತ್ತು ಶನಿವಾರ ಹಲವು ಜನರು ಅಸ್ವಸ್ಥಗೊಂಡಿದ್ದಾರೆ. ನೀರು ಕಲುಷಿತಗೊಂಡು ಈ ಸಮಸ್ಯೆ ಉಂಟಾಗಿದೆಯೇ ಎಂಬುದನ್ನು ಪರೀಕ್ಷಿಸಲಾಗುತ್ತಿದೆ. ಕುಡಿಯುವ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪರೀಕ್ಷಿಸಲಾಗಿದೆ' ಎಂದು ಉಪ ವಿಭಾಗಾಧಿಕಾರಿ ಕಾರ್ತಿಕ್ ಮಾಹಿತಿ ನೀಡಿದರು.

7ನೇ ಪುಟ ನೋಡಿ

ಅಕ್ರಮ ಹೂಳು ₹71.45 ಲಕ್ಷ ನಷ್ಟ

ಬೆಂಗಳೂರು: ಶಿವಮೊಗ್ಗ ತಾಲ್ಲೂಕಿನ ಅಬ್ಬಲಗೆರೆ ಗ್ರಾಮಗಳಲ್ಲಿ ಅಕ್ರಮವಾಗಿ ಕೆರೆ ಹೂಳು (ಮಣ್ಣು) ತೆಗೆದು ಸರ್ಕಾರದ ಬೊಕ್ಕಸಕ್ಕೆ ₹71.45 ಲಕ್ಷಕ್ಕೂ ಹೆಚ್ಚು ನಷ್ಟ ಮಾಡಿರುವುದು ಪತ್ತೆಯಾಗಿದೆ.

7

ಸಾವು ಗೆದ್ದರು ಸಕ್ರೆಬೈಲ್‌ನ ಈ ಆನೆ ವೈದ್ಯ!

ಶಿವಮೊಗ್ಗ: ಒಂಟಿ ಸಲಗದ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದ ಸಕ್ರೆಬೈಲು ಆನೆ ಕ್ಯಾಂಪಿನ ಹಿರಿಯ ವೈದ್ಯ ಎಸ್.ವಿನಯ್ ಗುಣಮುಖರಾಗಿದ್ದಾರೆ.

9

3–12ನೇ ತರಗತಿ ಪಠ್ಯ ಪರಿಷ್ಕರಣೆ

ನವದೆಹಲಿ: ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) 3ರಿಂದ 12ನೇ ತರಗತಿವರೆಗಿನ ಸಿಬಿಎಸ್‌ಇ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಹೊಸ ಸಮಿತಿಯನ್ನು ರಚಿಸಿದೆ.

9

ಬೆಳಗಾವಿ: ವಿದ್ಯುತ್ ಅವಘಡ ಸ್ಥಳದಲ್ಲೇ ಮೂವರ ಸಾವು 7

ಚಿನಕುರಳಿ
ಪ್ರಕಾಶ್ ಶೆಟ್ಟಿ



GAIN MORE KNOWLEDGE
REACH GREATER HEIGHTS

PRESIDENCY UNIVERSITY

Established under Section 2(f) of UGC Act, 1956 I Presidency University Act, 2013 of the Karnataka Act No. 41 of 2013

Bengaluru

APPROVED BY AICTE NEW DELHI

Exploring B.TECH Options?

Discover Excellence

Computer Science & Engineering
Computer Science & Engineering (Data Science)
Artificial Intelligence & Machine Learning
Computer Science & Engineering Blockchain Cyber Security Internet of Things
Computer Science & Technology [Spl. in Artificial Intelligence & Machine Learning] Computer Science and Technology DevOps Big Data
Civil Engineering
Civil Engineering Spl. in Infrastructure Development
Computer Engineering [Spl. in Artificial Intelligence & Machine Learning]
Information Science & Engineering Spl. in Artificial Intelligence & Robotics
Information Science & Technology [Spl. in Artificial Intelligence & Data Science]
Civil Engineering [Spl. in Smart Cities]
Electrical & Electronics Engineering
Electronics and Communication Engineering Spl. in Artificial Intelligence & Wearable Technology
Electrical & Electronics Engineering [Spl. in Automotive Electronics]
[Spl. in Power & Energy Systems]
Spl. in Embedded System & VLSI
Petroleum Engineering
Mechanical Engineering Spl. in Additive Manufacturing
Spl. in Mechatronics

CET / DCET CODE: E237

8 Advanced Schools | 56 Specialized Programs | 97% Placement Record | 500+ Corporate Partners | 103+ International University Partners | 2200+ Students Got Placed in 2022-23

ENTERPRISE 4.0 FUTURE-READY CURRICULA

SCHOOL OF COMPUTER SCIENCE & ENGINEERING

B.Tech. - Computer Science and Engineering
B.Tech. - Computer Science and Engineering (Artificial Intelligence and Machine Learning)
B.Tech. - Computer Science & Engineering (Data Science)
B.Tech. - Computer Science & Engineering (Cyber Security)
B.Tech. - Computer Science & Engineering (Block Chain)
B.Tech. - Computer Science & Engineering (Internet of things)
B.Tech. - Computer Science & Technology (Big Data)
B.Tech. - Computer Science & Technology (Devops)

B.Tech. - Computer Science & Technology
Specialisation : Artificial Intelligence and Machine Learning
B.Tech. - Computer Engineering
Specialisation : Artificial Intelligence and Machine Learning
B.Tech. - Computer Science & Engineering (Networks)
B.Tech. - Computer Science & Information Technology
B.Tech. - Information Science & Engineering
Specialisation : Artificial Intelligence and Robotics
B.Tech. - Information Science & Technology
Specialisation : Artificial Intelligence and Data Science

SCHOOL OF ENGINEERING

B.Tech. - Civil Engineering
B.Tech. - Electrical and Electronics Engineering
B.Tech. - Electronics & Communication Engineering
B.Tech. - Petroleum Engineering

B.Tech. - Mechanical Engineering
B.Tech. - Mechanical Engineering
Specialisation : Mechatronics
B.Tech. - VLSI

INTERNATIONAL UNIVERSITIES TIE UP

Queen Mary University of London | CentraleSupélec | Iowa State University | USM | Staffordshire University | UCLouvain | Wisconsin | Drexel University | université Paris-Saclay | Manchester Metropolitan University | University of Liverpool | University of Dundee | Illinois Institute of Technology | St Petersburg University | AND MANY MORE...

SCHOOL OF LAW	SCHOOL OF MANAGEMENT	SCHOOL OF DESIGN	SCHOOL OF INFORMATION SCIENCE	SCHOOL OF MEDIA STUDIES	SCHOOL OF COMMERCE
LL. B. I LL. M.	BBA I MBA	B.DESIGN I B. SC.-MULTIMEDIA	BCA I MCA	BA - JOURNALISM	B.COM I B.SC.-ECONOMICS

COMEDK CODE: 173 | CONCESSIONAL FEE WITH CHOICE OF BRANCH FOR COMEDK / CET ASPIRANTS

SCAN THE QR CODE TO VISIT THE CAMPUS

MERITORIOUS STUDENTS • SCHOLARSHIPS • ₹15 CRORE • DESERVING STUDENTS • FEE CONCESSIONS

admission@presidencyuniversity.in I presidencyuniversity.in

ADMISSIONS OPEN 2023-24 +91-90240 60000

Presidency University, Itgalpur, Rajanakunte, Yelahanka, Bengaluru 560064

INTEREST FREE EDU. LOAN FACILITY

ವಾಣಿಜ್ಯ ಉದ್ದೇಶಕ್ಕೆ ಬಿಡಿಎ ಭೂಮಿ ಬಳಕೆ ಹೆಚ್ಚಾಗಲಿ: ಡಿಸಿಎಂ ಡಿ.ಕೆ. ಶಿವಕುಮಾರ್ ಸೂಚನೆ

‘ಕಾರಂತ ಬಡಾವಣೆ ಬಳಿ ಐ.ಟಿ ಹಬ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭೂಮಿ ಕಳೆದುಕೊಂಡ ರೈತರಿಗೆ ಉತ್ತಮ ಬೆಲೆ ಸಿಗಬೇಕು. ಶಿವರಾಮ ಕಾರಂತ ಬಡಾವಣೆಯ ಬಳಿಯೇ ಐಟಿ ಹಬ್ ಅಭಿವೃದ್ಧಿಪಡಿಸಲು ಜಾಗ ಮೀಸಲಿಡಲು ಸೂಚಿಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಡಿಎ ಅಭಿವೃದ್ಧಿಪಡಿಸುತ್ತಿರುವ ಶಿವರಾಮ ಕಾರಂತ ಬಡಾವಣೆಯ ಪ್ರದೇಶದಲ್ಲಿ ಶನಿವಾರ ವೀಕ್ಷಣೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಬಡಾವಣೆಗೆ ಸಂಬಂಧಿಸಿದಂತೆ ನಾವು ಇಂದು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದ್ದು, ನಮ್ಮ ತೀರ್ಮಾನಗಳ ಬಗ್ಗೆ ಸುಪ್ರೀಂ ಕೋರ್ಟ್ ರಚಿಸಿರುವ ಸಮಿತಿಯ ಜತೆಗೂ ಚರ್ಚಿಸಿದ್ದೇವೆ. ಬಿಡಿಎ ಅಧಿಕಾರಿಗಳು ತೀರ್ಮಾನ ಸಮಂಜಸವಾಗಿದೆ ಎಂದು ಒಪ್ಪಿದ್ದಾರೆ’ ಎಂದರು.

‘ಕಂಠೀರವ ಕ್ರೀಡಾಂಗಣದ ಮಾದರಿಯಲ್ಲಿ ಕ್ರೀಡಾಂಗಣ ಅಭಿವೃದ್ಧಿಗೆ ಜಾಗ ನಿಗದಿಪಡಿಸಿದ್ದಾರೆ. ನಿಗದಿಪಡಿಸಿರುವ ಜಾಗದ ಬಗ್ಗೆ ನನಗೆ ಸಮಾಧಾನ ಇಲ್ಲ. 45 ಮೀಟರ್ ರಸ್ತೆ ಪಕ್ಕದಲ್ಲಿ ಉದ್ಯಾನಕ್ಕೆ ಸ್ಥಳ ಮೀಸಲಿಡಲಾಗಿದೆ. ಅಲ್ಲಿ ಕ್ರೀಡಾಂಗಣ ಇರಬೇಕು. ಮುಂದೆ ಮೆಟ್ರೊ ಬಂದರೆ ಅದರ ಹತ್ತಿರದಲ್ಲಿ ಕ್ರೀಡಾಂಗಣ ಇರಬೇಕು. ಕ್ರೀಡಾಂಗಣಕ್ಕೆ 25-45 ಎಕರೆ ಭೂಮಿ ಮೀಸಲಿಡಲಾಗಿದೆ’ ಎಂದು ಮಾಹಿತಿ ನೀಡಿದರು.

‘45 ಮೀಟರ್ ರಸ್ತೆ ಸಮೀಪ ಯಾರಿಗೂ ನಿವೇಶನ ನೇರ ಹಂಚಿಕೆ ಮಾಡಬಾರದು. ಇಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಭೂಮಿಯು ಬಳಕೆ ಆಗಬೇಕು. ಇದರಿಂದ ಬಿಡಿಎ ಹಾಗೂ ಸರ್ಕಾರಕ್ಕೆ ಲಾಭವಾಗುವಂತೆ ಇರಬೇಕು’ ಎಂದರು.

‘ನಿವೇಶನ ಹಂಚಿಕೆಗೆ ಮೊದಲ ಆದ್ಯತೆ ನೀಡಲಾಗುವುದು. ಆ ಬಳಿಕ ಉಳಿದ ಕೆಲಸ ಜಾರಿ ಆಗಬೇಕು. ಸದ್ಯಕ್ಕೆ 2,500 ಎಕರೆ ಜಾಗದಲ್ಲಿ ಕಾಮಗಾರಿ ನಡೆಯುತ್ತಿದೆ. ಉಳಿದ ಜಾಗದ ವಿಚಾರವಾಗಿ ಕಾನೂನು ತೊಡಕಿನ ಬಗ್ಗೆ ಚರ್ಚಿಸಲಾಗುತ್ತಿದೆ’ ಎಂದು ಹೇಳಿದರು.

‘ಭೂಮಿ ಕಳೆದುಕೊಂಡಿರುವ ರೈತರಿಗೆ ಸೂಕ್ತ ಬೆಲೆ ಸಿಗಬೇಕು. ಅವರಿಗೆ ನ್ಯಾಯ ಒದಗಿಸಲು ನಾನು ಶ್ರಮಿಸುತ್ತಿದ್ದೇನೆ. ಸುಪ್ರೀಂ ಕೋರ್ಟ್‌ನ ನಿರ್ದೇಶನದಂತೆಯೇ ನಿವೇಶನವನ್ನು ಹಂಚಿಕೆ ಮಾಡಲಾಗುವುದು’ ಎಂದು ತಿಳಿಸಿದರು.

ಈ ಬಡಾವಣೆಯ ಮೂಲಕ ಪೆರಿಫೆರಲ್ ರಿಂಗ್ ರಸ್ತೆ ಹಾದುಹೋಗುವ ಮಾರ್ಗವನ್ನು ಶಿವಕುಮಾರ್ ಪರಿಶೀಲಿಸಿದರು.

ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್, ಆಯುಕ್ತ ಜಿ. ಕುಮಾರ ನಾಯಕ, ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ ರಾಜೇಂದ್ರ ಚೋಳನ್, ಎಂಜಿನಿಯರ್ ಸದಸ್ಯ ಶಾಂತರಾಜಣ್ಣ, ಕಾರ್ಯದರ್ಶಿ ವೈ.ಬಿ. ಶಾಂತರಾಜು ಇದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಅಭಿವೃದ್ಧಿಪಡಿಸುತ್ತಿರುವ ಶಿವರಾಮ ಕಾರಂತ ಬಡಾವಣೆಯ ನಕ್ಷೆಯನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ವೀಕ್ಷಿಸಿದರು. ಬಿಡಿಎ ಅಧ್ಯಕ್ಷ ರಾಕೇಶ್ ಸಿಂಗ್ ಇದ್ದರು

ಕಸ ವಿಲೇವಾರಿ ಘಟಕಕ್ಕೆ ಭೇಟಿ

ಬೆಲ್ಲಹಳ್ಳಿ ಹಾಗೂ ಮಿಟಗಾನಹಳ್ಳಿ ಘನತ್ಯಾಜ್ಯ ವಿಲೇವಾರಿ ಘಟಕಕ್ಕೆ ನಾಲ್ಕು ಪ್ರವೇಶ ಮತ್ತು ನಿರ್ಗಮನ ದ್ವಾರದ ವ್ಯವಸ್ಥೆಯನ್ನು ಮಾಡಲು ಉಪ ಮುಖ್ಯಮಂತ್ರಿ ಅವರು ಸೂಚಿಸಿದರು.

ಕಸ ವಿಲೇವಾರಿ ಘಟಕಕ್ಕೆ ಶನಿವಾರ ಭೇಟಿ ನೀಡಿದ್ದ, ಕಸದ ಲಾರಿಗಳು ನೂರಾರು ಸಂಖ್ಯೆಯಲ್ಲಿ ಸಾಲುಗಟ್ಟಿರುವುದನ್ನು ಗಮನಿಸಿದರು. ಸುಮಾರು 55 ಎಕರೆ ವಿಸ್ತೀರ್ಣದ ಈ ಘಟಕಕ್ಕೆ ಒಂದೇ ಒಂದು ಪ್ರವೇಶ ಮತ್ತು ನಿರ್ಗಮನ ಕೇಂದ್ರವಿದೆ. ತಕ್ಷಣವೇ ನಾಲ್ಕು ದ್ವಾರಗಳನ್ನು ವ್ಯವಸ್ಥೆ ಮಾಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಆದೇಶಿಸಿದರು.

ಲಾರಿಗಳು ಆರರಿಂದ ಏಳು ತಾಸು ಕಾಯುತ್ತಿರುವುದು ಸರಿ ಅಲ್ಲ. ಲಾರಿಗಳು ಸ್ಥಳಕ್ಕೆ ಬಂದ ಎರಡು ಗಂಟೆಯ ಒಳಗೇ ಕಸವನ್ನು ವಿಲೇವಾರಿ ಮಾಡಿ ನಿರ್ಗಮಿಸುವ ವ್ಯವಸ್ಥೆಯನ್ನು ಜಾರಿ ಮಾಡಿ ಎಂದು ಸೂಚಿಸಿದರು.

ಶ್ರೀನಿವಾಸಗೆ ‘ಸೃಷ್ಟಿ ಯಕ್ಷ ಏಕಲವ್ಯ’ ಪ್ರಶಸ್ತಿ

ಬೆಂಗಳೂರು: ಸೃಷ್ಟಿ ಕಲಾ ವಿದ್ಯಾಲಯ ನೀಡುವ ಸೃಷ್ಟಿ ಯಕ್ಷ ಏಕಲವ್ಯ ಪ್ರಶಸ್ತಿಗೆ ಚೆಂಡೆ ವಾದಕ ಶ್ರೀನಿವಾಸ ಪ್ರಭು (ಗುಂಡ) ಆಯ್ಕೆಯಾಗಿದ್ದಾರೆ.

ಆ. 13ರಂದು ಬನಶಂಕರಿಯ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಬಳಿಯ ಇರುವ ಪರಂಪರಾ ಸಭಾಂಗಣದಲ್ಲಿ ನಡೆಯುವ 23ನೇ ಸೃಷ್ಟಿ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.



ಶ್ರೀನಿವಾಸ ಪ್ರಭು

ನಿತ್ಯಾನಂದ ನಾಯಕ್ ಪರಿಕಲ್ಪನೆಯ ಸುಬ್ರಾಯ ಹೆಬ್ಬಾರ್ ಮತ್ತು ಭರತ್ ರಾಜ್ ಪರ್ಕಳ ನಿರ್ದೇಶನದ ಕುಮಾರ ವಿಜಯ ಯಕ್ಷಗಾನವನ್ನು ಸೃಷ್ಟಿ ಕಲಾ ವಿದ್ಯಾಲಯದ ವಿದ್ಯಾರ್ಥಿಗಳು ಪ್ರಸ್ತುತ ಪಡಿಸಲಿದ್ದಾರೆ ಎಂದು ವಿದ್ಯಾಲಯದ ಅಧ್ಯಕ್ಷ ಛಾಯಾಪತಿ ಕಂಚಿಬೈಲ್ ತಿಳಿಸಿದ್ದಾರೆ.

‘ಪೆಹಲಾ ವೋಟ್’ ಅಭಿಯಾನಕ್ಕೆ ಚಾಲನೆ

ಯುವ ಮತದಾರರಿಂದ ಅಭೂತಪೂರ್ವ ಬೆಂಬಲ – ರಕ್ಷಾ ರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮೊದಲ ಬಾರಿ ಮತದಾನ ಮಾಡುವ 18 ರಿಂದ 23 ವಯಸ್ಸಿನ ಮತದಾರರನ್ನು ಸೆಳೆಯಲು ಯುವ ಕಾಂಗ್ರೆಸ್ ಹಮ್ಮಿಕೊಂಡಿರುವ ‘ಪೆಹಲಾ ವೋಟ್’ (ಮೊದಲ ಮತ) ಅಭಿಯಾನಕ್ಕೆ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ರಾಜ್ಯದಲ್ಲಿ ಮೊದಲ ಮತದಾನ ಅಭಿಯಾನದ ಜವಾಬ್ದಾರಿ ಹೊತ್ತಿರುವ ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಂ.ಎಸ್. ರಕ್ಷಾ ರಾಮಯ್ಯ ಅವರ ಸಮ್ಮುಖದಲ್ಲಿ, ಸಹಕಾರ ನಗರದ ತಮ್ಮ ಕಚೇರಿಯಲ್ಲಿ ಸಚಿವರು ಪ್ರಚಾರ ವಾಹನಗಳಿಗೆ ಹಸಿರು ನಿಶಾನೆ ತೋರಿದರು.

‘ಯುವ ಸಮೂಹ ದೇಶದ ಯುವ ಶಕ್ತಿ. ಮೊದಲ ಮತ ಅಭಿಯಾನ ಯುವ ಜನಾಂಗದ ಆಂದೋಲನವಾಗಲಿದೆ. ಅಭಿಯಾನದಲ್ಲಿ ಸಂವಾದ, ತಂತ್ರಜ್ಞಾನ ಆಧಾರಿತ ಪ್ರಚಾರ, ಕ್ಯೂಆರ್ ಕೋಡ್ ಮೂಲಕ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಲು ಅಗತ್ಯ ವ್ಯವಸ್ಥೆ ಮಾಡಲಾಗಿದೆ. ಸರಕು ಸಾಗಣೆ ವಾಹನಗಳಲ್ಲಿ ಎಲ್‌ಇಡಿ ವ್ಯವಸ್ಥೆ, ಶಾಲಾ ಕಾಲೇಜುಗಳು, ಟ್ಯೂಷನ್ ತಾಣಗಳು, ಬಸ್ ನಿಲ್ದಾಣಗಳು, ಮಾಲ್‌ಗಳಲ್ಲಿ ಮತದಾನದ ಬಗ್ಗೆ ಅರಿವು ಮೂಡಿಸುವ ಉದ್ದೇಶ ಹೊಂದಲಾಗಿದೆ’ ಎಂದು ರಕ್ಷಾ ರಾಮಯ್ಯ ತಿಳಿಸಿದರು.

‘ವಿಧಾನಸಭಾ ಚುನಾವಣೆಯಲ್ಲಿ ಆಯೋಜಿಸಿದ್ದ ಯುವ ಮತ ಅಭಿಯಾನಕ್ಕೆ ಉತ್ತಮ ಸ್ಪಂದನೆ ಸಿಕ್ಕಿತ್ತು. ಶೇ 42ರಷ್ಟು ಯುವ ಮತದಾರರ ಸೆಳೆಯಲು ಸಾಧ್ಯವಾಗಿತ್ತು. ಈಗ ಪ್ರಚಾರ ವಾಹನಗಳು ರಾಜ್ಯದಾದ್ಯಂತ ಸಂಚರಿಸಲಿದ್ದು, ಅರಿವು ಮೂಡಿಸಲಾಗುವುದು ಎಂದರು.

ಯುವ ಕಾಂಗ್ರೆಸ್‌ನ ‘ಪೆಹಲಾ ಓಟ್’ ಅಭಿಯಾನಕ್ಕೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಂ.ಎಸ್. ರಕ್ಷಾ ರಾಮಯ್ಯ ಇದ್ದರು

ಮುಖ್ಯಾಂಶಗಳು

- ಅಭಿಯಾನಕ್ಕೆ ಚಾಲನೆ ನೀಡಿದ ಸಚಿವ ಕೃಷ್ಣ ಬೈರೇಗೌಡ
- ಕ್ಯೂಆರ್ ಕೋಡ್ ಮೂಲಕ ಮತದಾರರ ಪಟ್ಟಿಗೆ ಹೆಸರು ನೋಂದಣಿ

‘ವಿಲೇಜ್ ಕ್ಲಿನಿಕ್’ ಸುವರ್ಣ ಮಹೋತ್ಸವ ಇಂದು

ಬೆಂಗಳೂರು: ಡಾ.ಬಿ.ರಮಣ ರಾವ್ ಅವರ ‘ವಿಲೇಜ್ ಕ್ಲಿನಿಕ್’ನ ಸುವರ್ಣ ಮಹೋತ್ಸವ ಸಮಾರಂಭವನ್ನು ಭಾನುವಾರ ಬೆಳಿಗ್ಗೆ 10 ಗಂಟೆಗೆ ಟಿ. ಬೇಗೂರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಯಾಗಿ ಗೃಹ ಸಚಿವ ಜಿ. ಪರಮೇಶ್ವರ್ ಪಾಲ್ಗೊಳ್ಳಲಿದ್ದಾರೆ. ಹೃದ್ರೋಗ ತಜ್ಞ ರಮಣ ರಾವ್ ಅವರು ಪ್ರತಿ ಭಾನುವಾರ ಈ ಕ್ಲಿನಿಕ್ ಮೂಲಕ ಉಚಿತ ವೈದ್ಯಕೀಯ ಶಿಬಿರ ನಡೆಸುತ್ತಿದ್ದು, ಈ ಕಾರ್ಯ ಐದು ದಶಕಗಳನ್ನು ಪೂರೈಸಿದೆ.

ಇದುವರೆಗೂ ಎರಡು ದಶಲಕ್ಷಕ್ಕೂ ಹೆಚ್ಚು ಪ್ರಕರಣಗಳಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗಿದೆ. 5 ಸಾವಿರಕ್ಕೂ ಹೆಚ್ಚು ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಪ್ರಾಯೋಜಿಸಿದೆ. ರೋಗಿಗಳಿಗೆ ಔಷಧಗಳ ಜತೆಗೆ ಮಧ್ಯಾಹ್ನ ಊಟವನ್ನೂ ಒದಗಿಸಲಾಗುತ್ತಿದೆ. ಹಿರಿಯ ನಾಗರಿಕರಿಗೆ ವಾಕಿಂಗ್ ಸ್ಟಿಕ್‌ಗಳನ್ನೂ ವಿತರಿಸಲಾಗಿದೆ. ಸುತ್ತಮುತ್ತಲಿನ ಹಳ್ಳಿಗಳಲ್ಲಿನ ಮನೆಗಳಿಗೆ ಸುಮಾರು 700 ಶೌಚಾಲಯಗಳನ್ನೂ ನಿರ್ಮಿಸಿಕೊಡಲಾಗಿದೆ. ಶಾಲೆಗಳಿಗೆ ಸಮವಸ್ತ್ರ, ಅಧ್ಯಯನ ಸಾಮಗ್ರಿ ಹಾಗೂ ಮೂಲಸೌಕರ್ಯಗಳನ್ನು ಒದಗಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಡಾ.ಬಿ. ರಮಣ ರಾವ್

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕುಂಬಾರನಹಳ್ಳಿ, ಬಗ್ಗನದೊಡ್ಡಿ, ಜಿಗಣಿ ವಿದ್ಯುತ್ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾಮಗಾರಿ ನಡೆಯಲಿದ್ದು ಆ.13ರಂದು ಬೆಳಿಗ್ಗೆ 10ರಿಂದ 3ರವರೆಗೆ ಕೆಳಕಂಡ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ಜಿಗಣಿ ಕೈಗಾರಿಕಾ ಪ್ರದೇಶ, ಇಂಡ್ಲವಾಡಿ, ಬಗ್ಗನದೊಡ್ಡಿ, ಕಾಡುಜಕ್ಕನಹಳ್ಳಿ, ಕುಂಬಾರನಹಳ್ಳಿ, ಹಾರಗದ್ದೆ, ಜಿಗಣಿ ಸುತ್ತಮುತ್ತಲ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಬೆಸ್ಕಾಂ ಚಂದ್ರಾಪುರ ವಿಭಾಗದ ಕಾರ್ಯ ನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಫ್ರೀಡಂ ರನ್: ಆಯೋಜನೆ: ಜಿಯೋ ಮಾರ್ಟ್, ಸ್ಥಳ: ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್, ಹಲಸೂರು, ಬೆಳಿಗ್ಗೆ 6ರಿಂದ

ವಾರ್ಷಿಕೋತ್ಸವ ಹಾಗೂ ಬಸವ ಜಯಂತ್ಯುತ್ಸವ: ಸಾನ್ನಿಧ್ಯ: ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ: ಬಿ.ಎ.ಬಸವರಾಜ, ಅಧ್ಯಕ್ಷತೆ: ಎಂ.ಸೋಮಶೇಖರ್, ಅತಿಥಿಗಳು: ಈಶ್ವರ್ ಬಿ. ಖಂಡ್ರೆ, ಲಕ್ಷ್ಮಿ ಆರ್. ಹೆಬ್ಬಾಳ್ಕರ್, ಡಿ.ಕೆ.ಮೋಹನ್, ಆಯೋಜನೆ: ವೀರಶೈವ ಲಿಂಗಾಯತ ಯುವಕರ ಸಂಘ, ವೀರಶೈವ ಮಹಿಳಾ ಸಮಾಜ, ಸ್ಥಳ: ಎಂ.ಟಿ.ಬಿ. ಶುಭಮೇರು ಕಲ್ಯಾಣ ಮಂಟಪ, ಕೃಷ್ಣರಾಜಪುರ, ಬೆಳಿಗ್ಗೆ 10.

ಸಮ್ಮಿಲನ ವಾರ್ಷಿಕ ಕ್ರೀಡಾಕೂಟ-2023, ಉತ್ತರ ಕನ್ನಡ ಭವನ ಸಂಪರ್ಕ ರಸ್ತೆ, ನವೀಕೃತ ವಿಭಾಗದ ಉದ್ಘಾಟನೆ: ಕೆ. ಗೋಪಾಲಯ್ಯ, ಅತಿಥಿಗಳು: ಜೀವನ ಕುಮಾರ್, ಗಾಂವಕರ, ಅಧ್ಯಕ್ಷತೆ: ಅರವಿಂದ ನಾಯಕ, ಆಯೋಜನೆ: ಉತ್ತರ ಕನ್ನಡ ಸಂಘ, ಸ್ಥಳ: ಕನ್ನಡ ಭವನ, ನಂದಿನಿ ಬಡಾವಣೆ, ಬೆಳಿಗ್ಗೆ 10.

ಕನ್ನಡ ಕಾರ್ಯಕರ್ತರ ಕಮ್ಮಟ: ಉದ್ಘಾಟನೆ: ದೊಡ್ಡರಂಗೇಗೌಡ, ಅತಿಥಿ: ಸಂತೋಷ ಹಾನಗಲ್ಲ, ಅಧ್ಯಕ್ಷತೆ: ಎಂ.ಪ್ರಕಾಶಮೂರ್ತಿ, ಮಾತು ಮಂಥನ: ಎಲ್.ಎನ್. ಮುಕುಂದರಾಜ್, ಅರುಣ್ ಜಾವಗಲ್, ಕೆ.ಎಂ. ಚೈತನ್ಯ, ಪೂರ್ಣಿಮಾ ಎಸ್., ಆಯೋಜನೆ ಮತ್ತು ಸ್ಥಳ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಾಲಯ, ಶ್ರೀಕೃಷ್ಣರಾಜ ಪರಿಷತ್ತು ಮಂದಿರ, ಚಾಮರಾಜಪೇಟೆ, ಬೆಳಿಗ್ಗೆ 10.



ದೊಡ್ಡರಂಗೇಗೌಡ

ಸರ್ವ ಸದಸ್ಯರ ಮಹಾಸಭೆ, ಪ್ರತಿಭಾ ಪುರಸ್ಕಾರ: ಆಯೋಜನೆ: ಆರುವೇಲು ನಿಯೋಗಿ ಬ್ರಾಹ್ಮಣ ಸಂಘ, ಸ್ಥಳ: ಗಂಜಾಂ ಮಂಟಪ, ಬುಲ್ ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮದ ಹತ್ತಿರ, ಬೆಳಿಗ್ಗೆ 10.

ಆಜಾದಿ ಕಾ ಜಶ್ನ: ಉದ್ಘಾಟನೆ: ಶೇಖರ್ ನಾಯಕ್, ಅತಿಥಿಗಳು: ರವಿ ಮುನಿಸ್ವಾಮಿ, ಸಂಜಯ್, ಆಯೋಜನೆ: ಅನುಬಂಧ ಫೌಂಡೇಷನ್, ಸ್ಥಳ: ಭಾರತ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಭವನ, ಅರಮನೆ ರಸ್ತೆ, ಬೆಳಿಗ್ಗೆ 10.30.

ಕೆ.ಸಿ.ರಾಮಮೂರ್ತಿ ಅವರ ‘ಮನದಾಳ-1’ ಪುಸ್ತಕ ಬಿಡುಗಡೆ: ಆಯೋಜನೆ: ಸಿಎಂಆರ್ ವಿಶ್ವವಿದ್ಯಾಲಯ, ಅಭಿಮಾನಿ ಪ್ರಕಾಶನ, ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯ, ಕಲ್ಯಾಣನಗರ, ಬೆಳಿಗ್ಗೆ 10.30.

‘ಇಂದಿರಾ ಹಾಗೂ ನಾರಾಯಣದಾಸ್’ ದತ್ತಿ ಸಂಗೀತ ಕಾರ್ಯಕ್ರಮ: ಗಾಯನ: ಅನನ್ಯ ರವಿಕಿರಣ, ತಬಲಾ: ಕೌಶಿಕ ಭಟ್ಟ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ‘ಗಾಯನ ಮತ್ತು ಕೊಳಲು’ ಜುಗಲ್ಬಂದಿ: ಗಾಯನ: ಸಿದ್ಧಾರ್ಥ ಬೆಳ್ಮಣ್ಣು, ಷಡಜ್ ಗೋಡ್ಖಿಂಡಿ, ತಬಲಾ: ರೂಪಕ ಕಲ್ಲೂರಕರ್, ಹಾರ್ಮೋನಿಯಂ: ಗೌರವ್ ಗಡಿಯಾರ, ಆಯೋಜನೆ: ಸಪ್ತಕ, ಸ್ಥಳ: ನ್ಯೂ ಕಾನ್ಫರೆನ್ಸ್ ಹಾಲ್, ಎಂ.ಇ.ಎಸ್. ಕಾಲೇಜು, ಎಂ.ಪಿ.ಎಲ್., ಶಾಸ್ತ್ರಿ ರಸ್ತೆ, ಮಲ್ಲೇಶ್ವರ, ಸಂಜೆ 5.30.

ಅನನ್ಯ ರವಿಕಿರಣ

‘ಸಿತಾರ್’ ಬೈಠಕ್: ಜ್ಯೋತಿ ಶ್ಯಾಮ್ ಮತ್ತು ತಂಡ, ಗುರುನಂದನ್ ಗೋಪಿನಾಥ್, ಆಯೋಜನೆ: ಸ್ವರ ಸುರಭಿ, ಸ್ಥಳ: ದಿ ಎನರ್ಜಿ ಆ್ಯಂಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್, ದೊಮ್ಮಲೂರು 2ನೇ ಹಂತ, ಬೆಳಿಗ್ಗೆ 10.30.

ಸ್ವಾತಂತ್ರ್ಯೋತ್ಸವ ಕವಿಗೋಷ್ಠಿ, ಗೀತಗಾಯನ, ಪ್ರಶಸ್ತಿ ಪ್ರದಾನ: ವಿ. ರೇಣುಕಾಪ್ರಸನ್ನ, ಅಧ್ಯಕ್ಷತೆ: ಬಿ. ಶೃಂಗೇಶ್ವರ್, ಅತಿಥಿಗಳು: ವಿ.ಟಿ. ರಾಮಕೃಷ್ಣಯ್ಯ, ಕೆ.ವಿ. ರಾಜೇಶ್ವರಿ, ಉಪಸ್ಥಿತಿ: ಕುವರ ಯಲ್ಲಪ್ಪ, ಪ್ರಶಸ್ತಿ ಪುರಸ್ಕೃತರು: ಉಷಾ ಬಸಪ್ಪ, ಜಿ.ಲೀಲಾ ಗುರುರಾಜ್, ಆರ್. ಶಾಂತಿ, ಬಾಪೂಗೌಡ ಪಾಟೀಲ, ಬಿ.ಎಲ್. ಶ್ರೀನಿವಾಸ್, ಎಸ್. ರಾಹುಲ್, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಸಂತ ಸಮಾವೇಶ: ಆಯೋಜನೆ: ವಿಶ್ವ ಹಿಂದೂ ಪರಿಷತ್, ಸ್ಥಳ: ರಾಮಾನುಜ ಸಂಸ್ಕೃತಿ ಭವನ, ಯತಿರಾಜ ಮಠದ ಆವರಣ, ಮಲ್ಲೇಶ್ವರ, ಬೆಳಿಗ್ಗೆ 10.30

ಎಂ.ಚಿದಾನಂದಮೂರ್ತಿ, ಫಾದರ್ ಸ್ಟಾನಿ ಬ್ಯಾಪ್ಟಿಸ್ಟ್ ಸ್ಮರಣಾರ್ಥ ‘ಕರ್ನಾಟಕ ಭೂಷಣ’ ಪ್ರಶಸ್ತಿ ಪ್ರದಾನ: ಹಿ.ಚಿ. ಬೋರಲಿಂಗಯ್ಯ, ಅಧ್ಯಕ್ಷತೆ: ರಾ.ನಂ.ಚಂದ್ರಶೇಖರ, ಅತಿಥಿಗಳು: ಫಾದರ್ ಜೆಡ್ ಪ್ರದೀಪ್ ಕುಮಾರ್, ವ.ಚ. ಚನ್ನೇಗೌಡ, ರಫಾಯಲ್ ರಾಜ್, ಪ್ರಶಸ್ತಿ ಪುರಸ್ಕೃತರು: ನಾ. ಶ್ರೀಧರ್, ಎಲ್. ಶಿವಶಂಕರ್, ಜೆಸಿಂತ ಪ್ರಕಾಶಪ್ಪ, ಅಂತೋನಿ ಪ್ರಸಾದ್, ಆಯೋಜನೆ: ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘ, ಸ್ಥಳ: ಸಂತ ತೇರೆಸಾ ಚರ್ಚ್ ಮಿನಿ ಸಭಾಂಗಣ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

‘ಜಶ್ನ-ಎ-ಅದಬ್’ ಕಲ್ಚರಲ್ ಕಾರವಾನ್: ಕಥಕ್ ನೃತ್ಯ: ಅರ್ಪಿತಾ ಬ್ಯಾನರ್ಜಿ ಮತ್ತು ತಂಡ, ‘ಸಮಾಜದ ಮೇಲೆ ಪ್ರಾದೇಶಿಕ ರಂಗಭೂಮಿ ಮತ್ತು ಭಾಷೆಗಳ ಪ್ರಭಾವ’ ಕುರಿತು ಸಂವಾದ: ಅಶೋಕ ಚಕ್ರಧರ್, ಪ್ರಕಾಶ್ ಬೆಳವಾಡಿ, ಫೈಸಲ್ ಮಲಿಕ್, ಸೂಫಿ ಸಂಗೀತ: ಖನಕ್ ಜೋಶಿ ಮತ್ತು ತಂಡ, ಆಯೋಜನೆ: ಜಶ್ನ-ಅದಬ್, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆಂಪೇಗೌಡ ರಸ್ತೆ, ಮಧ್ಯಾಹ್ನ 3.

ಸಂಗೀತ ಕಾರ್ಯಕ್ರಮ: ವೀಣೆ: ವೈ.ಜಿ.ಶ್ರೀಲತಾ, ಮೃದಂಗ: ಅಕ್ಷಯ್ ಆನಂದ್, ಘಟ: ಶರತ್ ಕೌಶಿಕ್, ಆಯೋಜನೆ: ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5.

ಭರತನಾಟ್ಯ ರಂಗಪ್ರವೇಶ: ಜಯಶೀಲಾ ವಿನೋದ್, ಉಪಸ್ಥಿತಿ: ಎಂ.ಸೂರ್ಯ ಪ್ರಸಾದ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಎನ್. ಮಂಜುಳಾ, ಎ.ಎನ್. ಸುಧೀರ್ ಕುಮಾರ್, ಅನುರಾಧ ವಿಕ್ರಾಂತ್, ಆಯೋಜನೆ: ಜಯಾ ಫೌಂಡೇಷನ್, ಸ್ಥಳ: ಪ್ರಭಾತ ಜೆಎನ್‌ಸಿಎಎಸ್‌ಆರ್ ಸಭಾಂಗಣ, ಜವಹರಲಾಲ್ ನೆಹರೂ ಸೆಂಟರ್, ಜಕ್ಕೂರು, ಸಂಜೆ 5.

‘ಮೈಕೊ ಶಿವಣ್ಣ ನೆನಪು’ ತತ್ವಪದ ಗಾಯನ, ರಂಗಾಭಿನಂದನೆ: ಅಧ್ಯಕ್ಷತೆ: ಎನ್.ಆರ್. ಹೆಗಡೆ, ಅತಿಥಿಗಳು: ಬಿ.ಎಸ್.ನಾಗರಾಜ್, ಎಸ್. ಜಿ. ಸಿದ್ಧರಾಮಯ್ಯ, ಆರ್.ಕೆ.ಹೆಗಡೆ, ಮೈಕೊ ಶಿವಣ್ಣ ನೆನಪು: ಶ್ರೀನಿವಾಸ್ ಜಿ. ಕಪ್ಪಣ್ಣ, ಎಂ.ಪ್ರಕಾಶಮೂರ್ತಿ, ಕುವೆಂಪು ಪ್ರಕಾಶ್, ಆರ್. ನರೇಂದ್ರ ಬಾಬು, ಮೂಡ್ನಾಕೂಡು ಚಿನ್ನಸ್ವಾಮಿ, ಸುಬ್ಬು ಹೊಲೆಯಾರ್, ‘ಮಾತಾ’ ನಾಟಕ ಪ್ರದರ್ಶನ, ಆಯೋಜನೆ: ಲಯನ್ಸ್ ಇಂಟರ್ ನ್ಯಾಷನಲ್ ಜಿಲ್ಲೆ 317ಎಫ್, ರಂಗಚಂದಿರ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5.



ಎಸ್.ಜಿ. ಸಿದ್ಧರಾಮಯ್ಯ

ರಾಮೇಶ್ವರಂ ಕೆಫೆಯಲ್ಲಿ ನಿತ್ಯವೂ ಮೊಳಗಲಿದೆ ರಾಷ್ಟ್ರಗೀತೆ

ಸ್ವಾದಿಷ್ಟ ರುಚಿಗೆ ‘ಜನ ಗಣ ಮನ’

ಜೆ.ಪಿ.ನಗರದ ರಾಮೇಶ್ವರಂ ಕೆಫೆಯಲ್ಲಿ ಸಿಬ್ಬಂದಿಯಿಂದ ರಾಷ್ಟ್ರಗೀತೆ ಗಾಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರುಚಿಯಾದ ತಿನಿಸುಗಳನ್ನು ಸಿದ್ಧಪಡಿಸಲು ದೇಶದ ವಿವಿಧೆಡೆಯಿಂದ ಬಂದಿರುವ ಬಾಣಸಿಗರು ಇಲ್ಲಿದ್ದಾರೆ. ಮುಂಜಾನೆ 3 ಗಂಟೆಯಿಂದಲೇ ಕಾರ್ಯಪ್ರವೃತರಾಗುವ ಇವರು, ಬೆಳಿಗ್ಗೆ 6 ಗಂಟೆಯಾಗುತ್ತಿರುವಂತೆ ಒಟ್ಟಾಗಿ ರಾಷ್ಟ್ರಗೀತೆ ಹಾಡುತ್ತಾರೆ. ಬಳಿಕ ಸಿದ್ಧಪಡಿಸಿದ ಸ್ವಾದಿಷ್ಟಕರ ಆಹಾರ ವಿತರಿಸಲು ಪ್ರಾರಂಭಿಸುತ್ತಾರೆ.

ರಾಮೇಶ್ವರಂ ಕೆಫೆಗಳಲ್ಲಿ ಇದು ನಿತ್ಯದ ನೋಟ. ನಗರದಲ್ಲಿ 4 ಶಾಖೆಗಳನ್ನು ಹೊಂದಿರುವ ಈ ಕೆಫೆ, ಶುಚಿಯಾದ ತಿನಿಸುಗಳ ಮೂಲಕ ಅಲ್ಪಾವಧಿಯಲ್ಲಿಯೇ ನಗರದ ಆಹಾರ ಪ್ರಿಯರ ಮೆಚ್ಚುಗೆಗೆ ಪಾತ್ರವಾಗಿದೆ. ಕೆಫೆ ಕಾರ್ಯ ಬೆಳಿಗ್ಗೆ 6.30ರಿಂದ ಆರಂಭವಾಗಲಿದೆ. ಅದಕ್ಕೂ ಮೊದಲು, ಬೆಳಿಗ್ಗೆ 6 ಗಂಟೆಗೆ ಧ್ವನಿವರ್ಧಕದಲ್ಲಿ ರಾಷ್ಟ್ರಗೀತೆ ಮೊಳಗಲಿದೆ. ಎಲ್ಲ ಸಿಬ್ಬಂದಿ, ವಾಯುವಿಹಾರಿಗಳು ಧ್ವನಿಗೂಡಿಸುತ್ತಾರೆ.

2021ರಲ್ಲಿ ರಾಘವೇಂದ್ರ ರಾವ್ ಹಾಗೂ ದಿವ್ಯಾ ರಾಘವೇಂದ್ರ ರಾವ್ ಅವರು ಇಲ್ಲಿ ಎರಡು ಕೇಂದ್ರ ಪ್ರಾರಂಭಿಸಿದ್ದರು. ಸದ್ಯ ಇಂದಿರಾನಗರ, ಜೆ.ಪಿ.ನಗರ, ವೈಟ್‌ಫೀಲ್ಡ್ ಹಾಗೂ ರಾಜಾಜಿನಗರದಲ್ಲಿ ಈ ಕೆಫೆಯಿದೆ. ಈ ಕೇಂದ್ರಗಳು ಪ್ರಾರಂಭವಾದ ದಿನದಿಂದಲೂ ನಿತ್ಯ ರಾಷ್ಟ್ರಗೀತೆ ಹಾಡಲಾಗುತ್ತಿದ್ದು, ಎಲ್ಲಾ ಸಿಬ್ಬಂದಿ ಕಡ್ಡಾಯವಾಗಿ ಹಾಜರಾಗಬೇಕಿದೆ. ಇದಕ್ಕೆ ವಾಯುವಿಹಾರಿಗಳು, ಸ್ಥಳೀಯರಿಂದ ಮೆಚ್ಚುಗೆ ವ್ಯಕ್ತವಾಗಿದೆ.

‘ಏಕತೆ, ರಾಷ್ಟ್ರಪ್ರೇಮ ಮೂಡಿಸುವ ಉದ್ದೇಶ’

‘ನಮ್ಮಲ್ಲಿ ಉತ್ತರ ಭಾರತದ ಸಿಬ್ಬಂದಿಯೂ ಇದ್ದಾರೆ. ಸಿಬ್ಬಂದಿಯಲ್ಲಿ ಏಕತೆ ಹಾಗೂ ರಾಷ್ಟ್ರಪ್ರೇಮ ಮೂಡಿಸುವ ಉದ್ದೇಶದಿಂದ ರಾಷ್ಟ್ರಗೀತೆ ಹಾಡಲಾಗುತ್ತದೆ. ರಾಷ್ಟ್ರಗೀತೆ ಮೊಳಗುವ ವೇಳೆ ಗ್ರಾಹಕರು ಕೂಡಾ ನಿಂತು, ಗೌರವ ಸಲ್ಲಿಸುತ್ತಾರೆ’ ಎಂದು ರಾಮೇಶ್ವರಂ ಕೆಫೆಯ ಜೆ.ಪಿ.ನಗರದ ಫ್ರಾಂಚೈಸಿಯ ಮಾಲೀಕರಾದ ನಾಗರಾಜ್ ಬಿ. ಅವರು ತಿಳಿಸಿದರು.

‘ನಾಲ್ಕು ಕೆಫೆಗಳಿಂದ 500ರಿಂದ 600 ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ’ ಎಂದು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Drivers

WANTED EXPERIENCED Water Tanker DRIVERS/ HELPERS in Bangalore. Contact immediately. Phone: 9448171416

Teachers/ Professors

HARWARD Group of Institutions
Dasanapura, Tumkur Road, Bangalore North - 562123
WANTED
Integrated Faculties for PU College
Physics -NEET, JEE Level
TGT for CBSE School Mathematics M.Sc, B.Ed 5 years of experience.
Physical Director-M.P.Ed
Computer Science M.Sc, MCA
Marketing Executives -any Degree 3 yrs of Experience in Marketing Field
Please send CV to infoharwardints@gmail.com
9880112833
9945230286

HINDI TEACHER Qualified for High School (P.T/F.T) WhatsApp 9353111888. Walk-in 11am-2pm BARIS HIGH SCHOOL, Haines Road, Near Coles Park.

JSPU COLLEGE
REQUIRES
Lecturers in Mathematics, Computer Science & Sanskrit
Trained Post Graduates in the respective subjects with experience in teaching.
Mail to:info@jspuc.com
Apply within a week
198, Balagangadhara Nagar, Near Kengunte Signal, Mallathahalli, Bengaluru-560056
Ph No: 080-23218381, 8884666558

SRI AHAM AATHMA VIDYALAYA- [ICSE/State], Gruhalakshmi layout, Nagasandra post, Peenya Dasarahalli, Bangalore-73 requires Maths, English, Social, Computer & PT TEACHERS to Teach Primary/ High-School. Also COMPUTER OPERATOR. Offers Attractive Salary. "Transportation provided" Call 9880200172, 9663778869 Email: sriaavapplic@gmail.com

ELITE PUBLIC SCHOOL Kempe Gowda Layout Laggere Bangalore requires BA, B.Ed, MSc(Phy) B Ed, MSc(Bio) B.Ed Qualified Teachers. 9447727526/ 9980200444

KRJS GROUP OF INSTITUTIONS
#1, Mahayogi Vemana Road, 3rd Block, Koramangala, Bengaluru - 560034
REQUIRES
VEMANA INSTITUTE OF TECHNOLOGY
a) **PROFESSORS:** CSE -1, ECE -2, AI & ML -1
b) **ASSOCIATE PROFESSOR:** CSE - 4, ECE - 3, AI & ML - 1, CIVIL - 2, ISE - 3
c) **ASSISTANT PROFESSORS:** ECE -1, ISE-1, AI & ML-2, Civil - 1, Chemistry -2, Physiotherapy -2
d) **LAB INSTRUCTORS:** CSE - 1, CIVIL -1, ECE -1, Chemistry- 1, Instructor Mechanical Department - 1. System Engineer - 1 and Polytechnic -1
RJS & INSTITUTE OF MANAGEMENT STUDIES
1. **Assistant Professor (HRD) - 1** (Preferably SC/ST)
2. **System Analyst - 1** (Preferably SC/ST).
CJR RJS Marathalli: CS Dept. : Lecturer- 1, Lab Asst -1
RJS Evening College: Principal -1.
DBM & RJS School : Principal -1, Hindi Teacher -1
KRJS HEAD OFFICE
Project Civil Engineer -1, Civil Engineer - 2, Accounts Officer -1, Store Keeper -1, Accountant - 2, Office Superintendents - 3, FDC- 4, SDC - 3, Attenders -3. PA to Principal -1, Male Warden -1, PT Master - 2
Salary as per KRJS/AICTE norms.
Apply within 7 days to:
The General Secretary, Karnataka Reddyjana Sangha
for more details:
E-Mail : krjsestablishment@gmail.com
website: www.reddyjanasangha.org.
Contact : 9901801138 or 080-25534194

General

JOB FAIR FOR SENIOR CITIZENS
Nightingales Medical Trust organizes a free job fair for recently retired persons between 55-70 years, physically fit and interested to work. To be held on Sunday, 20th August at St. Joseph's University, Langford Town, from 10:00am to 4:00pm.
Visit: www.nightingalesjobs60plus.com or call 9243737214 for more details.
Employers willing to employ seniors are most welcome.

ಹೋಟೆಲ್ ಕೆಂಚಾಂಬ
ಕ್ಯಾಶಿಯರ್ ಕೆಲಸಕ್ಕೆ ಬೇಕಾಗಿದ್ದಾರೆ. ಪದವಿದರರಾಗಿರಬೇಕು ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು. ವಸತಿ ಸೌಲಭ್ಯವಿದೆ.
ಸಂಪರ್ಕಿಸಿ: 8970283227
ಇಮೇಲ್: hotelkenchamba@hotmail.com

WANTED QUALIFIED & Experienced SUB EDITOR, CHIEF REPORTER, CANVASSERS, REPRESENTATIVES, POEN (Male/Female) Contact: 9448175385

MEDICO-PASTORAL ASSOCIATION, Bangalore requires 1.RESIDENTIAL NURSE, 2.FACILITY SUPERVISOR, 3.NURSING ATTENDANT. Please apply giving experience & salary expected to medicopastoralassociation@gmail.com before 21/08/2023

Hospital & Medical Jobs

"REQUIRED GRADUATE RECEPTIONIST 2-3years experience Male candidates for_Night-shift @"Shekhar Hospital", Bull_temple Road, Bangalore-19. Attractive salary offered.Call: 08022421144/ 9901927970/ 9740005750"

IT

A PUBLIC Limited Company Registered office in Margoa, GOA Requires IT & NETWORK EXECUTIVE (Male)- Young, Dynamic, age group of 25-35 years Experience: 3-5 years in IT Profession with adequate software skills. Qualification: BCA/ MCA. Placement at Bangalore Unit, Karnataka Send your resume with passport size photo to Email: hraoffice2023@gmail.com

Multiple Vacancy

OPPORTUNITY OF Career and Income for Retired Officals, Bankers, Teachers, CAs, Professionals, Homemakers. Call: 8095301555

POM Systems & Services Pvt. Ltd. **JOB OPPORTUNITIES**
25 Years Old Bangalore based Pioneers in Power Electronics and Solar Power Products requires the experienced Sales Personnel for Solar Panels, Solar Inverters etc for their Bangalore Branch at J C Road.
MANAGER MARKETING
5 to 6 years experience in Selling Solar Power Products.
ASSISTANT MANAGER
2 to 3 years experience in Selling Solar Power Products.
MARKETING EXECUTIVES
2 to 3 years experience in Selling Solar Power Products.
Call: 96633 70222
E-mail: info@pompower.in

Hotel

WANTED FOR Vegetarian Restaurant at Bommasandra IA Bangalore- COOKS, ASSISTANTS, SUPERVISOR, BUSINESS DEVELOPMENT PERSONEL, Accommodation available. Contact: 97418-6278 Email: cafemythri@gmail.com

Marketing & Sales

REQUIRED FIELD_EXECUTIVES to_monitor_OOH Medias Hoarding, Bus-shelters,etc. Bangalore`City every week.Candidates must have`Two-wheeler and driving`License Desktop/Laptop and basic_Computer knowledge. Qualification required 12th pass.Salary Rs.16000+4000 petrol allowance Contact 09322132386 hari.timeoutdoor.ops@gmail.com www.timeoutdoormonitoring.com

MBC CORP looking for marketing executives office boys ,businesss development executives ,drivers call 7022643567 email wintreat @gmail.com

REAL ESTATE SELLING

Sites

Banashankari

30x40 SITE SALE

BSK 6th STAGE, 10th BLOCK, BDA NORTH FACING, PLOT FOR SALE 30X40, 1st ALLOTTE, CLEAR TITLE. Rs. 90 Lac, Negotiable 8088799686, 9611105595

BANASHANKARI 6TH Stage Kodipalya, Near Kengeri Metro Station. 27.50x40 Site, East, 6,000/- Negotiable. 9148914809, 9740075563.

BANASHANKARI 6TH Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

SALE BSK 6th stage 10 Block 30x40 North Facing 80Lakh also 40x60 East Facing 4th Block 2Cr and 20x30 48lakh Negotiable 9945373839, 9620041313

SITE FOR sale 30X40 East facing at Banashankari 5th Stage And Banashankari 6th Stage 20X30 Good Location 9448050035

'AVAILABLE 'AND Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

BANASHANKARI 6TH Stage 5th Block North East Corner 850 Square feet BDA Action Site For Sale Price, 60 lakhs negotiable. Contact: 9845298419

Gnanabharathi

BD30X40 OWNER Site sale Jnanabharathi Layout, Behind Bangalore University, Near Chitrakoota School Nagadevanahalli. 9742681666

Hebbal

NTI SOCIETY Shantivana BDA Approved Site Near Astar Hospital Hebbal North 1350sft Price:13,000 sft, 7829203369

Jalahalli

SITES FOR SALE BAGALGUNTE, DC CONVERTED, BUILT TO SUITABLE VILLAS, NEAR BY NAGASANDRA METRO: 6364565657

J P Nagar

J.P.NAGAR_2ND 60x65`North East-corner 40'Road 93600000/,`120x65, 3 Side`Road 18,00,00000/-, 3rd`near Mini`Forest 47x57- 6,5000000/, 40x58 North`facing 5,5700,000/- 9740292904

SALE BDA JPNAGAR 8th phase 2nd Block 40x60 west Facing Commercial site Rate 11250/-sft. 9620041313, 9945373839

JPNAGAR 8TH Phase, Royal County BDA Site Sale, 30x50, S/F, 9000/- Negotioble: 9538680364 / 9513004587

Kanakapura Road

SALE BDA approved layout Kanaka Layout 30x40 South Facing Good location Near Kanakapura Road Rate 9000/- Negotiable. 9945373839, 9620041313

Kempegowda Layout

BDA SITES For Sale @ Kempegowda Layout 20x30, 30x40, 40x60 6363496142 9845555666

KEMPEGOWDA LAYOUT, Commercial Site for Sale, 7th Block, J Sector 50x80, 80' Road, North Facing, Kumar 9945112279

Magadi Road

BEL 1ST Stage Bharthnagar 30x50, North Facing, Rs 10500/- Per Sft, Good Location. Contact: 7411685851

Mysore

MYSORE MUDA approved 25 Sites 30X40 KHEMMANAHALLI adjacent Amruthananda sagar Mysore Hunsur road 2200/- psft. Chandru: 9844754873

Nagarabhavi

"NAGARABHAVI BDA Complex 30x40 North 40 feet Road, 20x30 East BDA Site, Immediate Registration. 9448432633"

Ramamurthy Nagar

RESIDENTIAL 30X40 W/F Sites for Sale Vigneshwara Layout, Hoysalanagar Horamavu Near Narayana School: 9448050938/ 9035304455

Rajarajeshwari Nagar

'A' KHATA Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

RMV

RMV 2ND stage BDA site sale near BEL road, north facing 22,000/- psft negotiable. 9844092859.

Tumkur Road

SALE, SITE, #555 BDA Approved W/F, 40X60 HMT Layout, Prime Location Nelagadaranahalli Nagasandra Bangalore-73 Rate:15000/- sqft. Contact OWNER 9448483407

30X40 SITE sale (2 side road) Kirloskar Layout, Hesaraghata main road, opposite Sapthagiri college. 9620480363.

Vijayanagar

SALE FOR 1700 Sqft Commercial Property Vijayanagar North East Facing, Present Rent 1lack 70,000: 7975463324

Vishweshwariah Layout

BHARATNAGAR 30X50 North Facing on 40ft Road BEL Society Site and 40x60 Good Location: 9964971895

AVAILABLE/ WANTED 20X30, 30X40, 40X60, BDA Sites. Nagarabhavi, Vishweshwariah, Banashankari, Kempegowda Layout. 'PRACONS PROPERTY' 8660356754

"40X60 RESIDENTIAL Top_Location and 50x80 Commercial BDA Sites Sale 6th_Block Vishveshwaraiah Layout- 9845143579"

30X35 NORTH Revenue Site Sale 3,800/- Negotiable- Opposite Podar International School, Near Vishveswaraiah Layout- 8105251219

VISHWESHWARAIAH LAYOUT BDA 1st Block 30x40 NF Near 100ft Road Direct Owner Good Location: 9980860138

VISHWESHWARIA BDA 6th Block 50×80 North, 80 feet road Commercial, Near KLE Law College: 7899570235

BDA 30X40 North facing Site for sale in Vishweshwaraiah layout, 1st Block, Call 9844039482

BDA 30X40 Sale Vishveshwaraiah Layout 5th Block EF & 40X60 6th KLE Opp 8200sqft Owner Meeting: 9844845864

SALE 30X40 VISHVESWARAIAH LAYOUT 4th Block South facing 78 lakh, Negotiable 9945373839, 9620041313

Mandya

40X60 NORTH, Mandya Muda Site No.2703- Sale. Vivekanandanagar 'A' Block. Rate 3,500/- Negotiable- 9731652042

Mysore Road

NORTH FACING 20x60ft site at Azadnagar, Bangalore-18, off Mysore Road for immediate sale. Contact: 9480683010. Brokers Excuse.

RIVERSIDE RESORT PROPERTY for SALE / RENT / LEASE
Location : 2 kms. from world famous JOGFALLS, Karnataka.
Premium Rooms, Boating Area, Surrounded by Lush Green Forest & Hills Just Next to River Sharavati.

CALL : 9019369350

BDA SITE 5 BHK HOUSE FOR SALE

Hosakerehalli
Lift, modular kitchen, commercial space in basement floor, Built-up: 2900 sft (Basement+Gr+3 flrs) South east corner.
Call: 7406 219 219

22,000 Sqft COMMERCIAL SPACE for JD/ SALE
Commercial Convention Suitable for Hotels/ Hospitals/ Mall & Work station.
from M.G Road 10 kms near Hennur Cross.
Land for Sale 5 to 25 acers near Nandi hills and Surrounding.
CALL: 97406 96764

CONGRATULATION

Dr. B. Sushma
D/o BYLAIAH.S
Rtd. Sr. Veterinary Inspector
Nelamangal

Phd in Advance data analysis and data mining model for Anthrax in Livestock an approach towards animal health care under the guidance of Dr.Seema.S Professor & HOD of MCA, MSRIT, Bangalore, Special guidance by Dr.Suresh K P, Principle Scientist ICAR,NIVEDI.

Best Wishess from : Jayamma, Bailaiah & Family

COMMUNITY INSTITUTE OF MANAGEMENT STUDIES (CIMS)
Affiliated to **BENGALURU CITY UNIVERSITY**, Approved by **AICTE**, New Delhi.
#2/1, Natabhairava Shri. V Vajramuni Road (9th Cross, 9th Main), 2nd Block Jayanagar, Bengaluru-560011
LOCATED IN PRIME LOCATION **NEAR ASHOKA PILLAR, JAYANAGAR, BENGALURU**

PGCET CODE: MBA – B153
PGCET CODE: MCA – C528

ADMISSIONS FOR MBA & MCA 2023

GOVERNMENT QUOTA
MBA & MCA - 2023
Any Degree Students (Even 6th Sem students) can apply or register in KEA website on / before 17th August 2023
For registration visit: www.kea.kar.nic.in
Entrance exam Date: Sunday, 10th September 2023

FREE COACHING CLASSES
CIMS is conducting FREE PGCET Coaching Classes for MBA & MCA Aspirants through Offline at CIMS Campus from 19th August 2023. Interested Students can register through Whatsapp or Website. SMS "YOUR NAME" "PGCET UPDATE" to 8884401104 or apply through online https://forms.gle/audDtEwH9bQX9qxh8

MANAGEMENT QUOTA
MBA & MCA
Admissions OPEN for 2023

FOR ADMISSION ENQUIRY CONTACT:
88844 01104 / 97310 22994 / 98863 97941 / 080 26577851
www.cimsbschool.org Email: admissions@cimsbschool.org
- Secretary

Hasiru Bhoomi Your Own Weekend Farm
CALL FOR MORE DETAILS : +91 8147873745
FARM LANDS FOR SALE IN NORTH BENGALURU
JUST 18KM FROM YELAHANKA NEW TOWN
www.hasirubhoomi.com

First Time in KR PURAM Under Water Aquarium Tunnel
NCF **ರಾಷ್ಟ್ರೀಯ ಗ್ರಾಹಕರ ಮೇಳ**
NATIONAL CONSUMER FAIR
ITI Ground, Next to Hanging Bridge, KR Puram, Bengaluru

VISIT TODAY | Daily : 4pm - 9pm | Call : 8904727123

Pranava Nrithyalaya Presents

Bharatanatya Rangapravesha of
Kum. S VIBHA
disciple of Guru Smt. Shalini Srikanth
on 13th August 2023 at 5:30 P.M at
Chowdiah Memorial Hall, Malleswaram, Bengaluru

MORE Classifieds Ads on Subsequent Pages

'ಸ್ವರಾಜ್ ಫಾರ್ ಸಿಟಿಸ್' ವಿಚಾರ ಸಂಕಿರಣದಲ್ಲಿ ಎ.ರವೀಂದ್ರ ಹೇಳಿಕೆ

'ಖಾಸಗಿ ಸಾರಿಗೆ ಮಿತ ಬಳಕೆ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರಗಳ ಸ್ಥಿತಿ, ಅಲ್ಲಿನ ಜನರ ಜೀವನಮಟ್ಟ ಸುಧಾರಣೆಯ ಜತೆಗೆ ನೀರಿನ ಸಂರಕ್ಷಣೆಗೂ ಹೆಚ್ಚಿನ ಒತ್ತು ನೀಡಬೇಕಾಗಿರುವ ಅಗತ್ಯವಿದೆ' ಎಂದು ನಿವೃತ್ತ ಐಎಎಸ್ ಅಧಿಕಾರಿ ಎ.ರವೀಂದ್ರ ಶನಿವಾರ ಅಭಿಪ್ರಾಯಪಟ್ಟರು.

'ಸ್ವರಾಜ್ ಫಾರ್ ಸಿಟಿಸ್' ಸಂಸ್ಥೆ ಏರ್ಪಡಿಸಿದ್ದ 'ಕರ್ನಾಟಕದಲ್ಲಿ ನಗರ ಆಡಳಿತ' ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಸಂಚಾರ ದಟ್ಟಣೆ ನಿಯಂತ್ರಣ, ಹವಾಮಾನ ವಿಶ್ಲೇಷಣೆ, ಕೈಗೆಟಕುವ ದರದಲ್ಲಿ ಮನೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದು ಹೇಳಿದರು.

'ಬೆಂಗಳೂರು ಸೇರಿದಂತೆ ಮಹಾನಗರಗಳಲ್ಲಿ ವಾಹನಗಳ ಸಂಚಾರದ್ದೇ ದೊಡ್ಡ ಸಮಸ್ಯೆ. ದಟ್ಟಣೆ ನಿಯಂತ್ರಣಕ್ಕೆ ಖಾಸಗಿ ಸಾರಿಗೆಯ ಮಿತ ಬಳಕೆ ಆಗಬೇಕು. ಸಮೂಹ ಸಾರಿಗೆ ವ್ಯವಸ್ಥೆಯನ್ನೇ ಹೆಚ್ಚು ಬಳಸಿದರೆ ದಟ್ಟಣೆ ನಿಯಂತ್ರಿಸಬಹುದು' ಎಂದು ಸಲಹೆ ನೀಡಿದರು.

ವಿಚಾರ ಸಂಕಿರಣದಲ್ಲಿ ಆರ್‌ವಿ ಕಾಲೇಜಿನ ವಾಸ್ತುಶಿಲ್ಪ ವಿಭಾಗದ ಬೃಂದಾ ಶಾಸ್ತ್ರಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಕಲಾ ಶ್ರೀಧರ್, ಡಾ.ವಿ.ಅನಿಲ್‌ಕುಮಾರ್, ಮ್ಯಾಥ್ಯು ಇಡಿಕುಲಾ, ಅಶ್ವಿನ್ ಮಹೇಶ್ ಇದ್ದರು

ನಗರ ಪ್ರದೇಶದಲ್ಲಿ ಹವಾಮಾನ ವಿಶ್ಲೇಷಣೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು. ನಗರದಲ್ಲಿ ಸುಧಾರಣೆ ತರಬೇಕಿದ್ದ ಇಲಾಖೆಗಳಲ್ಲಿ ಸಿಬ್ಬಂದಿ ಕೊರತೆಯಿದೆ. ಮಂಜೂರಾದಷ್ಟು ಹುದ್ದೆಗಳಿದ್ದರೆ ಸುಧಾರಣೆ ತರಲು ಸಾಧ್ಯ' ಎಂದು ಹೇಳಿದರು.

'ಸಿವಿಕ್ ಸಂಸ್ಥೆ'ಯ ಕಾರ್ಯ ನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಮಾತನಾಡಿ, 'ನಗರಗಳ ಅಭಿವೃದ್ಧಿಗೆ ಕೆಲವು ಕಾಯ್ದೆಗಳನ್ನು ಮಾರ್ಪಾಡು ಮಾಡಬೇಕಿದೆ' ಎಂದು ಸಲಹೆ ನೀಡಿದರು.

ನಗರಗಳ ಅಭಿವೃದ್ಧಿ ಪಡಿಸುವುದು ಸ್ಥಳೀಯ ಶಾಸಕರ ಜವಾಬ್ದಾರಿ. ಬೆಂಗಳೂರಿನ ಅಭಿವೃದ್ಧಿಗೆ ಬಿಬಿಎಂಪಿ ಜೊತೆಗೆ ಬಿಎಂಆರ್‌ಡಿಎ, ಬಿಡಿಎ, ಜಲಮಂಡಳಿಗಳಿವೆ. ನಗರಾಭಿವೃದ್ಧಿ ವಿಚಾರದಲ್ಲಿ ಕೆಲವೊಂದು ಸಕಾರಾತ್ಮಕ ಬದಲಾವಣೆ ತರಬೇಕಿದೆ ಎಂದು ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್.ಪಾಟೀಲ್ ಹೇಳಿದರು.

ನಗರದ ಅಭಿವೃದ್ಧಿಗೆ ಸಲಹೆ ಸಿಕ್ಕರೂ ಅವುಗಳು ಅನುಷ್ಠಾನಕ್ಕೆ ಬರುತ್ತಿಲ್ಲ. ಬೆಂಗಳೂರು ಅಭಿವೃದ್ಧಿಗೆ ಈ ರೀತಿಯ ವಿಚಾರ ಸಂಕಿರಣದಲ್ಲಿ ಹೊರಬಂದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಬೇಕಿದೆ ಎಂದರು.

ಮಾಜಿ ಸಂಸದ ಎಂ.ವಿ. ರಾಜೀವ್‌ಗೌಡ, ಸಿವಿಕ್ ಸಂಸ್ಥೆಯ ಅಧ್ಯಕ್ಷ ಡಾ.ಡಿ.ಜೀವನ್ ಕುಮಾರ್ ಇದ್ದರು.

ಕೆ.ಆರ್‌.ಪುರದಲ್ಲಿ ಜೋಸ್ ಆಲುಕ್ಕಾಸ್‌ನ ನೂತನ ಮಳಿಗೆಯನ್ನು ಬಾಲಿವುಡ್ ನಟಿ ನಿಹಾರಿಕಾ ರೈಜಾಡಾ ಉದ್ಘಾಟಿಸಿದರು. ಪಿ.ಜೆ. ಅಂತೋಣಿ ಸ್ವಾಮಿ, ಜೋಸ್ ಆಲುಕ್ಕಾಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ವರ್ಗೀಸ್ ಆಲುಕ್ಕಾ, ಪಾಲ್ ಜೆ. ಆಲುಕ್ಕಾ ಹಾಗೂ ಜಾನ್ ಆಲುಕ್ಕಾ ಇದ್ದಾರೆ.

ಫಲಪುಷ್ಪ ಪ್ರದರ್ಶನ: ₹48.95ಲಕ್ಷ ಸಂಗ್ರಹ

ಬೆಂಗಳೂರು: 'ಸ್ವಾತಂತ್ರ್ಯೋತ್ಸವ ನಿಮಿತ್ತ ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಫಲಪುಷ್ಪ ಪ್ರದರ್ಶನವನ್ನು ಶನಿವಾರ 80 ಸಾವಿರ ಜನ ವೀಕ್ಷಿಸಿದರು. ₹48.95 ಸಂಗ್ರಹವಾಗಿದೆ' ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದ್ದಾರೆ.

ವಾರಾಂತ್ಯದಲ್ಲಿ ವೀಕ್ಷಕರ ಸಂಖ್ಯೆ ಅಧಿಕವಾಗಿತ್ತು. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಜಂಗುಳಿ ಇತ್ತು.

'ಗ್ರಾಮೀಣರಿಗೂ ಗುಣಮಟ್ಟದ ವೈದ್ಯಕೀಯ ಸೇವೆ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದ್ಯಕೀಯ ಕ್ಷೇತ್ರದಲ್ಲಿ ಗುಣಮಟ್ಟವನ್ನು ಕಾಯ್ದುಕೊಂಡು, ಗ್ರಾಮೀಣ ಭಾಗಕ್ಕೂ ವೈದ್ಯಕೀಯ ಮೂಲಸೌಲಭ್ಯ ಒದಗಿಸಬೇಕು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಶನಿವಾರ ತಿಳಿಸಿದರು.

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ನಗರದಲ್ಲಿ ಹಮ್ಮಿಕೊಂಡ ವಜ್ರ ಮಹೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಆರ್ಥಿಕವಾಗಿ ಹಿಂದುಳಿದವರಿಗೆ ಕಡಿಮೆ ದರದಲ್ಲಿ ಗುಣಮಟ್ಟದ ವೈದ್ಯಕೀಯ ಸೌಲಭ್ಯ ಲಭ್ಯವಾಗಬೇಕು. ವೈದ್ಯಕೀಯ ಕ್ಷೇತ್ರದಲ್ಲಿನ ಸಂಶೋಧನೆಯ ಲಾಭ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ನಿಟ್ಟಿನಲ್ಲಿ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ಉತ್ತಮವಾದ ಕಾರ್ಯ ಮಾಡುತ್ತಿದ್ದು, ವೈದ್ಯಕೀಯ ಕ್ಷೇತ್ರಕ್ಕೆ ಕೌಶಲಯುಕ್ತ ವೈದ್ಯರನ್ನು ನೀಡುತ್ತಿದೆ' ಎಂದು ಅಭಿಪ್ರಾಯಪಟ್ಟರು.

ಸಮಾರಂಭದಲ್ಲಿ ಸಿಸ್ಟರ್ ಸಿಲಿಯಾ ಅವರಿಗೆ 'ಮೇರಿ ಗ್ಲೋವರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆ.ಜೆ. ಜಾರ್ಜ್, ಆಂಡ್ರ್ಯೂಸ್ ಥಾಜತ್, ರಾಮಲಿಂಗಾರೆಡ್ಡಿ ಬೆಂಗಳೂರು ಆರ್ಚ್ ಬಿಷಪ್ ಪೀಟರ್ ಮಚಾಡೋ ಇದ್ದಾರೆ – ಪ್ರಜಾವಾಣಿ ಚಿತ್ರ

ಇಂಧನ ಸಚಿವ ಕೆ.ಜೆ. ಜಾರ್ಜ್, 'ಕೋವಿಡ್ ಕಾಣಿಸಿಕೊಂಡ ಸಂದರ್ಭದಲ್ಲಿ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ರೋಗಿಗಳ ಚಿಕಿತ್ಸೆಗೆ ತೆಗೆದುಕೊಂಡ ಕ್ರಮ ಶ್ಲಾಘನೀಯ' ಎಂದರು.

ಭಾರತೀಯ ಕ್ಯಾಥೋಲಿಕ್ ಬಿಷಪ್‌ಗಳ ಮಹಾಸಂಸ್ಥೆಯ (ಸಿಬಿಸಿಐ) ಅಧ್ಯಕ್ಷ ಆಂಡ್ರ್ಯೂಸ್ ಥಾಜತ್, 'ಗ್ರಾಮೀಣ ಭಾಗದಲ್ಲಿ ವೈದ್ಯಕೀಯ ವ್ಯವಸ್ಥೆ ಸುಧಾರಣೆಗೆ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು ತನ್ನದೆ ಕೊಡುಗೆ ನೀಡುತ್ತಿದೆ. ಎಲ್ಲ ವೈದ್ಯಕೀಯ ಕಾಲೇಜುಗಳೂ ಗ್ರಾಮೀಣ ಭಾಗಗಳಿಗೆ ವೈದ್ಯಕೀಯ ಸೇವೆ ನೀಡಬೇಕು' ಎಂದು ಹೇಳಿದರು.

ಅಂಚೆ ಇಲಾಖೆಯ ಕರ್ನಾಟಕ ಶಾಖೆಯ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ ಎಸ್.ರಾಜೇಂದ್ರ ಕುಮಾರ್ ಅವರು ಸೇಂಟ್ ಜಾನ್ಸ್ ಚಿಹ್ನೆ ಹೊಂದಿರುವ ವಿಶೇಷ ಅಂಚೆ ಲಕೋಟೆ ಬಿಡುಗಡೆ ಮಾಡಿದರು. ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಸ್ಟರ್ ಸಿಲಿಯಾ ಅವರಿಗೆ 'ಮೇರಿ ಗ್ಲೋವರಿ-2023' ಪ್ರಶಸ್ತಿ ನೀಡಲಾಯಿತು.

ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಮೊದಲ ಮೂರು ಬ್ಯಾಚ್‌ಗಳ ವಿದ್ಯಾರ್ಥಿಗಳನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

'ಕಾರ್ಯಾಧ್ಯಕ್ಷ ಸ್ಥಾನ ನೀಡಲಿ'

ಪ್ರಜಾವಾಣಿ ವಾರ್ತೆ

ವಿ. ಸೋಮಣ್ಣ

ಬೆಂಗಳೂರು: 'ನಾನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಬೇಡಿಕೆ ಇಟ್ಟಿರುವುದು ನಿಜ. ಅದು ಸಾಧ್ಯವಾಗದಿದ್ದರೆ ಕಾರ್ಯಾಧ್ಯಕ್ಷ ಸ್ಥಾನವನ್ನಾದರೂ ಕೊಡಲಿ' ಎಂದು ಬಿಜೆಪಿ ಮುಖಂಡ ವಿ. ಸೋಮಣ್ಣ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡುವಂತೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಮಾಡಿ ಒತ್ತಾಯಿಸಿದ್ದೇನೆ. ಅವರಿಂದ ಈವರೆಗೂ ಪ್ರತಿಕ್ರಿಯೆ ಬಂದಿಲ್ಲ' ಎಂದರು.

'ನನಗೆ ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ನೀಡಿದರೆ ಮಜವೇ ಬೇರೆ ಇರುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಕಾರ್ಯಾಧ್ಯಕ್ಷರನ್ನು ನೇಮಿಸುವ ಪದ್ಧತಿ ಇದೆ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನ ಕೊಡಲಾಗದಿದ್ದರೆ ಕಾಂಗ್ರೆಸ್ ಪಕ್ಷದ ಮಾದರಿಯಲ್ಲಿ ಕಾರ್ಯಾಧ್ಯಕ್ಷ ಹುದ್ದೆಗೆ ನೇಮಕ ಮಾಡಲಿ' ಎಂದರು.

'ಸೋಮಣ್ಣ ಅವರು ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಾರೆ' ಎಂಬ ಕುರಿತು ಪ್ರತಿಕ್ರಿಯಿಸಿದ ಅವರು, '40 ವರ್ಷಗಳಿಂದ ರಾಜಕಾರಣದಲ್ಲಿ ಸಕ್ರಿಯವಾಗಿದ್ದೇನೆ. ಸುಮ್ಮನೆ ಕೂರುವವನಲ್ಲ. ಸಮಯ ಬಂದಾಗ ನೋಡೋಣ' ಎಂದರು.

'ಶೇ 15ರಷ್ಟು ಕಮಿಷನ್ ಆರೋಪ ಸುಳ್ಳು'

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಬಿಬಿಎಂಪಿ ಗುತ್ತಿಗೆದಾರರು ಮಾಡಿರುವ ಶೇ 15ರಷ್ಟು ಕಮಿಷನ್ ಆರೋಪ ಸತ್ಯಕ್ಕೆ ದೂರವಾಗಿದೆ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಬಾಲರಾಜೇಗೌಡ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಆಗುವ ಸಾಧ್ಯತೆ ಇದೆ. ಅದನ್ನು ತಪ್ಪಿಸಲು ಬಿಜೆಪಿಯವರು ಗುತ್ತಿಗೆದಾರರ ಮೂಲಕ ಕಮಿಷನ್ ಆರೋಪ ಮಾಡುತ್ತಿದ್ದಾರೆ' ಎಂದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ಯಲಹಂಕ ಗ್ರಾಮ, ಹಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಇಲ್ಲಿ ಕೆಳಗಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ (**"ಷೆಡ್ಯೂಲ್ ಪ್ರಾಪರ್ಟಿ"**) ಜಮೀನುಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ (1) ಕೃಷ್ಣಪ್ರಿಯ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್, ಕಂಪನಿಯ ನೋಂದಾಯಿತ ಕಚೇರಿ ವಿಳಾಸ ನಂ. 100/1, ಸಿಟಿ ಸೆಂಟರ್, ಟೌನ್‌ಹಾಲ್ ಎದುರು, ಜೆ.ಸಿ.ರಸ್ತೆ, ಬೆಂಗಳೂರು – 560 002 ಮತ್ತು (2) ಮೈಕ್ರೊ ಲ್ಯಾಬ್ಸ್ ಲಿಮಿಟೆಡ್, ಕಂಪನಿಯ ನೋಂದಾಯಿತ ಕಚೇರಿ ವಿಳಾಸ ನಂ. 31, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560001 (**ಸಾಮೂಹಿಕವಾಗಿ "ಮಾಲೀಕರು"**) ಇವರೊಂದಿಗೆ ಚರ್ಚೆ ಮಾಡುತ್ತಿದ್ದಾರೆ. ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ತಮ್ಮ ಹಕ್ಕು ಸ್ಪಷ್ಟವಾಗಿದೆ, ಮಾರಾಟ ಮಾಡಬಹುದಾಗಿದೆ, ಋಣಭಾರಗಳಿಂದ ಮುಕ್ತವಾಗಿದೆ ಮತ್ತು ನಮ್ಮ ಶಾಂತಿಯುತ ಸ್ವಾಧೀನತೆ ಹಾಗೂ ಅನುಭವದಲ್ಲಿರುತ್ತದೆ ಎಂದು ಪ್ರತಿ ಜಮೀನು ಭೂಭಾಗಗಳ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

'2023ರ ಜನವರಿಯಿಂದ ಜುಲೈ 28 ರವರೆಗೆ 138 ಸಿನಿಮಾಗಳು ಬಿಡುಗಡೆಗೊಂಡಿವೆ' ಎನ್ನುತ್ತಾರೆ ಕನ್ನಡ ಚಲನ-ಚಿತ್ರಗಳ ಸಾರ್ವಜನಿಕ ಸಂಪರ್ಕ ಅಧಿಕಾರಿ ವಿಜಯಕುಮಾರ್. ಜುಲೈ 21ಕ್ಕೆ ತೆರೆಕಂಡ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಈ ವರ್ಷದ ಮೊದಲ ಹಿಟ್ ಸಿನಿಮಾ. ನಂತರದ ವಾರದಲ್ಲಿ ತೆರೆಕಂಡ 'ಕೌಸಲ್ಯಾ ಸುಪ್ರಜಾ ರಾಮ', 'ನಮೋ ಭೂತಾತ್ಮ-2' ಕೂಡ ತುಸು ಭರವಸೆ ಮೂಡಿಸಿವೆ. 'ಆಚಾರ್ ಅಂಡ್ ಕೋ.' ಸಿನಿಮಾ ಕುರಿತೂ ಒಳ್ಳೆಯ ಅಭಿಪ್ರಾಯಗಳು ವ್ಯಕ್ತಗೊಂಡವು.

ಆದಾಗ್ಯೂ ಒಟ್ಟಾರೆ ಉದ್ಯಮದ ಯಶಸ್ಸಿನ ಪ್ರಮಾಣ ಶೇ 5ಕ್ಕಿಂತ ಹೆಚ್ಚಾಗಿಲ್ಲ. ಇನ್ನೇನು ಈ ಸಿನಿಮಾಗಳು ಒಂದೆರಡು ವಾರ ನೆಲೆ ನಿಲ್ಲಲಿವೆ ಎನ್ನುವ ಸಂದರ್ಭದಲ್ಲಿ ರಜನಿಕಾಂತ್ ನಟನೆಯ 'ಜೈಲರ್' ಸಿನಿಮಾ ತೆರೆಕಂಡಿತು. ಸಿಂಹಪಾಲು ಪರದೆಗಳು ಅದರ ಪಾಲಾದವು.

ಗಾಯ ವಾಸಿಯಾದರೂ, ಗಾಯದ ಗುರುತು ಕಾಡುವಂತೆ ನಿರೀಕ್ಷಿತ ಮಟ್ಟದಲ್ಲಿ ಚಿತ್ರಮಂದಿರಗಳತ್ತ ಜನರು ಸುಳಿಯುತ್ತಿಲ್ಲ. ಇಳಿಕೆಯಾದ 'ಸ್ಟಾರ್ಸ್' ಸಿನಿಮಾಗಳ ಸಂಖ್ಯೆ, ಬದಲಾದ ಜನರ ಸಿನಿಮಾ ನಿರೀಕ್ಷೆಯ ಹೊಡೆತಕ್ಕೆ ಏಕಪರದೆಗಳಷ್ಟೇ ಅಲ್ಲ, ಮಲ್ಟಿಪ್ಲೆಕ್ಸ್‌ಗಳೂ ಸಂಕಷ್ಟಕ್ಕೆ ಸಿಲುಕಿವೆ.

ಮರುಗಳಿಕೆ ಕಠಿಣ: ಹಾಕಿದ ಬಂಡವಾಳದ ಮರುಗಳಿಕೆ ವಿಷಯದಲ್ಲಿ ಮುಗ್ಗರಿಸಿದ ಸಿನಿಮಾಗಳ ಸಂಖ್ಯೆ ದೊಡ್ಡದು.



'ಕನ್ನಡ ಚಿತ್ರರಂಗ ಸಂಕಷ್ಟದಲ್ಲಿದೆ. ಹಿಂದಿ ಡಬ್ಬಿಂಗ್ ಹಕ್ಕುಗಳು ಹೋಗುತ್ತಿಲ್ಲ. ಸ್ಯಾಟ್‌ಲೈಟ್ ಹಕ್ಕುಗಳು ಸರಿಯಾಗಿ ಮಾರಾಟವಾಗುತ್ತಿಲ್ಲ. ಚಿತ್ರಮಂದಿರದಿಂದ ಮರುಗಳಿಕೆ ಬಹಳ ಕಷ್ಟವಾಗಿದೆ. ₹10 ಬಂಡವಾಳ ಹಾಕಿ ₹8 ವಾಪಸ್ ಬಂದರೆ ನಿರ್ಮಾಪಕ ₹2 ನಷ್ಟ ತಡೆದುಕೊಳ್ಳಬಹುದು. ಆದರೆ ಇವತ್ತು ಹಾಕಿದ ₹10 ಬಂಡವಾಳಕ್ಕೆ ₹10 ಪೂರ್ತಿಯಾಗಿ ನಷ್ಟವಾಗುತ್ತಿದೆ. ಹೀಗಾಗಿ ಸಕ್ರಿಯವಾಗಿ ಸಿನಿಮಾ ನಿರ್ಮಾಣ ಮಾಡುತ್ತಿದ್ದ ಬಹುತೇಕ ನಿರ್ಮಾಪಕರೆಲ್ಲ ಸಿನಿಮಾ ನಿರ್ಮಾಣದಿಂದಲೇ ಹಿಂದೆ ಸರಿಯುತ್ತಿದ್ದಾರೆ' ಎನ್ನುತ್ತಾರೆ ಹಿರಿಯ ನಿರ್ಮಾಪಕ ಕೆ.ಮಂಜು.

ಬಹುತೇಕ ಹೊಸಬರ ಚಿತ್ರಗಳು ಇಂದು ಕೇವಲ ಮಲ್ಟಿಪ್ಲೆಕ್ಸ್‌ಗಳಲ್ಲಿ ತೆರೆ ಕಾಣುತ್ತಿವೆ. ಅದಕ್ಕೆ ಕಾರಣ ಏಕಪರದೆ ಚಿತ್ರಮಂದಿರಗಳ ಬಾಡಿಗೆ, ಶುಲ್ಕ ವ್ಯವಸ್ಥೆ. '2023ರಲ್ಲಿ ಇಲ್ಲಿಯ ತನಕ ಬಿಡುಗಡೆಯಾದ ಸಿನಿಮಾಗಳ ನಿರ್ಮಾಣಕ್ಕೆ ಕನಿಷ್ಠ ₹200 ಕೋಟಿ ಹೂಡಿಕೆ ಆಗಿರಬಹುದು. ಈ ಪೈಕಿ ಸೂಪರ್‌ಸ್ಟಾರ್‌ಗಳ ಸಿನಿಮಾಗಳನ್ನು ಹೊರಗಿಟ್ಟು, ಮಿಕ್ಕ ಸಿನಿಮಾಗಳ ಒಟ್ಟಾರೆ ಗಳಿಕೆ ಲೆಕ್ಕ ಹಾಕಿದರೆ ₹20 ಕೋಟಿ ದಾಟಿರಲಿಕ್ಕಿಲ್ಲ. ಅಂದರೆ ಉದ್ಯಮದ ನಷ್ಟ ₹180 ಕೋಟಿ. ಒಂದು ಸಿನಿಮಾ ನಿರ್ಮಾಣದ ಕಥೆ ಬದಿಗಿರಲಿ, ಬಿಡುಗಡೆಗೇ ₹15 ಲಕ್ಷ ಖರ್ಚಾಗುತ್ತಿದೆ. ಇದನ್ನೆಲ್ಲ ಗಮನಿಸಿದರೆ ಸಿನಿಮಾ ಮಾಡುವುದಕ್ಕಿಂತ ಬೇರೆ ವಹಿವಾಟು ಮಾಡುವುದು ಉತ್ತಮ ಎನಿಸುತ್ತಿದೆ' ಎನ್ನುತ್ತಾರೆ ಕೆ.ಮಂಜು.

ಇಳಿಕೆಯಾದ ಸ್ಯಾಟಲೈಟ್ ಹಕ್ಕು ಮಾರಾಟ: 'ಈ ವರ್ಷ ಬಿಡುಗಡೆಗೊಂಡ ಸಿನಿಮಾಗಳಲ್ಲಿ 20ಕ್ಕಿಂತ ಕಡಿಮೆ ಸಿನಿಮಾಗಳ ಸ್ಯಾಟ್‌ಲೈಟ್ ಹಕ್ಕು ಮಾತ್ರ ಮಾರಾಟವಾಗಿದೆ. ನಮ್ಮ ವಾಹಿನಿ ಎರಡು ಸಿನಿಮಾಗಳನ್ನು ಖರೀದಿಸಿದೆ. ಕಳೆದ ವರ್ಷ ನಮ್ಮ ವಾಹಿನಿ ಖರೀದಿಸಿದ್ದು ಹನ್ನೊಂದು ಚಿತ್ರಗಳನ್ನು. ಕೆಲವು ಚಿತ್ರಗಳು ನಮ್ಮದೇ ರಿಯಾಲಿಟಿ ಶೋಗಳ ತೀರ್ಪುಗಾರರ ಸಿನಿಮಾಗಳೆಂಬ ಎಂಬ ಕಾರಣಕ್ಕೆ ಖರೀದಿಯಾಗಿದ್ದವು' ಎಂದು ಖಾಸಗಿ ವಾಹಿನಿಯ ಹೆಸರು ಹೇಳಲು ಇಚ್ಛಿಸದ ಒಬ್ಬರು ತಿಳಿಸಿದರು.

'ಒಟಿಟಿಯವರು ನೇರವಾಗಿ ಮಲೆಯಾಳಂ ಸಿನಿಮಾ ಇದ್ದರೆ ತೆಗೆದುಕೊಂಡು ಬನ್ನಿ ಎನ್ನುತ್ತಿದ್ದಾರೆ. ಈ ಹಿಂದೆ ಡಬ್ಬಿಂಗ್ ಹಕ್ಕುಗಳನ್ನು ನಂಬಿಕೊಂಡೆ ಕೆಲವು ಸ್ಟಾರ್‌ಗಳ ಕನ್ನಡ ಸಿನಿಮಾಗಳು ನಿರ್ಮಾಣವಾಗುತ್ತಿದ್ದವು. ಈಗ ಹಿಂದಿ ಡಬ್ಬಿಂಗ್ ಹಕ್ಕುಗಳು ಮಾರಾಟವಾಗುತ್ತಿಲ್ಲ. ಆಯ್ದ ಸಿನಿಮಾಗಳ ಡಬ್ಬಿಂಗ್ ಹಕ್ಕು ಮಾರಾಟವಾಗುತ್ತಿದ್ದರೂ, ಖರೀದಿ ಮೊತ್ತ ಅರ್ಧದಷ್ಟು ಕಡಿಮೆಯಾಗಿದೆ. ಕೆಲವು ಸಿನಿಮಾಗಳ ವಿಮಾನದಲ್ಲಿ ಪ್ರಸಾರ ಹಕ್ಕು(ಏರ್‌ಬೋರ್ನ್) ಮಾರಾಟವಾಗಿದೆ' ಎನ್ನುತ್ತಾರೆ ಸಿನಿಮಾ ಹಕ್ಕುಗಳ ಖರೀದಿ ಸಂಸ್ಥೆಗಳಾದ ಪಾಪ್ಟರ್ ಮತ್ತು ಅಲ್ಟ್ರಾ ಮೀಡಿಯಾ ಪ್ರತಿನಿಧಿ ನಿಖಿಲ್ ಪೈ.

'ಈ ವರ್ಷ ಒಟಿಟಿ ನೇರ ಹಕ್ಕು ಮಾರಾಟಗೊಂಡಿರುವ ಕನ್ನಡ ಸಿನಿಮಾಗಳ ಸಂಖ್ಯೆ ಹತ್ತಕ್ಕಿಂತ ಹೆಚ್ಚಿಲ್ಲ. ಬೆರಳೆಣಿಕೆಯಷ್ಟು ಸಿನಿಮಾಗಳು 'ಪ್ರೈಮ್ ವಿಡಿಯೊ ಡೈರೆಕ್ಟ್' (ಪಿವಿಡಿ-ವೀಕ್ಷಣೆಗೆ ಅನುಗುಣವಾಗಿ ರಾಯಲ್ಟಿ) ಕಾರ್ಯಕ್ರಮದ ಅಡಿಯಲ್ಲಿ ಅಮೆಜಾನ್ ಪ್ರೈಂನಲ್ಲಿ ಪ್ರಸಾರಗೊಂಡಿವೆ. ಎರಡು ಸಿನಿಮಾಗಳು 6-9 ತಿಂಗಳ ಎಕ್ಸ್‌ಕ್ಲೂಸಿವ್ ರೈಟ್ಸ್ (ಹೈಬ್ರಿಡ್ ಡೀಲ್) ಮಾದರಿಯಲ್ಲಿ ಖರೀದಿಯಾಗಿವೆ' ಎನ್ನುವುದು ಜೀರೊ ಬಿಟ್‌ರೇಟ್ ಸಂಸ್ಥೆಯ ನಿರಂಜನ್ ನೀಡುವ ಮಾಹಿತಿ.

ಬಿಗ್ ಬಜೆಟ್, ಖ್ಯಾತ ಪ್ರೊಡಕ್ಷನ್ ಹೌಸ್, ಬಿಗ್ ಸ್ಟಾರ್ಸ್ ಹೊರತುಪಡಿಸಿದ ಹೊಸ ಕನ್ನಡ ಸಿನಿಮಾಗಳನ್ನು ಒಟಿಟಿ ವೇದಿಕೆಗಳು ನೇರವಾಗಿ ಖರೀದಿಸುತ್ತಿಲ್ಲ. ಬದಲಾಗಿ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಿ ಸದ್ದು ಮಾಡಿದ ಸಿನಿಮಾಗಳನ್ನಷ್ಟೇ ರೆವೆನ್ಯೂ ಶೇರ್ (ಹಣ ಹಂಚಿಕೆ ಆಧಾರದ ಮೇಲೆ-PVOD) ಮೂಲಕ ಪಡೆಯುತ್ತಿವೆ. 'ಸಿನಿಮಾವೊಂದಕ್ಕೆ ಗಂಟೆಗೆ ₹4-₹6ರವರೆಗೆ ನಮ್ಮ ಕೈಸೇರುತ್ತದೆ. ಬಿಗ್ ಕ್ಯಾನ್ವಾಸ್ ಅಥವಾ ಸ್ಟಾರ್‌ಗಳ ಸಿನಿಮಾಗಳನ್ನಷ್ಟೇ ಬಿಡುಗಡೆಗೂ ಮುನ್ನವಷ್ಟೆ ಇಂತಿಷ್ಟು ಎಂದು ನಿಗದಿಪಡಿಸಿ ಖರೀದಿಸುತ್ತಾರೆ. ಇಂಥ ಸಿನಿಮಾಗಳ ಸಂಖ್ಯೆ ಕನ್ನಡದಲ್ಲಿ ವರ್ಷಕ್ಕೆ ನಾಲ್ಕೈದು ಅಷ್ಟೇ! ನೆಟ್‌ಫ್ಲಿಕ್ಸ್‌ನಲ್ಲಿ ಕನ್ನಡಕ್ಕೆ ಅವಕಾಶ ಇಲ್ಲವೇ ಇಲ್ಲ. ಒಟಿಟಿಗಷ್ಟೇ ಎಂದು ನಿಶ್ಚಯ ಮಾಡಿಕೊಂಡರೆ ಆರಂಭದಿಂದಲೇ ಒಂದಿಷ್ಟು ಖರ್ಚುಗಳನ್ನು ಕಡಿಮೆ ಮಾಡಬಹುದು, ಉಳಿಸಬಹುದು' ಎನ್ನುತ್ತಾರೆ ನಿರ್ದೇಶಕ ಜಗನ್ನಾಥ್.

ಅತ್ಯುತ್ತಮ ಸಿನಿಮಾಗಳು ಅಂಗೈ ತುದಿಯಲ್ಲಿ ಒಟಿಟಿಯಲ್ಲಿ ಸಿಗುತ್ತಿವೆ. ಚಿತ್ರಮಂದಿರದ ಎಫೆಕ್ಟ್ ಕೂಡ ಇವತ್ತು ಮನೆಯಲ್ಲೇ ಸಿಗುತ್ತದೆ. ಇಷ್ಟೆಲ್ಲ ಸವಾಲುಗಳನ್ನು ಮೀರಿದ ಸಿನಿಮಾ ಗೆಲ್ಲುತ್ತದೆ.
ಹರೀಶ್ ಮಲ್ಯ,
ಸಿನಿಮಾ ಪ್ರೇಮಿ ಹಾಗೂ ವಿಮರ್ಶಕ

ಹೊಸಬರ ಸಿನಿಮಾಗಳಿಗೆ ಸವಾಲುಗಳಿಲ್ಲ ಎಂದಲ್ಲ. ಆದರೆ ಸೋಲಿಗೆ ಯಾರನ್ನೋ ದೂರಲು ಸಾಧ್ಯವಿಲ್ಲ. ಚಿತ್ರಮಂದಿರದಲ್ಲಿ ಜನ ಬಾರದಿದ್ದರೆ ಬೇರೆ ಯಾವ ವೇದಿಕೆಗಳು ಸಿಗದಂತಾಗಿರುವುದು ನಿಜ.
ಸುನೀಲ್ ಮೈಸೂರು,
'ಆಕೆಸ್ಟ್ರಾ ಮೈಸೂರು' ಸಿನಿಮಾ ನಿರ್ದೇಶಕ

'ನನ್ನ ಸಿನಿಮಾವನ್ನು ಒಟಿಟಿಗೆ ಬರುವ ಮುನ್ನ 35-40 ಸಾವಿರ ಜನರಷ್ಟೇ ಚಿತ್ರಮಂದಿರಗಳಲ್ಲಿ ನೋಡಿದ್ದಾರೆ. ಈ ಸಂದರ್ಭದಲ್ಲಿ ಜನರನ್ನು ದೂರುವ ಬದಲು, ಸಿನಿಮಾವನ್ನು ಎಲ್ಲಿಗೆ ನಿರ್ಮಾಣ ಮಾಡಬೇಕು, ಒಟಿಟಿಗಾ ಅಥವಾ ಚಿತ್ರಮಂದಿರಕ್ಕಾ ಎನ್ನುವ ಪ್ರಶ್ನೆಯನ್ನು ನಾನೇ ಕೇಳಿಕೊಳ್ಳುತ್ತಿದ್ದೇನೆ. 'ಹೊಂದಿಸಿ ಬರೆಯಿರಿ' ಸಿನಿಮಾವನ್ನು ಒಟಿಟಿಯಲ್ಲಿ ಎಷ್ಟು ಜನ ನೋಡಿದ್ದಾರೋ ಅಷ್ಟೇ ಜನ ಚಿತ್ರಮಂದಿರಗಳಿಗೆ ಬಂದು ನೋಡಿದ್ದರೆ ನಮಗೆ ಸುಮಾರು ₹15 ಕೋಟಿ ಕಲೆಕ್ಷನ್ ಆಗುತ್ತಿತ್ತು. ಒಟಿಟಿಯಲ್ಲಿ ನಮ್ಮ ಸಿನಿಮಾವನ್ನು ಸುಮಾರು 8 ಲಕ್ಷ ಗಂಟೆ ಕಾಲ ಜನರು ನೋಡಿದ್ದಾರೆ. ಇದರಿಂದ ನಮಗೆ ₹34 ಲಕ್ಷ ದೊರೆಯಿತು. ಎಲ್ಲಿಯ ₹34 ಲಕ್ಷ, ಎಲ್ಲಿಯ ₹15 ಕೋಟಿ!' ಎನ್ನುವುದು ಜಗನ್ನಾಥ್ ಅವರ ಅನುಭವದ ಮಾತು.

ಸಿನಿಮಾ ನೋಡಿ ನಿರ್ಧರಿಸಿ: 'ಮೊದಲು ಜನರಿಗೆ ಅಂಗೈಯಲ್ಲೇ ಸಿನಿಮಾ ರುಚಿ ಹತ್ತಿಸಿದ ಈ ಒಟಿಟಿಗಳು, ಇದೀಗ ಚಿತ್ರಮಂದಿರಗಳಲ್ಲಿ ಮೂರು ವಾರ ಓಡಿದರಷ್ಟೇ ಸಿನಿಮಾವನ್ನು ಖರೀದಿಸುತ್ತೇವೆ ಎನ್ನುತ್ತಿದೆ. ಇದು ಯಾವ ರೀತಿಯ ವಾದ! ನ್ಯಾಯ? ನನಗಂತೂ ಅರ್ಥವಾಗುತ್ತಿಲ್ಲ. '19.20.21' ಸಿನಿಮಾದ ಪ್ರಸ್ತಾವನೆಯನ್ನು ಸಿನಿಮಾ ನೋಡದೆಯೇ ತಿರಸ್ಕರಿದ್ದಾರೆ. ಸಿನಿಮಾ ನೋಡುವ ಸೌಜನ್ಯವನ್ನು ಅವರು ತೋರಿಸಲಿ. ಸಿನಿಮಾವನ್ನು ನೋಡದೇ ತಿರಸ್ಕರಿಸುವ ಉಡಾಫೆತನ ಕನ್ನಡ ಸಿನಿಮಾಗಳ ಮೇಲೆ ಏಕೆ ಎನ್ನುವುದು ನನ್ನ ಪ್ರಶ್ನೆ' ಎಂದು ತಮ್ಮ ಅಸಮಾಧಾನವನ್ನು ನಿರ್ದೇಶಕ ಮಂಸೋರೆ ಹೊರಹಾಕುತ್ತಾರೆ.

ನಟಿ, ನಿರ್ಮಾಪಕಿ ರಮ್ಯಾ ಅವರು 'ಒಟಿಟಿಯವರು ತಮಿಳು, ತೆಲುಗು ಅಷ್ಟೇ ಯಾಕೆ ಮಲಯಾಳಂ ಸಿನಿಮಾಗಳನ್ನು ಖರೀದಿಸುತ್ತಾರೆ. ಆದರೆ ಕನ್ನಡ ಸಿನಿಮಾಗಳನ್ನು ಖರೀದಿಸುತ್ತಿಲ್ಲ' ಎಂದು ಒಂದು ರಾಷ್ಟ್ರೀಯ ಮಾಧ್ಯಮದ ಸಂವಾದ ಕಾರ್ಯಕ್ರಮದಲ್ಲಿ ಹೇಳಿದ್ದರು. ಸದ್ಯದ ಸ್ಥಿತಿಯಲ್ಲಿ 'ಅಮೆಜಾನ್ ಪ್ರೈಂ' ಒಂದೇ ಕನ್ನಡದ ಮುಖ್ಯ ಒಟಿಟಿ ವೇದಿಕೆಯಾಗಿ ಗುರುತಿಸಿಕೊಳ್ಳುತ್ತಿದೆ. ಈ ವರ್ಷ ಬಿಡುಗಡೆಯಾದ ಸಿನಿಮಾಗಳ ಪೈಕಿ 'ಆರ್ಕೆಸ್ಟ್ರಾ ಮೈಸೂರು', 'ಕಬ್ಜ', 'ರಾಘವೇಂದ್ರ ಸ್ಟೋರ್ಸ್', 'ಗುರುದೇವ ಹೊಯ್ಸಳ', 'ರಾಘು', 'ಹೊಂದಿಸಿ ಬರೆಯಿರಿ', 'ಲವ್ ಬರ್ಡ್ಸ್', 'ಡೇರ್ ಡೆವಿಲ್ ಮುಸ್ತಾಫಾ' ಹೀಗೆ ಬೆರಳೆಣಿಕೆಯಷ್ಟೇ ಸಿನಿಮಾಗಳು ಇಲ್ಲಿವೆ. ಉಳಿದಂತೆ ಇತರೆ ಯಾವ ಒಟಿಟಿ ವೇದಿಕೆಯೂ ಒಂದೇ ಒಂದು ಕನ್ನಡ ಸಿನಿಮಾವನ್ನು ಈ ವರ್ಷ ಖರೀದಿಸಿಲ್ಲ. ಈ ಅಂಕಿ-ಅಂಶವೇ ಕನ್ನಡ ಸಿನಿಮಾಗಳಿಗೆ ಎದುರಾಗಿರುವ 'ಒಟಿಟಿ ಬರ'ಕ್ಕೆ ಕನ್ನಡಿ ಹಿಡಿಯುತ್ತದೆ.

ಚಿತ್ರಮಂದಿರಗಳು ಮುಚ್ಚುತ್ತಿವೆ!: 'ಈ ವರ್ಷ ಕನ್ನಡ ಮಾತ್ರವಲ್ಲ, ಇತರ ಭಾಷೆಗಳ ಯಶಸ್ಸು ಕೂಡ ಕಡಿಮೆ. 'ಪಠಾಣ್', 'ಪೊನ್ನಿಯಿನ್ ಸೆಲ್ವನ್-2', 'ಕೇರಳ ಸ್ಟೋರಿ' 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಜನರನ್ನು ಚಿತ್ರಮಂದಿರಕ್ಕೆ ಕರೆತಂದ ಈ ವರ್ಷದ ಸಿನಿಮಾಗಳು. ಸ್ಟಾರ್ ಇಲ್ಲದ ಸಿನಿಮಾಗಳಿಂದ ವಾರಾಂತ್ಯದಲ್ಲಿ ತಲಾ ಶೋಗೆ ಸರಾಸರಿ ₹2,000 ಸಂಗ್ರಹವಾಗುತ್ತಿದೆ. ಒಂದು ಶೋಗೆ ₹65,000 ಸಂಗ್ರಹವಾಗಬೇಕು. ಈಗಿನ ಸ್ಥಿತಿ ನೋಡಿದರೆ ಚಿತ್ರಮಂದಿರ ಮುಚ್ಚಿ ಅಪಾರ್ಟ್‌ಮೆಂಟ್ ಮಾಡುವ ಆಲೋಚನೆಯಿದೆ' ಎನ್ನುತ್ತಾರೆ ಬೆಂಗಳೂರಿನ ಶ್ರೀನಿವಾಸ, ತುಳಸಿ ಚಿತ್ರಮಂದಿರಗಳ ಮಾಲೀಕರು ಹಾಗೂ ಚಿತ್ರ ನಿರ್ಮಾಪಕರೂ ಆಗಿರುವ ದೇವೇಂದ್ರ ರೆಡ್ಡಿ.

'ರಾಜ್ಯದ 150ಕ್ಕೂ ಅಧಿಕ ಚಿತ್ರಮಂದಿರಗಳು ದೊಡ್ಡ ಚಿತ್ರಗಳು ಬಿಡುಗಡೆಗೊಂಡಾಗ ಮಾತ್ರ ಬಾಗಿಲು ತೆರೆಯುತ್ತವೆ. ರಾಜ್ಯದಲ್ಲಿ ಹೆಸರಿಗೆ 650 ಏಕಪರದೆ ಚಿತ್ರಮಂದಿರಗಳಿರಬಹುದು. ರೋಗಿ ಬಂದಾಗ ಆಸ್ಪತ್ರೆ ಆರಂಭ ಎನ್ನುವಂತಾಗಿದೆ ಸ್ಥಿತಿ. ಆದಾಯ ಗಳಿಸಿಕೊಡಬಲ್ಲ ಆರೆಂಟು ಸಿನಿಮಾಗಳು ವರ್ಷಕ್ಕೆ ಸಿಗುತ್ತಿಲ್ಲ' ಎನ್ನುತ್ತಾರೆ ಸಿನಿಮಾ ವಿತರಕ ಮಾರ್ಸ್ ಸುರೇಶ್.



ಸೂಪರ್‌ಸ್ಟಾರ್ ಸಿನಿಮಾಗಳ ಕೊರತೆ: ತುಮಕೂರಿನ ಮಾರುತಿ ಚಿತ್ರಮಂದಿರದ ಮಾಲೀಕರು ಬಾಡಿಗೆ ಕಟ್ಟಲಾಗದ, ಸಿಬ್ಬಂದಿ ವೇತನ ನೀಡಲಾಗದ ದುಃಸ್ಥಿತಿಯ ಕುರಿತು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪತ್ರ ಬರೆದಿದ್ದಾರೆ. ಸ್ಟಾರ್‌ಗಳು ವರ್ಷ-ಎರಡು ವರ್ಷಕ್ಕೊಂದು ಸಿನಿಮಾ ಮಾಡುತ್ತಿದ್ದಾರೆ. 1980ರ ದಶಕದಂತೆ ಪ್ರತಿ ಸೂಪರ್ ಸ್ಟಾರ್‌ಗಳು ವರ್ಷಕ್ಕೆ ಕನಿಷ್ಠ 3-4 ಸಿನಿಮಾ ಮಾಡಬೇಕು. ವರ್ಷಕ್ಕೆ 25-30 ಸ್ಟಾರ್ ಸಿನಿಮಾ ಬಂದರೆ ಮಾತ್ರ ಚಿತ್ರಮಂದಿರ ಮತ್ತು ಚಿತ್ರರಂಗದ ಉಳಿವು ಎಂಬುದು ಬಹುತೇಕ ಚಿತ್ರಮಂದಿರ ಮಾಲೀಕರ ಅಭಿಪ್ರಾಯ.

ಕನ್ನಡಕ್ಕೆ ಕೊನೆ ಸ್ಥಾನ: 'ದಕ್ಷಿಣ ಭಾರತದ ಚಿತ್ರರಂಗದಲ್ಲಿ ವಹಿವಾಟುವಾರು ನೋಡಿದರೆ ಕನ್ನಡ ಕೊನೆಯ ಸ್ಥಾನದಲ್ಲಿದೆ. ಚಿತ್ರಮಂದಿರ ಬದಿಗಿಟ್ಟು ಎಲ್ಲ ಹಕ್ಕುಗಳ ಮಾರಾಟದ ದೃಷ್ಟಿಯಿಂದ ಪಟ್ಟಿ ನೋಡಿದರೆ ಮಲಯಾಳಂಗೆ ಮೊದಲ ಸ್ಥಾನ. 'ಮಲಯಾಳಂನ ಹತ್ತು ಸಿನಿಮಾ ಹಕ್ಕುಗಳ ಖರೀದಿಗಾಗಿ ವಾಹಿನಿಗಳು, ಒಟಿಟಿಗೆ ಕಳುಹಿಸಿದರೆ ಒಂಬತ್ತಕ್ಕೆ ಬೆಲೆ ಎಷ್ಟು ನೀಡಬಹುದೆಂಬ ಪ್ರತಿಕ್ರಿಯೆ ಬರುತ್ತಿದೆ. ಆದರೆ ಕನ್ನಡದ ಹತ್ತು ಸಿನಿಮಾ ಕಳುಹಿಸಿದರೆ ಒಂದಕ್ಕೆ ಬೆಲೆ ನಿಗದಿಯಾಗಿ ಬಂದರೆ ಸಾಧನೆ ಎಂಬ ಸ್ಥಿತಿ ಇದೆ. ಈ ವಿಷಯದಲ್ಲಿ ಮಲಯಾಳಂ ಅಗ್ರಸ್ಥಾನದಲ್ಲಿದೆ. ತಮಿಳು, ತೆಲುಗು ನಂತರದ ಸ್ಥಾನದಲ್ಲಿವೆ' ಎನ್ನುತ್ತಾರೆ ಪಾಪ್ಟರ್ ಮತ್ತು ಅಲ್ಟ್ರಾ ಮೀಡಿಯಾ ಪ್ರತಿನಿಧಿ ನಿಖಿಲ್ ಪೈ.

ತೆಲುಗಿನ 'ಬಲಗಂ', 'ದಾಸ್ ಕಾ ಧಮ್ಕಿ', 'ವಿರೂಪಾಕ್ಷ', ತಮಿಳಿನ 'ಪಾತು ತಲ', 'ಪಿಚ್ಚೈಕಾರನ್ 2', ಮಲಯಾಳಂನ '2018', 'ರೋಮಾಂಚನಂ', 'ಪಾಚುಂ ಅದ್ಭುತವೆಳಕಂ', 'ಇರಟ್ಟ' ಸಿನಿಮಾಗಳು ಗಳಿಕೆವಾರು ಯಶಸ್ಸು ದಾಖಲಿಸಿವೆ. ಮೊನ್ನೆಯಷ್ಟೇ ತೆರೆಕಂಡ 'ಜೈಲರ್' ತಮಿಳು ಸಿನಿಮಾ ರಜನೀಕಾಂತ್ ಕಾರಣದಿಂದಾಗಿ ಸದ್ದು ಮಾಡುತ್ತಿದೆ. ಇದರ ಹೊರತಾಗಿ ಕೆಲ ಸಿನಿಮಾಗಳು ಒಟಿಟಿಗೆ ಬಂದ ನಂತರ ಜನಪ್ರಿಯಗೊಂಡಿವೆ. ಬಾಲಿವುಡ್‌ನಿಂದಲೂ ಚಿತ್ರಮಂದಿರಕ್ಕೆ ಜನರನ್ನು ಕರೆತಂದ ಚಿತ್ರಗಳ ಸಂಖ್ಯೆ ಈ ವರ್ಷ ಬಹಳ ಕಡಿಮೆ.

ಪರಿಹಾರವೇನು?

'ಒಬ್ಬನೇ ಸಾವಿರ ಕೋಟಿ ರೂಪಾಯಿ ಬಾಚಿಕೊಂಡು ಹೋದರೆ ಉದ್ಯಮ ಹೇಗೆ ಉಳಿಯುತ್ತದೆ? 100 ಸಿನಿಮಾ ₹1000 ಕೋಟಿ ಹಂಚಿಕೊಳ್ಳಬೇಕು. ಚಿತ್ರಗಳು ಬಿಡುಗಡೆಯಾಗಿ 8 ವಾರಗಳ ಬಳಿಕ ಒಟಿಟಿಗೆ ಬರಬೇಕು. ಟಿಕೆಟ್ ದರ ಕೂಡ ಪ್ರೇಕ್ಷಕರಿಗೆ ಹೊರೆಯಾಗದಂತಿರಬೇಕು' ಎನ್ನುತ್ತಾರೆ ಮಾರ್ಸ್ ಸುರೇಶ್.

ಡೇಟ್ಸ್ ನೋಡಿ ಸಿನಿಮಾ ಮಾಡಬೇಡಿ: 'ತುಂಬ ಸಲ ದೊಡ್ಡ ಸ್ಟಾರ್ ನಟನ ಡೇಟ್ ಸಿಕ್ಕಿದೆ ಎಂದು ಸಿನಿಮಾ ಮಾಡುತ್ತೇವೆ. ಅದು ಪ್ರೇಕ್ಷಕರ ದೃಷ್ಟಿಕೋನದಲ್ಲಿ ವರ್ಕ್ ಆಗದಿರುವ ಸಾಧ್ಯತೆಯಿದೆ. ಹೊಂಬಾಳೆ ಫಿಲ್ಮ್ಸ್‌ನಲ್ಲಿ ಮೊದಲು ಕಥೆ ನೋಡುತ್ತೇವೆ. ಕಥೆಯನ್ನು ಸಮರ್ಥವಾಗಿ ತೆರೆಯ ಮೇಲೆ ಕಟ್ಟಿಕೊಡಬಲ್ಲ ನಿರ್ದೇಶಕನೂ ಮುಖ್ಯವಾಗುತ್ತಾನೆ. ಇದರ ನಂತರ ಕಥೆಗೆ ಸೂಕ್ತ ನಾಯಕನನ್ನು ಹುಡುಕುತ್ತೇವೆ. ರಾಜ್‌ಕುಮಾರ್ ಸಿನಿಮಾಗಳಿಗೆ ಬರುತ್ತಿದ್ದ ಜನ ಈಗ ಮತ್ತೆ ಚಿತ್ರಮಂದಿರಕ್ಕೆ ಬರುವಂತಾಗಬೇಕು. ಅಂತಿಮವಾಗಿ ಕಥೆಗಾರರು ಮತ್ತು ನಿರ್ದೇಶಕರನ್ನೇ ಉತ್ತೇಜಿಸಬೇಕು. ಅವರೇ ಚಿತ್ರರಂಗದ ಅಡಿಪಾಯ' ಎನ್ನುತ್ತಾರೆ ಹೊಂಬಾಳೆ ಫಿಲ್ಮ್ಸ್‌ನ ಚಲುವೆಗೌಡ.

ಈ ವರ್ಷ 2 ಸಿನಿಮಾ ಖರೀದಿ!

'ಈ ವರ್ಷ 'ವೇದ' ಮತ್ತು 'ಕಬ್ಜ' ಸಿನಿಮಾಗಳ ಸ್ಯಾಟ್‌ಲೈಟ್ ಹಕ್ಕು ಖರೀದಿಸಿದ್ದೇವೆ. 'ವೇದ' ಹಿಂದಿನ ವರ್ಷದ ಅಂತ್ಯದಲ್ಲಿ ಬಿಡುಗಡೆಗೊಂಡ ಸಿನಿಮಾ. ವಾಹಿನಿಯಲ್ಲಿ ಒಂದು ಸಿನಿಮಾ ಖರೀದಿಸಿ ಪ್ರಸಾರ ಮಾಡಿದರೆ, ಅದರ ಮೊದಲ ಪ್ರಸಾರದಲ್ಲಿ ಬರುವ ಜಾಹೀರಾತುಗಳಿಂದ ನಮಗೆ ಖರೀದಿ ಹಣ ಮರುಗಳಿಕೆಯಾಗಬೇಕು. ಆದರೆ ಇತ್ತೀಚಿನ ವರ್ಷಗಳಲ್ಲಿ ಸಿನಿಮಾ ಹಕ್ಕಿನ ಬೆಲೆ ಹೆಚ್ಚಾಗಿದೆ. ಹೀಗಾಗಿ ಖರೀದಿ ಹಣ ಮರುಗಳಿಕೆ ಕಷ್ಟವಾಗಿದೆ. 2018ರಿಂದ ನಮ್ಮ ವಾಹಿನಿ 130ಕ್ಕೂ ಹೆಚ್ಚು ಸಿನಿಮಾಗಳನ್ನು ಖರೀದಿಸಿತ್ತು. ಆದರೆ ಕಳೆದ ವರ್ಷದಿಂದ ಸಿನಿಮಾ ಹಕ್ಕು ಖರೀದಿ ಕಷ್ಟವಾಗಿದೆ. ಹೊಸ ಸಿನಿಮಾಗಳಿಗೆ ಟಿಆರ್‌ಪಿ ಬರುವುದಿಲ್ಲ. ಸ್ಟಾರ್ ಸಿನಿಮಾಗಳು ದುಬಾರಿ. ಹೀಗಾಗಿ ವರ್ಷಕ್ಕೆ ಆರೆಂಟು ಸಿನಿಮಾಗಳನ್ನು ಖರೀದಿಸಲು ಮಾತ್ರ ಸಾಧ್ಯವಾಗುತ್ತಿದೆ' ಎನ್ನುತ್ತಾರೆ ಕಲರ್ಸ್ ಕನ್ನಡ ವಾಹಿನಿ ಮುಖ್ಯಸ್ಥ ಪ್ರಶಾಂತ್ ನಾಯಕ್.

'ಒಟಿಟಿಗೆ ಖರೀದಿಸಿದಾಗಲೂ ಹೊಸ ಚಂದಾದಾರಿಕೆ ಗುರಿ ಇರುತ್ತದೆ. ಜೊತೆಗೆ ನಾವು ಪ್ರಚಾರ ಮಾಡಲು ಒಂದಷ್ಟು ಲಕ್ಷ ಖರ್ಚಾಗುತ್ತದೆ. ಅದರ ಅರ್ಧದಷ್ಟು ಆದಾಯ ಮರಳಿ ಬರುವುದಿಲ್ಲ. ಡಬ್ಬಿಂಗ್ ಸಿನಿಮಾಗಳು ಇದಕ್ಕಿಂತ ಹೆಚ್ಚಿನ ಟಿಆರ್‌ಪಿ ನೀಡುತ್ತವೆ. ಬೇರೆ ಭಾಷೆಗಳಂತೆ ನಮ್ಮಲ್ಲಿಯೂ ಚಿತ್ರಮಂದಿರಗಳಲ್ಲಿ ಗೆಲ್ಲುವ ಸಿನಿಮಾಗಳ ಸಂಖ್ಯೆ ಹೆಚ್ಚಿದ್ದರೆ ಸ್ಯಾಟ್‌ಲೈಟ್ ಹಕ್ಕು ಖರೀದಿ ಸಮಸ್ಯೆ ಕೂಡ ನಿವಾರಣೆಯಾಗುತ್ತದೆ' ಎಂಬುದು ಪ್ರಶಾಂತ್ ನಾಯಕ್ ಅಭಿಮತ.

'ಡೈನಾಮಿಕ್ ಪ್ರೈಸಿಂಗ್' ಚರ್ಚೆ

ಒಂದನೇ ಪುಟದಿಂದ..
ಈ ಕುರಿತು ಪ್ರದರ್ಶಕರ ಜೊತೆ ಕೆಆರ್‌ಜಿ ಮಾತುಕತೆ ನಡೆಸುತ್ತಿದೆ. ಉದಾಹರಣೆಗೆ ಆರಂಭದಲ್ಲಿ ಶೇ 25 ಸೀಟುಗಳು ಭರ್ತಿಯಾಗುವವರೆಗೆ ಒಂದು ಟಿಕೆಟ್ ದರ ₹50 ಇರಲಿದ್ದು, ನಂತರದಲ್ಲಿ ಪ್ರತಿ ಶೇ 10 ಸೀಟುಗಳ ಭರ್ತಿಗೆ ಟಿಕೆಟ್ ದರ ಶೇ 20 ಏರಿಕೆ ಮಾಡಿದರೆ ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರ ಸಂಖ್ಯೆಯೂ ಏರಿಕೆಯಾಗಲಿದೆ. ಕೆಲವು ಮಲ್ಟಿಪ್ಲೆಕ್ಸ್‌ಗಳು ಹೌಸ್‌ಫುಲ್ ಪ್ರದರ್ಶನ ಕಾಣುತ್ತಿರುವ ಸಿನಿಮಾಗಳಿಗೆ ಇದೇ ಮಾದರಿ ಅನುಸರಿಸುತ್ತಿವೆ' ಎಂದಿದ್ದಾರೆ ಕಾರ್ತಿಕ್.

ಕನಕಪುರದ ವಾಣಿ ಚಿತ್ರಮಂದಿರ

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 13-8-1998

● ಖ್ಯಾತ ವಿಮರ್ಶಕ ಡಿ. ಆರ್. ನಾಗರಾಜ್ ಇನ್ನಿಲ್ಲ

ಬೆಂಗಳೂರು, ಆಗಸ್ಟ್ 12– ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯ ಕ್ಷೇತ್ರದಲ್ಲಿ ದೃಢ ಹೆಜ್ಜೆಗಳಿಟ್ಟು ವಿಶ್ವವ್ಯಾಪಿ ಸಂಚರಿಸಿ ಹೆಸರಾಂತ ಚಿಂತಕರ ಸಾಲಿಗೆ ಸೇರಿದ್ದ ಪ್ರತಿಭಾವಂತ ವಿಮರ್ಶಕ ಡಾ. ಡಿ,ಆರ್. ನಾಗರಾಜ್ ಅವರು ಇಂದು ಮುಂಜಾನೆ ತೀವ್ರ ಹೃದಯಾಘಾತದಿಂದ ಇಲ್ಲಿ ನಿಧನರಾದರು. ದಿವಂಗತರು ಪತ್ನಿ, ಪುತ್ರಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ನಗರದ ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ನಡೆಯಲಿದೆ.

ನಲವತ್ತೇಳರ ಹೊಸ್ತಿಲಲ್ಲಿದ್ದ ನಾಗರಾಜ್ ಅವರ ಬದುಕು ಸರಳವಾದರೂ, ವರ್ಣಮಯ, ಬದುಕಿನ ಪ್ರತಿಕ್ಷಣವೂ ಅವರಿಗೆ 'ಅಧ್ಯಯನ' ಮತ್ತು ಚಿಂತನೆ ಉಸಿರಾಗಿತ್ತು.

50 ವರ್ಷಗಳ ಹಿಂದೆ — ಸೋಮವಾರ, 13-8-1973

● ಲೋಕೋ ಮುಷ್ಕರ ಅಂತ್ಯ: ಮಿಶ್ರಾ ಜತೆ ಮಾತುಕತೆ ಸಫಲ

ನವದೆಹಲಿ, ಆಗಸ್ಟ್ 12– ಹನ್ನೊಂದು ದಿನಗಳ ಲೋಕೋ ಸಿಬ್ಬಂದಿಯವರ ಮುಷ್ಕರವನ್ನು ಇಂದು ರಾತ್ರಿ ಹಿಂತೆಗೆದುಕೊಳ್ಳಲಾಯಿತು.

ಸಚಿವ ಮಿಶ್ರಾ ಅವರ ಜೊತೆ ಅಂತಿಮವಾಗಿ ಐದು ಗಂಟೆ ಕಾಲ ಚರ್ಚೆ ನಡೆಸಿದ ಅಖಿಲ ಭಾರತ ಲೋಕೋ ಸಿಬ್ಬಂದಿಯವರ ಸಂಘದ ಅಧ್ಯಕ್ಷ ಎಂ. ಆರ್. ಸಭಾಪತಿ ಅವರು ಮುಷ್ಕರ ಹಿಂತೆಗೆದುಕೊಂಡಿರುವುದನ್ನು ಪ್ರಕಟಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಆಗಸ್ಟ್ 13, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ದ್ವಾದಶಿ ಗಂ. 08-20 ನಕ್ಷತ್ರ: ಆರ್ದ್ರಾ ಗಂ. 08-27 ಯೋಗ: ವಜ್ರ ಗಂ. 15-55 ಕರಣ: ತೈತಿಲ ಗಂ. 08-20, ಕರ್ಕಾಟಕ ಮಾಸದ 27 ನೇ ದಿನ, ಮಳೆನಕ್ಷತ್ರ: ಆಶ್ಲೇಷ 3.
ರಾಹುಕಾಲ: ಸಾಯಂಕಾಲ 04-30 - 06-00
ಸೂರ್ಯೋದಯ: 06-21 ಸೂರ್ಯಾಸ್ತ: 06-50
ಮುಸ್ಲಿಂ ದಿನಾಂಕ: 25 ಮೊಹರಮ್ ದಿನ ವಿಶೇಷ : ಗಾಥಾ ಗಹಾಂಬರ್ (ಪಾರ್ಸಿ), ಪಕ್ಷ ಪ್ರದೋಷ, ಅದೃಷ್ಟ ಸಂಖ್ಯೆ: 7, 5

ಮೇಷ: ಇಂದು ನೀವು ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ನಿಮ್ಮ ಕೆಲಸಗಳ ಬಗ್ಗೆ ಅನುಭವಸ್ಥರೊಂದಿಗೆ ಮಾತು ಕತೆ ನಡೆಸುವುದರಿಂದ ತಿಳುವಳಿಕೆ ವೃದ್ಧಿಯಾಗುತ್ತದೆ.

ವೃಷಭ: ಐ.ಟಿ. ಕಂಪನಿ ಉದ್ಯೋಗಿಗಳಿಗೆ ಕೆಲಸದ ಒತ್ತಡ ಜಾಸ್ತಿಯಾಗಲಿದೆ, ಅದರ ಪರಿಣಾಮವಾಗಿ ವರಮಾನ ಹೆಚ್ಚಳದ ಸಂಭವ. ಕೆಲಸ ಆರಂಭಿಸುವ ಮುನ್ನ ಆಮೂಲಾಗ್ರ ಚಿಂತನೆ ಅಗತ್ಯ ಎಂಬುದು ಈಗ ತಿಳಿದು ಬಂದಿದೆ.

ಮಿಥುನ: ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ. ಕಠಿಣ ಪರಿಶ್ರಮದಿಂದ ಕಾರ್ಯ ನಿರ್ವಹಿಸಿದಲ್ಲಿ ಕಹಿ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿವೆ. ಸದಾ ತಾಳ್ಮೆಯಿಂದ ವ್ಯವಹರಿಸಿ.

ಕರ್ಕಾಟಕ: ವಿವಾಹದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ಮಹಿಳೆಯರಿಗೆ ಋಣಾತ್ಮಕ ಚಿಂತನೆ ಬಂದು ಆರೋಗ್ಯ ಹಾಳು ಮಾಡುತ್ತದೆ. ನೀರಿನ ಶುಚಿತ್ವದ ಬಗ್ಗೆ ಜಾಗರೂಕತೆ ಇರಲಿ.

ಸಿಂಹ: ನಿಮ್ಮ ಆಲಸ್ಯತನ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಔಷಧಿಗಳ ಅಧಿಕ ಬಳಕೆ ಅಥವಾ ಅದರ ಅಡ್ಡಪರಿಣಾಮದಿಂದ ಅನಾರೋಗ್ಯಕ್ಕೆ ಗುರಿಯಾಗಬೇಕಾಗುವುದು. ಕೆಲಸದಲ್ಲಿ ಹೆಚ್ಚಿನ ಗಮನವಿರಲಿ.

ಕನ್ಯಾ: ತಂಗಿಗಾಗಿ ಹಣವನ್ನು ಮತ್ತು ಸಮಯವನ್ನು ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಪ್ರವಾಸ ಕೈಗೊಳ್ಳುವ ಯೋಜನೆಗಳು ಕಾರ್ಯ ರೂಪಕ್ಕೆ ಬರಲಿದೆ. ಪುಸ್ತಕ ಪ್ರಕಾಶಕರಿಗೆ ನೂತನ ಕಾರ್ಯಭಾರ ಒದಗುವುದು.

ತುಲಾ: ಮನೆ ಕಟ್ಟುವ ಸಲುವಾಗಿ ಹಣಕಾಸಿನ ವ್ಯವಸ್ಥೆಯಲ್ಲಿ ತಂದೆಯವರಿಗೆ ಸಹಕರಿಸುವಿರಿ. ನಿಮ್ಮೊಡನೆ ಹರಿದು ಬರುವ ಸಿಹಿ ವಿಚಾರವನ್ನು, ಅವಕಾಶಗಳನ್ನು ಮತ್ತು ಕಹಿಯ ಸಂಗತಿಯನ್ನು ಮುಕ್ತ ಮನಸ್ಸಿನಿಂದ ಸಮಾನವಾಗಿ ಸ್ವೀಕರಿಸಿ.

ವೃಶ್ಚಿಕ: ಮನಸ್ಸು ಬೇಡದ ದಿಕ್ಕಿನಲ್ಲಿ ಹರಿಯುವುದನ್ನು ತಡೆಗಟ್ಟುವ ಬಗ್ಗೆ ಅಭ್ಯಾಸಿಸಿಕೊಳ್ಳಿರಿ. ಹೋಮ-ಹವನಾದಿ ಧಾರ್ಮಿಕ ಕೆಲಸದಲ್ಲಿ ಪಾಲ್ಗೊಳ್ಳುವ ಸದವಕಾಶ ಸಿಗಲಿದೆ. ವ್ಯಾಸಂಗಕ್ಕಾಗಿ ವಿದೇಶ ಪ್ರಯಾಣ ಬೆಳೆಸುವಂತಾಗಲಿದೆ.

ಧನು: ಲೋಹ ಮಾರಾಟಗಾರರು ಹಳೆಯ ಲೋಹಗಳನ್ನು ಕೊಳ್ಳುವ ರೀತಿಯಲ್ಲಿ ಅನಿರೀಕ್ಷಿತವಾಗಿ ಲಾಭ ಪಡೆಯುವರು. ಧರ್ಮ-ಕರ್ಮಗಳಲ್ಲಿ ಆಸಕ್ತಿ ಹೆಚ್ಚಲಿದೆ. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಸಾಧಾರಣ ಲಾಭವಿರುವುದು.

ಮಕರ: ಸಹಚರರಿಂದ ಅಥವಾ ಅಧಿಕಾರಿಗಳಿಂದ ನಿಮಗೆ ಅಸಹಕಾರದ ಪರಿಸ್ಥಿತಿ ಎದುರಾಗಬಹುದು. ನಿಮ್ಮ ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಹಂತ ಹಂತವಾಗಿ ಅಭಿವೃದ್ಧಿ ತೋರಿ ಬರುವುದು.

ಕುಂಭ: ಕಟ್ಟಡ ನಿರ್ಮಾಣದ ಕಾರ್ಮಿಕರಿಗೆ ಸಂತೋಷದಿಂದ ಕೆಲಸ ಮಾಡುವ ಮತ್ತು ಹೊಸದಾದ ಜಾಗ ಪ್ರಾಪ್ತಿಯಾಗುವುದು. ಇಂದಿನ ನಿಮ್ಮ ಮನಸ್ಥಿತಿ ಯಾರೊಂದಿಗೂ ಹೆಚ್ಚಾಗಿ ಬೆರೆಯದೆ, ಕೆಲಸ ಕಾರ್ಯಗಳತ್ತಲೇ ಇರುವುದು.

ಮೀನ: ದುಬಾರಿ ವಸ್ತುಗಳನ್ನು ಖರೀದಿಸುವ ಕುರಿತು ಹಾಗೂ ಅದರ ಅವಶ್ಯಕತೆಯ ಕುರಿತು ನಿಮ್ಮ ಮನೆಯವರೊಂದಿಗೆ ಚರ್ಚಿಸಿ ನಂತರ ಖರೀದಿಸಿ. ನಿಮ್ಮಿಂದ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿಯ ಪ್ರಸಂಗ ಇದ್ದೀತು.

ಪದಬಂಧ 5409 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಗ್ಗೊಲೆಯ ಪ್ರಸಂಗವಿದು (4)
3.ಪೀಠಿಕೆಯನ್ನು ಹೀಗೂ ಹೇಳುವರು (4)
5.ಕೆಲಸದವರು ಸಿಡಿಸಿರುವ ರಾಡಿ (3)
7.ದುಃಖ ಈ ರೀತಿ ಬಂದಿದೆ (3)
9.ಸವಿಯಾದುದು ಮರದೊಳಗಿದೆ (3)
10.ಬಾಣ ಹಿಡಿದಿರುವ ಶೈವ ಭಕ್ತ (3)
11.ವಾಲಿಯ ಮಗನಿವನು (3)
15.ಕೈಯಲ್ಲಿರುವ ಖಡ್ಗ (4)
16.ಕಾರನ್ನು ಏರಿ ನಡೆಸಿದ ಆಡಳಿತ (4)

ಮೇಲಿಂದ ಕೆಳಕ್ಕೆ
1.ದೇವರಿಗೆ ಸಲ್ಲಿಸುವ ಮುಡಿಪು (3)
2.ಡಬ್ಬುಗಾರನ ಆಡಂಬರ (2)
3.ವಾರದ ಕೊನೆಗೆ ಬಂದಿರುವ ಅಭ್ಯರ್ಥಿ (5)
4.ಆಯವ್ಯಯ ಮೊದಲಾದ ವಿಷಯಗಳ ವಿವರಗಳ ಪಟ್ಟಿ (2)
6.ಒಳ್ಳೆಯ ಅವಕಾಶ (5)
8. ಬಿಳಿಯ ಕೂದಲುಳ್ಳವನು (5)
9.ಸಾಯುವ ಸಮಯವಿದು (5)
12.ಒಡ್ಡೋಲಗದಲ್ಲಿ ಅಧಿಕಾರ ನಡೆಸುವಿಕೆ (3)
13.ಕಂಬಿ ತಿರುಗಿಸುತ್ತಾ ತೋರಿದ ಬಿನ್ನಾಣ (2)
14.ಉತ್ತರದ ಕಡೆಯವರ ಚಿಕ್ಕಪ್ಪ (2)



5408ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಲಹೆ 3.ಪಂಜರ 6.ರಿವಾಜು 7.ಸಿಬ್ಬಂದಿ 8.ಜಾಳಿಗೆ 9.ಚಿಂತೆ 10.ಬಸದಿ 12.ನರ 14.ಬಡವ 15.ಪದುಮ 16.ಪಾರ್ಥಿವ 17.ನೆನಪು 18.ಜೀವನ

ಮೇಲಿಂದ ಕೆಳಕ್ಕೆ:
1.ಸಮಜಾಯಿಷಿ 2.ಹೆರಿಗೆ 3.ಪಂಜು 4.ರಸಿಕತೆ 5.ಬಿದಿರು 9.ಚಿಂದಿ 10.ಬರ 11.ಹಯವದನ 12.ನಡುಮನೆ 13.ವಿಪಕ್ಷ 14.ಬವಣೆ 16.ಪಾಪ

ಸುಡೊಕು 5795

		7		8			2	
							7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5794 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಿವಮೊಗ್ಗದ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ಭಾಗಿಯಾದ ಆರೋಪ

ಅಕ್ರಮ ಹೂಳು: ₹71.45 ಲಕ್ಷ ನಷ್ಟ

● ಸಚ್ಚಿದಾನಂದ ಕುರಗುಂದ

ಪ್ರಜಾವಾಣಿ ವಿಶೇಷ

ಬೆಂಗಳೂರು: ಶಿವಮೊಗ್ಗ ತಾಲ್ಲೂಕಿನ ಅಬ್ಬಲಗೆರೆ ಗ್ರಾಮದಲ್ಲಿ ಅಕ್ರಮವಾಗಿ ಕೆರೆ ಹೂಳು (ಮಣ್ಣು) ತೆಗೆದು ಸರ್ಕಾರದ ಬೊಕ್ಕಸಕ್ಕೆ ₹71.45 ಲಕ್ಷಕ್ಕೂ ಹೆಚ್ಚು ನಷ್ಟ ಮಾಡಿರುವುದು ಪತ್ತೆಯಾಗಿದೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅಧ್ಯಕ್ಷರಾಗಿರುವ ಶಿವಮೊಗ್ಗದ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘವೇ ಈ ಕೃತ್ಯದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದೆ. ಶಿವಮೊಗ್ಗ ಜಿಲ್ಲಾ ಪಂಚಾಯಿತಿಯ ಕಾರ್ಯಪಾಲಕ ಎಂಜಿನಿಯರ್ ಅವರು ಅಕ್ರಮವಾಗಿ ಹೂಳು ಸಾಗಿಸಿರುವ ಕುರಿತು ತನಿಖಾ ವರದಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಿದ್ದಾರೆ. ಈ ವರದಿ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಅಬ್ಬಲಗೆರೆಯ ಮುದ್ದಣ್ಣನ ಕೆರೆಯಲ್ಲಿ ಕಾನೂನುಬಾಹಿರವಾಗಿ ಮಣ್ಣು ತೆಗೆದು ಖಾಸಗಿ ಲೇಔಟ್‌ಗಳಿಗೆ ಸಾಗಿಸಲಾಗಿದೆ. ಕೇವಲ 500 ಲೋಡ್‌ಗೆ ಅನುಮತಿ ಪಡೆದಿದ್ದರೂ, 15,004 ಲೋಡು ಮಣ್ಣನ್ನು ಅಕ್ರಮವಾಗಿ ಬಳಕೆ ಮಾಡಲಾಗಿದೆ ಎಂದು ವರದಿಯಲ್ಲಿದೆ.

ಕೆರೆಯಲ್ಲಿನ ಫಲವತ್ತಾದ ಮಣ್ಣನ್ನು ಸಾಗಿಸಲಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡ ಜಗದೀಶ್ ಈ ಬಗ್ಗೆ ದೂರು ಸಲ್ಲಿಸಿದ್ದರು.

ಪ್ರಕರಣದ ವಿವರ: ಶಿವಮೊಗ್ಗದ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರು, ವಸತಿ ಬಡಾವಣೆ ನಿರ್ಮಿಸಲು ಇದೇ ವರ್ಷ ಮಾರ್ಚ್ 23ರಂದು ಮುದ್ದಣ್ಣನ ಕೆರೆಯಿಂದ 500 ಲೋಡು ಮಣ್ಣು ತೆಗೆಯಲು ನಿರಾಕ್ಷೇಪಣಾ ಪತ್ರವನ್ನು ಅಬ್ಬಲಗೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪರಮೇಶ್ವರಪ್ಪ ಎಸ್.ಜಿ. ಅವರಿಂದ ಪಡೆದಿದ್ದರು.

ಆದರೆ, ಕೆರೆಯ ಮೂಲ ಒಡೆತನ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗದ ಸ್ವಾಧೀನದಲ್ಲಿದೆ.

40 ಹೆಕ್ಟೇರ್‌ಗಿಂತ ಕಡಿಮೆ ಅಚ್ಚುಕಟ್ಟು ಪ್ರದೇಶವುಳ್ಳ ಜಿಲ್ಲಾ ಪಂಚಾಯಿತಿ ಕೆರೆಗಳನ್ನು 'ಪಂಚಾಯಿತಿ ಕೆರೆ' ಎಂದು ನಾಮಕರಣ ಮಾಡಿ, ನಿರ್ವಹಣೆ ಮಾಡಲು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಲಾಗಿದೆ. ಆದರೆ, ಕೆರೆಯಲ್ಲಿ ಹೂಳು ತೆಗೆಯಲು ಮೂಲ ಇಲಾಖೆಯ ಅನುಮತಿ ಪಡೆಯಬೇಕು. ಕೆರೆಗಳಿಂದ ಮೂರು ಅಡಿಗಳಿಗಿಂತ ಆಳದಲ್ಲಿ ಹೆಚ್ಚು ಹೂಳು ತೆಗೆಯಲು ನಿರ್ಬಂಧ ವಿಧಿಸಿರುವ ಕುರಿತು ಶಿವಮೊಗ್ಗ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪಿಡಿಒಗಳಿಗೆ ಪತ್ರ ಬರೆದಿದ್ದರು. ಆದರೂ, ಅಬ್ಬಲಗೆರೆ ಗ್ರಾಮ ಪಂಚಾಯಿತಿ ಪಿಡಿಒ, ಹಿರಿಯ ಅಧಿಕಾರಿಗಳ ಆದೇಶವನ್ನು ಉಲ್ಲಂಘಿಸಿದ್ದಾರೆ ಎಂದು ಉಲ್ಲೇಖಿಸಲಾಗಿದೆ.

ಹಿರಿಯ ಭೂವಿಜ್ಞಾನಿಗಳು ಕೆರೆಯಿಂದ ತೆಗೆದ ಮಣ್ಣಿಗೆ ಕೇವಲ ₹40 ಸಾವಿರ ರಾಜಧನ ನಿಗದಿ ಮಾಡಿದ್ದು, ಜತೆಗೆ, ಕೆರೆಯಲ್ಲಿ ಮರಳು ಇದೆ ಎಂದು ಭಾವಿಸಿ ₹16ಸಾವಿರ ರಾಜಧನ ವಸೂಲಿ ಮಾಡಿದ್ದಾರೆ.

ಕೆರೆಯಅಂಗಳದಲ್ಲಿ ₹72,01,920 ರಾಜಧನದ ಮೊತ್ತದಷ್ಟು ಹೂಳು ತೆಗೆಯಲಾಗಿದೆ. ಆದರೆ, ಕೇವಲ ₹56 ಸಾವಿರ ಮಾತ್ರ ಪಾವತಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಅಗಾಧ ನಷ್ಟ ಉಂಟು ಮಾಡಲಾಗಿದೆ. ರಾಜಧನದ ಮೊತ್ತವನ್ನು ಹಿರಿಯ ಭೂವಿಜ್ಞಾನಿಗಳ ಬದಲಾಗಿ ಕೆರೆಯ ಒಡೆತನವಿರುವ ಕಾರ್ಯಪಾಲಕ ಎಂಜಿನಿಯರ್ ಅವರ ಕಚೇರಿಯಲ್ಲಿ ಪಾವತಿಸಬೇಕಾಗಿತ್ತು. ಇದರಲ್ಲೂ ಸಹ ತಪ್ಪು ಮಾಡಿರುವುದು ಪತ್ತೆಯಾಗಿದೆ ಎಂದೂ ವರದಿ ಹೇಳಿದೆ.

ತನಿಖಾ ವರದಿಯ ಸಾರಾಂಶ

- ಅಂದಾಜುಪಟ್ಟಿ ಪ್ರಕಾರ ಒಂದು ಕೋಟಿ ರೂಪಾಯಿಗೂ ಹೆಚ್ಚು ಮೊತ್ತದ ಹೂಳನ್ನು ಅಕ್ರಮವಾಗಿ ಖಾಸಗಿ ಲೇಔಟ್‌ಗೆ ಸಾಗಿಸಲಾಗಿದೆ.
- ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯು ಹಿರಿಯ ಅಧಿಕಾರಿಗಳ ಆದೇಶ ಉಲ್ಲಂಘಿಸಿ ಅಕ್ರಮವಾಗಿ ಹೂಳು ತೆಗೆಯಲು ನಿರಾಕ್ಷೇಪಣಾ ಪತ್ರ ನೀಡಿದ್ದಾರೆ.
- ಮುದ್ದಣ್ಣನ ಕೆರೆಗೂ ಮತ್ತು ಹಿರಿಯ ಭೂವಿಜ್ಞಾನಿಗಳಿಗೂ ಯಾವುದೇ ಸಂಬಂಧ ಇಲ್ಲ. ಶಿವಮೊಗ್ಗದ ಪಂಚಾಯತ್‌ರಾಜ್ ಎಂಜಿನಿಯರಿಂಗ್ ವಿಭಾಗಕ್ಕೆ ಮಾತ್ರ ಇದು ಸಂಬಂಧಿಸಿದ್ದು.
- ಕೆರೆ ಹೂಳನ್ನು ಹದಿನೈದು ಅಡಿ ಆಳದವರೆಗೆ ತೆಗೆದಿರುವುದು ಕಾನೂನುಬಾಹಿರ.
- ಕೆರೆ ಹೂಳನ್ನು ಖಾಸಗಿ ಲೇಔಟ್‌ಗೆ ತೆಗೆದುಕೊಂಡು ಹೋಗಲು ಅನುಮತಿ ಕೋರಿರುವವರು ಮತ್ತು ತೆಗೆದುಕೊಂಡು ಹೋದವರು ಸಹ ಅಕ್ರಮದಲ್ಲಿ ಭಾಗಿ.
- ಕೆರೆ ಹೂಳಿಗೆ ರಾಜಧನದ ಮೊತ್ತ ₹71.45 ಲಕ್ಷ ಮೊತ್ತವನ್ನು ಪಾವತಿಸದೆ ಅಕ್ರಮವಾಗಿ ಸಾಗಿಸಿರುವುದು ಸಾಬೀತು.

ನಮಗೆ ಸಂಬಂಧವೇ ಇಲ್ಲ: ಷಡಾಕ್ಷರಿ

'ಕೆರೆ ಮಣ್ಣಿಗೂ ನಮಗೂ ಸಂಬಂಧವೇ ಇಲ್ಲ. ಸಮಗ್ರ ತನಿಖೆ ನಡೆಯಲಿ. ಖಾಸಗಿ ಡೆವಲಪರ್ಸ್‌ನವರು ನಿವೇಶನಗಳನ್ನು ಸಿದ್ಧಪಡಿಸುತ್ತಿದ್ದಾರೆ. ಮಣ್ಣು ತೆಗೆದಿದ್ದಕ್ಕೆ ಅವರು ರಾಜಧನ ಪಾವತಿಸಿದ್ದಾರೆ. ನಾವು ಕೆರೆ ಮಣ್ಣು ತೆಗೆದಿಲ್ಲ. ಹೀಗಾಗಿ, ಸಂಘದಿಂದ ರಾಜಧನ ಪಾವತಿಸುವ ಅಥವಾ ಹೆಚ್ಚು ಮಣ್ಣು ತೆಗೆದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಂಘದ ಹೆಸರಿನಲ್ಲಿ ಜಾಗವೂ ಇಲ್ಲ, ಬಡಾವಣೆಯೂ ಇಲ್ಲ. ಡೆವಲಪರ್ಸ್ ಅವರಿಂದ ನಿವೇಶನಗಳನ್ನು ಖರೀದಿಸಲು ಒಪ್ಪಂದ ಮಾತ್ರ ಮಾಡಿಕೊಂಡಿದ್ದೇವೆ. ಕೆರೆಯಲ್ಲಿನ ಹೂಳನ್ನು ಅನುಮತಿ ಇಲ್ಲದೆಯೇ ಇತರ 15–20 ಮಂದಿ ಸಹ ತೆಗೆದಿದ್ದಾರೆ. ನಿಯಮಗಳ ಪ್ರಕಾರ ನಾವು ಖಾಸಗಿ ಡೆವಲಪರ್ಸ್ ಪರವಾಗಿ ಅನುಮತಿಗಾಗಿ ಗ್ರಾಮ ಪಂಚಾಯಿತಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಪತ್ರ ಮಾತ್ರ ನೀಡಲಾಗಿತ್ತು. ಈ ಇಲಾಖೆಗಳು ನಿಯಮಗಳ ಅನುಸಾರ ಕ್ರಮಕೈಗೊಂಡಿವೆ' ಎಂದು ಸಿ.ಎಸ್. ಷಡಾಕ್ಷರಿ ಪ್ರತಿಕ್ರಿಯಿಸಿದರು.

ಬೆಳಗಾವಿಯಲ್ಲಿ ಶನಿವಾರ ಮೂವರ ಸಾವು ಸಂಭವಿಸಿದ ಸ್ಥಳದಲ್ಲಿ ಕುಟುಂಬದವರ ದುಃಖ ಮುಗಿಲು ಮುಟ್ಟಿತು – ಪ್ರಜಾವಾಣಿ ಚಿತ್ರ

ಬೆಳಗಾವಿ: ವಿದ್ಯುತ್ ಸ್ಪರ್ಶ ಸ್ಥಳದಲ್ಲೇ ಮೂವರ ಸಾವು

ಪ್ರಜಾವಾಣಿ ವಾರ್ತೆ

ಈರಪ್ಪ

ಶಾಂತವ್ವ

ಅನ್ನಪೂರ್ಣಾ

ಬೆಳಗಾವಿ: ಇಲ್ಲಿನ ಶಾಹೂನಗರದ ಮೂರನೇ ಕ್ರಾಸ್ ಬಳಿ ನಿರ್ಮಾಣ ಹಂತದಲ್ಲಿದ್ದ ಕಟ್ಟಡದಲ್ಲಿ ಶನಿವಾರ ಬೆಳಿಗ್ಗೆ ವಿದ್ಯುತ್ ಸ್ಪರ್ಶದಿಂದ ಅಜ್ಜ, ಅಜ್ಜಿ ಮತ್ತು ಮೊಮ್ಮಗಳು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ರಾಮದುರ್ಗ ತಾಲ್ಲೂಕಿನ ಅರೆಬೆಂಚಿ ತಾಂಡಾದ ಈರಪ್ಪ ಗಣಗಪ್ಪ ರಾಠೋಡ (55), ಅವರ ಪತ್ನಿ ಶಾಂತವ್ವ (50) ಮತ್ತು ಮೊಮ್ಮಗಳು ಅನ್ನಪೂರ್ಣಾ (8) ಮೃತರು. ಇವರೊಂದಿಗೆ ಇದ್ದ ಇನ್ನೊಬ್ಬ ಮೊಮ್ಮಗಳು ಪ್ರಿಯಾ (10) ಪ್ರಾಣಾಪಾಯದಿಂದ ಪಾರಾಗಿದ್ದಾಳೆ.

ಈರಪ್ಪ ಅವರ ಪುತ್ರ ಹೊನ್ನಪ್ಪ ಮತ್ತು ಸೊಸೆ ಅಮಿಶಾ ಬೇರೊಂದು ಕಟ್ಟಡಕ್ಕೆ ವಾಚಮನ್ ಆಗಿದ್ದರಿಂದ ಘಟನೆ ವೇಳೆ ಸ್ಥಳದಲ್ಲಿ ಇರಲಿಲ್ಲ.

ವಿವರ: 'ನಿರ್ಮಾಣ ಹಂತದ ಕಟ್ಟಡದ ಪಕ್ಕದಲ್ಲಿರುವ ತಗಡಿನ ಶೆಡ್‌ನಲ್ಲಿ ಈ ಕುಟುಂಬ ವಾಸವಿತ್ತು. ಎಂದಿನಂತೆ ಬೆಳಿಗ್ಗೆ 6ರ ಸುಮಾರಿಗೆ ಈರಪ್ಪ ಅವರು ಸಿಮೆಂಟ್ ಕಟ್ಟಡಕ್ಕೆ ನೀರುಣಿಸಲು ಮುಂದಾದರು. ನೀರೆತ್ತುವ ಮೋಟರ್‌ನ ಬಟನ್ ಒತ್ತುವಂತೆ ಮೊಮ್ಮಗಳು ಅನ್ನಪೂರ್ಣಾಗೆ ತಿಳಿಸಿದರು. ಬಟನ್ ಒತ್ತಿ ಶೆಡ್‌ನಿಂದ ಹೊರಬಂದ ಆಕೆ ಕೆಳಗೆ ಬಿದ್ದಿದ್ದ ವಿದ್ಯುತ್ ವೈರ್ ಅನ್ನು ಆಕಸ್ಮಿಕವಾಗಿ ಸ್ಪರ್ಶಿಸಿದಳು. ನೆಲ ಹಸಿಯಾಗಿದ್ದರಿಂದ ವಿದ್ಯುತ್ ಪ್ರವಹಿಸಿ, ಆಕೆ ಕುಸಿದು ಬಿದ್ದಳು. ಇದನ್ನು ಕಂಡು ಓಡಿ ಬಂದ ಅಜ್ಜಿ ಶಾಂತವ್ವ ಅವರಿಗೂ ವಿದ್ಯುತ್ ಸ್ಪರ್ಶವಾಯಿತು. ಇಬ್ಬರನ್ನು ಕಾಪಾಡಲು ಮುಂದಾದ ಈರಪ್ಪ ಅವರಿಗೂ ವಿದ್ಯುತ್ ಸ್ಪರ್ಶವಾಗಿ, ಮೃತಪಟ್ಟರು. ಶೆಡ್ ಒಳಗಿದ್ದ ಪ್ರಿಯಾ ಭಯದಿಂದ ದೂರ ಓಡಿ ಬಂದಳು' ಎಂದು ಪೊಲೀಸರು ಹೇಳಿದ್ದಾರೆ.

ಪರಿಹಾರ ಘೋಷಿಸುವವರೆಗೆ ಶವ ಎತ್ತಲು ಬಿಡುವುದಿಲ್ಲ ಎಂದು ನೆರೆದವರು ಪಟ್ಟು ಹಿಡಿದರು. ನಂತರ ತಾಂಡಾದ ಹಿರಿಯರ ನೇತೃತ್ವದಲ್ಲಿ ಪೊಲೀಸರು ದೇಹಗಳನ್ನು ಮರಣೋತ್ತರ ಪರೀಕ್ಷೆಗೆ ಸಾಗಿಸಿದರು.

ಸ್ಥಳಕ್ಕೆ ಭೇಟಿ ನೀಡಿದ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು, 'ಮೃತರ ಕುಟುಂಬಕ್ಕೆ ತಲಾ ₹2 ಲಕ್ಷ ಪರಿಹಾರ ಕೊಡಿಸಲಾಗುವುದು' ಎಂದರು..

ಹೆಸ್ಕಾಂ, ಮಾಲೀಕರ ವಿರುದ್ಧ ಕೇಸ್

'ಮೂವರ ಸಾವಿಗೆ ಹೆಸ್ಕಾಂ ಅಧಿಕಾರಿಗಳು, ಮನೆಯ ಮಾಲೀಕರು ಮತ್ತು ಕಾಮಗಾರಿ ಗುತ್ತಿಗೆದಾರರ ನಿರ್ಲಕ್ಷ್ಯ ಕಾರಣ ಎಂದು ಗೊತ್ತಾಗಿದೆ. ಮೂವರ ಮೇಲೂ '304' ಅಡಿ ಪ್ರಕರಣ ದಾಖಲಿಸಲಾಗುವುದು' ಎಂದು ನಗರ ಪೊಲೀಸ್ ಕಮಿಷನರ್ ಎಸ್.ಎನ್. ಸಿದ್ದರಾಮಪ್ಪ ಹೇಳಿದರು.

ಸ್ಥಳ ಪರಿಶೀಲನೆ ಬಳಿಕ ಮಾತನಾಡಿದ ಅವರು, 'ವಿದ್ಯುತ್ ಸಂಪರ್ಕ ನೀಡುವಲ್ಲಿ ನಿಯಮ ಉಲ್ಲಂಘಿಸಲಾಗಿದೆ. ಕಟ್ಟಡ ನಿರ್ಮಾಣ ಕಾಮಗಾರಿ ವೇಳೆ ಕೈಗೊಳ್ಳಬೇಕಾದ ಕ್ರಮಗಳನ್ನೂ ಗುತ್ತಿಗೆದಾರ ಕೈಗೊಂಡಿಲ್ಲ. ಮನೆಯ ಮಾಲೀಕರಾದ ಸರೋಜಿನಿ ನರಸಿಂಗನವರ ಎಂಬುವರು ಬೆಂಗಳೂರಿನಲ್ಲಿ ಇದ್ದಾರೆ' ಎಂದು ತಿಳಿಸಿದರು.

ಬಿ.ಇಡಿ ಕಡ್ಡಾಯ ರದ್ದು

ಒಂದನೇ ಪುಟದಿಂದ...

ಪ್ರಾಥಮಿಕ ಹಂತದ ತರಗತಿಗಳಲ್ಲಿ ಕಲಿಸಲು ಬಿ.ಇಡಿ. ಅರ್ಹತೆಯ ಅಗತ್ಯ ಇಲ್ಲ. ಈ ತರಗತಿಗಳಲ್ಲಿ ಕಲಿಸಲು ಭಿನ್ನವಾದ ಅರ್ಹತೆ ಅಗತ್ಯ ಇದೆ. ಪ್ರಾಥಮಿಕ ತರಗತಿಗಳಿಗೆ ಬೋಧಿಸಲು ಬಿ.ಇಡಿ. ವಿದ್ಯಾರ್ಹತೆ ಇರುವವರು ಆಯ್ಕೆ ಆಗಿದ್ದರೆ ನೇಮಕವಾಗಿ ಎರಡು ವರ್ಷಗಳೊಳಗೆ ಬೋಧನೆಗೆ ಸಂಬಂಧಿಸಿದ ಕೋರ್ಸ್ ಒಂದನ್ನು ಪೂರ್ಣಗೊಳಿಸಬೇಕು ಎಂದು ಬೋಧನಾ ಶಿಕ್ಷಣ ರಾಷ್ಟ್ರೀಯ ಪರಿಷತ್ (ಎನ್‌ಸಿಟಿಇ) ಹೇಳಿರುವುದು ಇದನ್ನು ಪುಷ್ಟೀಕರಿಸುತ್ತದೆ ಎಂದು ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ಪೀಠವು ಹೇಳಿದೆ.

ಪ್ರಾಥಮಿಕ ಶಾಲೆಯ ಶಿಕ್ಷಕರಾಗಲು ಬಿ.ಇಡಿ. ಅನ್ನು ಅರ್ಹತೆಯಾಗಿ ನಿಗದಿ ಮಾಡುವ ಮೂಲಕ ಸರ್ಕಾರವು ಸಂವಿಧಾನ ಮತ್ತು ಕಾನೂನುಗಳನ್ನು ಉಲ್ಲಂಘಿಸಿದೆ. ಶಿಕ್ಷಕರಿಗೆ ಸಂಬಂಧಿಸಿದಂತೆ ಬೋಧನಾ ಕೌಶಲವು ಅತ್ಯಂತ ಮಹತ್ವದ್ದಾಗಿದೆ ಎಂದು ಕೋರ್ಟ್ ಹೇಳಿದೆ.

ಬಿ.ಇಡಿ. ಅನ್ನು ಅರ್ಹತೆಯಾಗಿ ನಿಗದಿ ಮಾಡಲು ಸರ್ಕಾರ ನೀಡಿರುವ ಒಂದೇ ಒಂದು ಸಮರ್ಥನೆ ಏನೆಂದರೆ, ಇದು 'ಉನ್ನತ ಅರ್ಹತೆ' ಎಂಬುದಾಗಿದೆ. ನೀತಿಗೆ ಸಂಬಂಧಿಸಿದ ನಿರ್ಧಾರ ಎಂದು ಪರಿಗಣಿಸಿದರೂ ಇದು ಸರಿಯಾದ ಕ್ರಮ ಅಲ್ಲ ಎಂದು ಕೋರ್ಟ್ ಹೇಳಿದೆ.

ಪ್ರಾಥಮಿಕ ಶಾಲೆಯಲ್ಲಿ ಬೋಧಿಸಲು ಪ್ರಾಥಮಿಕ ಶಿಕ್ಷಣ ಡಿಪ್ಲೊಮಾವೇ (ಡಿ.ಎಡ್.) ಅರ್ಹತೆಯೇ ಹೊರತು ಬಿ.ಇಡಿ. ಅಲ್ಲ ಎಂದು ಸುಪ್ರೀಂ ಕೋರ್ಟ್ ಹಲವು ಬಾರಿ ಹೇಳಿದ್ದಾಗಿಯೂ ಪೀಠ ತಿಳಿಸಿದೆ.

ಬಿಜೆಪಿ ಪ್ರಾಯೋಜಿತ ಆರೋಪ: ಡಿಕೆಶಿ

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: 'ನಮ್ಮ ಸರ್ಕಾರದ ಸಚಿವರು, ಶಾಸಕರು ಲಂಚ ಕೇಳಿಲ್ಲ ಎಂದು ಕೆಂಪಣ್ಣ ಮಾತ್ರವಲ್ಲ, ಇತರೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೂ ಸ್ಪಷ್ಟನೆ ನೀಡಿದ್ದಾರೆ. ಬಿಜೆಪಿ ಪ್ರಾಯೋಜಿತ ಗುತ್ತಿಗೆದಾರರು ಮಾತ್ರ ಸರ್ಕಾರದ ವಿರುದ್ಧ ಕಮಿಷನ್ ಆರೋಪ ಮಾಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಜನರಿಗೆ ನಾವು ದಕ್ಷ, ಭ್ರಷ್ಟಾಚಾರರಹಿತ ಆಡಳಿತ ನೀಡುವ ವಚನ ನೀಡಿ ಅಧಿಕಾರಕ್ಕೆ ಬಂದಿದ್ದು, ಪಾರದರ್ಶಕ ಆಡಳಿತ ನೀಡಲು ಬದ್ಧರಾಗಿದ್ದೇವೆ' ಎಂದರು.

'ನಾನು, ಸಿದ್ದರಾಮಯ್ಯ ನಮ್ಮದೇ ಆದ ರಾಜಕೀಯ ಹಿನ್ನೆಲೆ ಹೊಂದಿದ್ದೇವೆ. ಕೆಂಪಣ್ಣ ಅವರು ಬಹಳ ಹಿರಿಯರು. ಅವರು ಬಿಜೆಪಿ ಸರ್ಕಾರ ಬಾಕಿ ಉಳಿಸಿರುವ ಬಿಲ್ ಪಾವತಿ ಬಗ್ಗೆ ಮನವಿ ಮಾಡಲು ನನ್ನನ್ನು ಭೇಟಿ ಮಾಡಿದ್ದರು. ಬಿಜೆಪಿ ಸರ್ಕಾರ ಯಾಕೆ ಬಿಲ್ ಪಾವತಿ ಮಾಡಲಿಲ್ಲ ಎಂಬುದು ನನ್ನ ಪ್ರಶ್ನೆ' ಎಂದರು.

'ನಮ್ಮ ಸರ್ಕಾರದ ಯಾವುದೇ ಸಚಿವರು ಲಂಚ ಕೇಳಿಲ್ಲ ಎಂದು ಕೆಂಪಣ್ಣ ಮಾತ್ರವಲ್ಲದೆ ಇತರೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸ್ಪಷ್ಟನೆ ನೀಡಿದ್ದರೂ ಈ ವಿಚಾರದಲ್ಲಿ ಗುತ್ತಿಗೆದಾರರನ್ನು ಬಳಸಿಕೊಂಡು ಬಿಜೆಪಿ ಶಾಸಕರಾದ ಅಶೋಕ, ಅಶ್ವತ್ಥ ನಾರಾಯಣ, ಗೋಪಾಲಯ್ಯ ರಾಜಕೀಯ ಮಾಡುತ್ತಿದ್ದಾರೆ. ಅವರು ತಮ್ಮ ತಿಮಿಂಗಿಲಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ' ಎಂದು ಆರೋಪಿಸಿದರು.

ದಾಖಲೆ ಸಹಿತ ಮಾತನಾಡುತ್ತೇನೆ: 'ಯಾವುದೇ ಸಚಿವರು ಕಿಕ್ ಬ್ಯಾಕ್ ಕೇಳಿಲ್ಲ' ಎಂಬ ಕೆಂಪಣ್ಣ ಅವರ ಸ್ಪಷ್ಟನೆ ಹಾಗೂ ಬಿಜೆಪಿ ಆರೋಪದ ಬಗ್ಗೆ ಕೇಳಿದಾಗ, 'ಬಿಜೆಪಿಯವರು ಕಣ್ಣುಮುಚ್ಚಿ ಮೂರೂವರೆ ವರ್ಷ ಸರ್ಕಾರ ಮಾಡಿದರೆ? ಯಾವುದೇ ಬಿಲ್ ಬಾಕಿ ಇದ್ದರೂ ಅವುಗಳ ಪಾವತಿ ಪ್ರಕ್ರಿಯೆ ಆರಂಭವಾಗಿಲ್ಲ. ಹೀಗಿರುವಾಗ ಕಿಕ್ ಬ್ಯಾಕ್ ಕೇಳಲು ಹೇಗೆ ಸಾಧ್ಯ? ಬಿಜೆಪಿ ಅವಧಿಯ ಹಗರಣಗಳ ಬಗ್ಗೆ ನಾನು ದಾಖಲೆ ಸಮೇತ ಮಾತನಾಡುತ್ತೇನೆ' ಎಂದು ಅವರು ತಿಳಿಸಿದರು.

ಭ್ರಷ್ಟಾಚಾರಕ್ಕೆ ಕರ್ನಾಟಕ ಬ್ರ್ಯಾಂಡ್: ಬಸವರಾಜ ರಾಯರಡ್ಡಿ

ಕೊಪ್ಪಳ: ಭ್ರಷ್ಟಾಚಾರದ ವಿಷಯದಲ್ಲಿ ಕರ್ನಾಟಕ ಬ್ರ್ಯಾಂಡ್ ಆಗುತ್ತಿದ್ದು, ಇದು ಒಳ್ಳೆಯ ಬೆಳವಣಿಗೆಯಲ್ಲ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಕ್ರಮ ವಹಿಸಬೇಕು' ಎಂದು ಯಲಬುರ್ಗಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

'ಶ್ರಾವಣ ಸಂಭ್ರಮ' ಹೆಸರಿನಲ್ಲಿ ಇಲ್ಲಿ ಶನಿವಾರ ಪಕ್ಷದ ಕಾರ್ಯಕರ್ತರು ಹಾಗೂ ನಾಯಕರಿಗೆ ಅವರು ಆಯೋಜಿಸಿದ್ದ ಔತಣ ಕೂಟದ ವೇಳೆ ಮಾಧ್ಯಮದವರ ಜೊತೆ ಮಾತನಾಡಿ, 'ಹಿಂದೆ ಬಿಜೆಪಿ ಸರ್ಕಾರ ಆಡಳಿತವಿದ್ದಾಗ ಗುತ್ತಿಗೆದಾರರು ಶೇ 40ರಷ್ಟು ಕಮಿಷನ್ ಆರೋಪ ಮಾಡಿದ್ದರು. ಈಗ ಶೇ 15ರಷ್ಟು ಕಮಿಷನ್ ಎಂದು ಆರೋಪಿಸುತ್ತಿದ್ದಾರೆ. ಆಗ ನಾವು ಬಿಜೆಪಿಯನ್ನು ತರಾಟೆಗೆ ತೆಗೆದುಕೊಂಡಿದ್ದೆವು. ಈಗ ಅವರು ನಮ್ಮ ಪಕ್ಷವನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಹೀಗಾಗಿ ಕರ್ನಾಟಕಕ್ಕೆ ಕೆಟ್ಟ ಹೆಸರು ಬರುತ್ತಿದೆ' ಎಂದರು.

'ಭ್ರಷ್ಟಾಚಾರಕ್ಕೆ ಅಂತ್ಯ ಹಾಡಲು ಮುಖ್ಯಮಂತ್ರಿ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ಪಡೆದು ಕ್ರಮ ಕೈಗೊಳ್ಳಬೇಕು. ವಿರೋಧ ಪಕ್ಷದವರೂ ಇದಕ್ಕೆ ಸಹಕಾರ ನೀಡಬೇಕು. ಬಿಜೆಪಿ ಮತ್ತು ಕಾಂಗ್ರೆಸ್ ಯಾರೇ ಭ್ರಷ್ಟಾಚಾರ ಮಾಡಿದರೂ ರಾಜ್ಯಕ್ಕೆ ಕೆಟ್ಟ ಹೆಸರು ಬರುತ್ತದೆ. ಚುನಾವಣಾ ಸಮಯದಲ್ಲಿ ನಾಮಪತ್ರ ಸಲ್ಲಿಸಿದ ದಿನದಿಂದಲೇ ಭ್ರಷ್ಟಾಚಾರ ಶುರುವಾಗುತ್ತದೆ. ಇದಕ್ಕೆ ಕಡಿವಾಣ ಹಾಕಲು ರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗಬೇಕು' ಎಂದು ಆಗ್ರಹಿಸಿದರು.

ಗುತ್ತಿಗೆದಾರರು ಈಗ ಅಪ್ರಾಮಾಣಿಕರಾದರೆ?: ಸೋಮಣ್ಣ

ಬೆಂಗಳೂರು: 'ಗುತ್ತಿಗೆದಾರರು ಬಿಜೆಪಿ ಸರ್ಕಾರದ ವಿರುದ್ಧ ಮಾಡಿದ್ದ ಕಮಿಷನ್ ಆರೋಪದಿಂದ ಕಾಂಗ್ರೆಸ್ ಪಕ್ಷಕ್ಕೆ 135 ಸ್ಥಾನ ದೊರಕಿದೆ. ಅಧಿಕಾರಕ್ಕೆ ಬಂದು ಎರಡೇ ತಿಂಗಳಲ್ಲಿ ಅದೇ ಗುತ್ತಿಗೆದಾರರು ಅಪ್ರಾಮಾಣಿಕರಾದರೆ' ಎಂದು ಬಿಜೆಪಿ ಮುಖಂಡ ವಿ. ಸೋಮಣ್ಣ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಎಲ್ಲ ಗುತ್ತಿಗೆದಾರರೂ ಪ್ರಾಮಾಣಿಕರು. ಅವರು ಹೇಳುವುದೆಲ್ಲವೂ ಸತ್ಯ ಎಂದು ಕಾಂಗ್ರೆಸ್ ಪಕ್ಷದವರು ಚುನಾವಣೆಗೂ ಮೊದಲು ಹೇಳುತ್ತಿದ್ದರು. ಅವರೆಲ್ಲರೂ ಎರಡೇ ತಿಂಗಳೊಳಗೆ ಹೇಗೆ ಅಪ್ರಾಮಾಣಿಕರಾದರು' ಎಂದು ಕೇಳಿದರು.

ಬಿಬಿಎಂಪಿಯಲ್ಲಿ ನಡೆದಿರುವ ಕಾಮಗಾರಿಗಳ ಕುರಿತು ತನಿಖೆ ನಡೆಸುವುದಕ್ಕೆ ತಮ್ಮ ಅಭ್ಯಂತರವಿಲ್ಲ. ಆ ಕೆಲಸ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಿಂದಲೇ ಆರಂಭವಾಗಲಿ. ಕಾಮಗಾರಿ ನಡೆಸದೇ ಬಿಲ್ ಪಡೆಯುವ ಪ್ರಯತ್ನ ನಡೆದಿದ್ದರೆ ಕ್ರಮ ಜರುಗಿಸಲಿ. ಆದರೆ, ತನಿಖೆಯ ಹೆಸರಿನಲ್ಲಿ ಗುತ್ತಿಗೆದಾರರ ಬದುಕು ಬೀದಿಗೆ ಬರುವಂತೆ ಮಾಡಬಾರದು ಎಂದರು.

ಐವರಿಗೆ ಕೇಂದ್ರ ಗೃಹ ಸಚಿವರ ಪದಕ

ಶಂಕರ್

ಶಿವಸ್ವಾಮಿ

ಪಿ. ಸುರೇಶ್

ರುದ್ರೇಗೌಡ

ರಾಮಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆ ಮತ್ತು ಮಕ್ಕಳಿಗೆ ಸಂಬಂಧಪಟ್ಟ ಅಪರಾಧ ಪ್ರಕರಣಗಳ ತನಿಖೆಯನ್ನು ಯಶಸ್ವಿಯಾಗಿ ನಡೆಸಿ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಕ್ರಮ ವಹಿಸಿದ್ದ ರಾಜ್ಯದ ಐವರು ಪೊಲೀಸ್ ಅಧಿಕಾರಿಗಳಿಗೆ ಕೇಂದ್ರ ಗೃಹ ಸಚಿವರ 2023ನೇ ಸಾಲಿನ ಪದಕ ಲಭಿಸಿದೆ.

ಕರ್ನಾಟಕ ಸಚಿವಾಲಯದ ಡಿವೈಎಸ್ಪಿ ಶಂಕರ್ ಎಂ. ರಾಗಿ, ತಾವರೆಕೆರೆ ಠಾಣೆ ಇನ್‌ಸ್ಪೆಕ್ಟರ್ ರಾಮಪ್ಪ ಬಿ. ಗುತ್ತೇರ, ಬೆಂಗಳೂರು ಹೈಗ್ರೌಂಡ್ಸ್ ಠಾಣೆ ಇನ್‌ಸ್ಪೆಕ್ಟರ್ ಸಿ.ಬಿ. ಶಿವಸ್ವಾಮಿ, ಆರ್‌ಎಂಸಿ ಯಾರ್ಡ್ ಠಾಣೆ ಇನ್‌ಸ್ಪೆಕ್ಟರ್ ಪಿ. ಸುರೇಶ್ ಹಾಗೂ ಶಿವಮೊಗ್ಗ ವಿನೋಬನಗರದ ಇನ್‌ಸ್ಪೆಕ್ಟರ್ ರುದ್ರೇಗೌಡ ಆರ್. ಪಾಟೀಲ ಅವರು ಪದಕಕ್ಕೆ ಭಾಜನರಾಗಿದ್ದಾರೆ.

'ದೇಶದ 140 ಪೊಲೀಸ್ ಅಧಿಕಾರಿಗಳು ಈ ಬಾರಿ ಪದಕಕ್ಕೆ ಆಯ್ಕೆಯಾಗಿದ್ದಾರೆ. ತನಿಖೆಯಲ್ಲಿ ಶ್ರೇಷ್ಠತೆ ಗುರುತಿಸುವ ಉದ್ದೇಶದಿಂದ 2018ರಿಂದ ಈ ಪದಕ ನೀಡಲಾಗುತ್ತಿದೆ' ಎಂದು ಕೇಂದ್ರ ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ರಘುನಾಥ, ಜೋಗಿಗೆ 'ನರಹಳ್ಳಿ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ರಘುನಾಥ

ಜೋಗಿ

ಬೆಂಗಳೂರು: ಡಾ. ನರಹಳ್ಳಿ ಪ್ರತಿಷ್ಠಾನ ನೀಡುವ 2023ನೇ ಸಾಲಿನ ಯುವ ಬರಹಗಾರ ಪ್ರಶಸ್ತಿಗೆ 'ಸುಧಾ' ವಾರ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ರಘುನಾಥ ಚ.ಹ. ಆಯ್ಕೆಯಾಗಿದ್ದಾರೆ.

ಪ್ರತಿಷ್ಠಾನದ ದಶಮಾನೋತ್ಸವ ಅಂಗವಾಗಿ 'ನರಹಳ್ಳಿ ದಶಮಾನೋತ್ಸವ ಪುರಸ್ಕಾರ'ಕ್ಕೆ 'ಕನ್ನಡಪ್ರಭ' ಪತ್ರಿಕೆಯ ಪುರವಣಿ ಸಂಪಾದಕ ಗಿರೀಶ್ ರಾವ್ ಹತ್ವಾರ್ (ಜೋಗಿ) ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಗಳು ತಲಾ ₹ 15 ಸಾವಿರ ನಗದು ಒಳಗೊಂಡಿದೆ. ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷಣರಾವ್, ಸಿ.ಕೆ. ರಾಮೇಗೌಡ, ನ. ರವಿಕುಮಾರ್, ರಜನಿ ನರಹಳ್ಳಿ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಕನ್ನಡ ಜನಶಕ್ತಿ ಕೇಂದ್ರದ ಸಹಯೋಗದಲ್ಲಿ ಬೆಂಗಳೂರಿನ ಬಸವನಗುಡಿಯಲ್ಲಿರುವ ನ್ಯಾಷನಲ್ ಕಾಲೇಜಿನ ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣದಲ್ಲಿ ಅಕ್ಟೋಬರ್ 8ರಂದು ಬೆಳಿಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ಸಾಹಿತಿ ಚಂದ್ರಶೇಖರ ಕಂಬಾರ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರತಿಷ್ಠಾನದ ಅಧ್ಯಕ್ಷ ಎಚ್.ಎಸ್. ವೆಂಕಟೇಶಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರತಿಷ್ಠಾನದ ಕಾರ್ಯದರ್ಶಿ ಆನಂದರಾಮ ಉಪಾಧ್ಯ ತಿಳಿಸಿದ್ದಾರೆ.

371(ಜೆ) ಮೀಸಲಾತಿ ಆರ್‌ಡಿ ಸಂಖ್ಯೆ ಪರಿಷ್ಕರಣೆ ಗೊಂದಲ

ಅಣಕು ಸೀಟು ಹಂಚಿಕೆ: ಫಲಿತಾಂಶ ತಡೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಅಣಕು ಸೀಟು ಹಂಚಿಕೆಯ ಫಲಿತಾಂಶದಲ್ಲಿ ತಾಂತ್ರಿಕ ದೋಷ ಇರುವುದು ಕಂಡುಬಂದ ಕಾರಣ ಶನಿವಾರ ಮಧ್ಯಾಹ್ನ ಅದನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಯಿತು.

ಪ್ರಾಧಿಕಾರವು ಆಗಸ್ಟ್ 11ರ ರಾತ್ರಿ ವೈದ್ಯಕೀಯ, ದಂತ ವೈದ್ಯಕೀಯ, ಎಂಜಿನಿಯರಿಂಗ್ ಸೇರಿ ವಿವಿಧ ಕೋರ್ಸ್‌ಗಳ ಪ್ರವೇಶಕ್ಕಾಗಿ ಅರ್ಹ ಅಭ್ಯರ್ಥಿಗಳ ಮೆರಿಟ್ ಮತ್ತು ರೋಸ್ಟರ್ ಪದ್ಧತಿ ಆಧಾರದ ಮೇಲೆ ಅಣಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಿತ್ತು. ಹೆಚ್ಚು ಅಂಕ ಪಡೆದಿದ್ದರೂ ತಮಗಿಂತ ಕಡಿಮೆ ಅಂಕ ಗಳಿಸಿದವರಿಗೆ ಸೀಟು ಹಂಚಿಕೆಯಾಗಿದೆ ಎಂದು ವಿದ್ಯಾರ್ಥಿಗಳು, ಪೋಷಕರು ತಿಳಿಸಿದರು.

ವೆಬ್‌ಸೈಟ್‌ನಲ್ಲಿನ ತಾಂತ್ರಿಕ ದೋಷ ಗಮನಕ್ಕೆ ಬಂದ ತಕ್ಷಣವೇ ವೆಬ್‌ಲಿಂಕ್ ನಿಷ್ಕ್ರಿಯಗೊಳಿಸಿತು.

ಈ ಬಗ್ಗೆ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, 'ಕಲ್ಯಾಣ ಕರ್ನಾಟಕದ 371 (ಜೆ) ಅಡಿ ಮೀಸಲಾತಿ ಪಡೆಯುವ ವಿದ್ಯಾರ್ಥಿಗಳ ಪೈಕಿ ಕೆಲವರು ಆರ್‌ಡಿ (ಕಂದಾಯ ಇಲಾಖೆಯ ನಂಬರ್) ಸಂಖ್ಯೆಯ ಪರಿಷ್ಕರಣೆಯನ್ನು ಆನ್‌ಲೈನ್‌ನಲ್ಲಿ ಮತ್ತೆ ಕೆಲವರು ಪ್ರಾಧಿಕಾರಕ್ಕೆ ನೇರವಾಗಿ ಬಂದು ನೀಡಿದ್ದರು. ಆನ್‌ಲೈನ್‌ನಲ್ಲಿ ನೀಡಿದವರ ಸಂಖ್ಯೆ ಮಾತ್ರ ಸ್ವೀಕೃತವಾಗಿದೆ. ಹೀಗಾಗಿ, ಅಣಕು ಸೀಟು ಹಂಚಿಕೆ ಫಲಿತಾಂಶದಲ್ಲಿ ಕೆಲವರು ಹೆಸರು ಕಂಡುಬರಲಿಲ್ಲ. ತಾಂತ್ರಿಕ ದೋಷವನ್ನು ಸರಿಪಡಿಸಿ, ಫಲಿತಾಂಶ ಪಟ್ಟಿಯನ್ನು ಪ್ರಕಟಿಸಲಾಗುವುದು' ಎಂದು ತಿಳಿಸಿದರು.

'ಅಂತಿಮ ಪಟ್ಟಿ ಅಲ್ಲ'

ಸೀಟು ಹಂಚಿಕೆಗೆ ಸಂಬಂಧಿಸಿದಂತೆ ಈಗ ಪ್ರಕಟಿಸಿರುವ ಅಣಕು ಫಲಿತಾಂಶ ಅಂತಿಮದ್ದು ಅಲ್ಲ. ಇದು ಕೇವಲ ಎಲ್ಲಿ ಸಿಗಬಹುದು ಎಂಬುದರ ಅಂದಾಜು ಅಥವಾ ಚಿತ್ರಣ ಸಿಗುವುದಕ್ಕೆ ಅನುಕೂಲ ಆಗಲಿ' ಎಂದು ಎಸ್.ರಮ್ಯಾ ತಿಳಿಸಿದರು.

'ಅಣಕು ಸೀಟು ಹಂಚಿಕೆ ಪಟ್ಟಿಯನ್ನು ಪ್ರಕಟಿಸುವ ಪದ್ಧತಿ ಇದ್ದು, ಇದು ದೋಷಗಳನ್ನು ಸರಿಪಡಿಸಿಕೊಳ್ಳುವುದಕ್ಕೂ ಅನುಕೂಲ ಆಗುತ್ತದೆ. ಇದನ್ನು ಆಧಾರವಾಗಿ ಇಟ್ಟುಕೊಂಡೇ ಅಂತಿಮ ಸೀಟು ಹಂಚಿಕೆ ಪಟ್ಟಿ ಪ್ರಕಟಿಸಲಾಗುವುದು' ಎಂದರು.

6 ಆರೋಪಿಗಳ ಬಂಧನ

ಹಾಸನ: ಇಲ್ಲಿನ ಗ್ರಾನೈಟ್ ಉದ್ಯಮಿ, ಜೆಡಿಎಸ್ ಮುಖಂಡ ಕೃಷ್ಣೇಗೌಡರ ಕೊಲೆಗೆ ಸಂಬಂಧಿಸಿ, ಮೂವರು ಮಹಿಳೆಯರು ಸೇರಿ ಆರು ಆರೋಪಿಗಳನ್ನು ಬಂಧಿಸಲಾಗಿದೆ.

'ಚನ್ನರಾಯಪಟ್ಟಣದ ವೆಂಕಟೇಶ್ ಉರುಫ್ ಸಂಜೀವ್, ಸುರೇಶ್, ಟೈಲರ್ ಕುಮಾರ್, ಸುಧಾರಾಣಿ, ಅಶ್ವಿನಿ, ಚೈತ್ರಾ ಬಂಧಿತರು. ಪ್ರಮುಖ ಆರೋಪಿ ಯೋಗಾನಂದ ತಲೆಮರೆಸಿಕೊಂಡಿದ್ದು, ಶೀಘ್ರ ಬಂಧಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್ ತಿಳಿಸಿದರು.

'ಕೊಲೆಗೆ ಆರು ತಿಂಗಳಿನಿಂದ ಸಂಚು ರೂಪಿಸಲಾಗಿತ್ತೆಂಬುದು ಸಾಕ್ಷಿ ಸಮೇತ ಪತ್ತೆಯಾಗಿದೆ. ಆರು ಮಂದಿಯಲ್ಲಿ ಸಂಚು ರೂಪಿಸಿದವರು, ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದವರಿದ್ದಾರೆ. ಸುಪಾರಿ ಹಂತಕರನ್ನು ಹುಡುಕುವಲ್ಲಿ ಸಂಜೀವ್ ನೆರವಾಗಿದ್ದ ಎನ್ನಲಾಗಿದೆ. ಆರೋಪಿಗಳಿಗೆ ಸುರೇಶ್ ದುಡ್ಡು ನೀಡಿದ್ದ' ಎಂದು ತಿಳಿಸಿದರು.

'ಸ್ಥಳೀಯ ಖಾಸಗಿ ಸುದ್ದಿ ಚಾನೆಲ್ ಆರಂಭಿಸಲು ಯೋಗಾನಂದ ಹಾಗೂ ಪಾಲುದಾರ ಸುರೇಶ್ ಅವರಿಗೆ ನೀಡಿದ್ದ ಹಣವನ್ನು ವಾಪಸು ಕೇಳಿದ್ದೇ ಕೃಷ್ಣೇಗೌಡರ ಕೊಲೆಗೆ ಕಾರಣ' ಎಂದು ತಿಳಿಸಿದರು.

ಪೂರಕ ಪರೀಕ್ಷೆ: ಉಚಿತ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಗಳು ಆ.21ರಿಂದ ಸೆ.2ರವರೆಗೆ ನಡೆಯಲಿದ್ದು, ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲಾಗಿದೆ.

ವಿದ್ಯಾರ್ಥಿಗಳು ತಮ್ಮ ವಾಸಸ್ಥಳದಿಂದ ನಿಯೋಜಿತ ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ ಮತ್ತು ವಾಪಸ್ ಬರುವಾಗ ಪೂರಕ ಪರೀಕ್ಷೆಯ ಪ್ರವೇಶ ಪತ್ರವನ್ನು ತೋರಿಸಿ ನಿಗಮದ ನಗರ, ಹೊರವಲಯ, ಸಾಮಾನ್ಯ, ವೇಗದೂತ ಬಸ್‌ಗಳಲ್ಲಿ ಉಚಿತ ಪ್ರಯಾಣ ಮಾಡಬಹುದು ಎಂದು ಮುಖ್ಯ ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಪಾಳದ ದೇಗುಲಕ್ಕೆ ಬಾರ್ಕೂರಿನ ಅರ್ಚಕ

ಪ್ರಜಾವಾಣಿ ವಾರ್ತೆ

ವಿನಯ ಅಡಿಗ

ಬ್ರಹ್ಮಾವರ (ಉಡುಪಿ ಜಿಲ್ಲೆ): ತಾಲ್ಲೂಕಿನ ಬಾರ್ಕೂರು ಮೂಲದ ವಿನಯ ಅಡಿಗ ಅವರು ನೇಪಾಳದ ಪಶುಪತಿನಾಥ ದೇವಸ್ಥಾನದ ಅರ್ಚಕರಾಗಿ ನೇಮಕಗೊಂಡಿದ್ದಾರೆ.

ಈಚೆಗೆ ನಡೆದ ಸಮಾರಂಭದಲ್ಲಿ ಅರ್ಚಕರಾಗಿ ಸೇವೆ ಆರಂಭಿಸಿರುವ ಅವರು, ಪಶುಪತಿನಾಥ ದೇವಸ್ಥಾನದ ನಾಲ್ವರು ಅರ್ಚಕರಲ್ಲಿ ಒಬ್ಬರಾಗಿದ್ದಾರೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಬಾರ್ಕೂರಿನ ಶೈಲಜಾ ಮತ್ತು ಸೂರ್ಯನಾರಾಯಣ ಅಡಿಗ ದಂಪತಿ ಪುತ್ರ ವಿನಯ, ಕಲ್ಯಾಣಪುರದ ಮಿಲಾಗ್ರಿಸ್ ಶಾಲೆಯಲ್ಲಿ 10ನೇ ತರಗತಿಯವರೆಗೆ ಶಿಕ್ಷಣ ಪೂರೈಸಿ ನಂತರ ಶೃಂಗೇರಿ ಮತ್ತು ಕಾಲಟಿಯ ವಿದ್ಯಾಪೀಠದಲ್ಲಿ ಆಗಮಶಾಸ್ತ್ರ ಅಭ್ಯಾಸ ಮಾಡಿದ್ದರು.

12 ಜನರಲ್ಲಿ ವಾಂತಿ–ಭೇದಿ

ಒಂದನೇ ಪುಟದಿಂದ...

'ಕುಡಿಯಲು ಯೋಗ್ಯವಾಗಿಲ್ಲ ಎಂಬುದಾಗಿ ವರದಿ ಲಭ್ಯವಾಗಿದ್ದು, ಹೆಚ್ಚಿನ ಪರೀಕ್ಷೆಗೆ ಚಿತ್ರದುರ್ಗದ ಸರ್ವೇಕ್ಷಣಾ ಘಟಕಕ್ಕೆ ರವಾನೆ ಮಾಡಲಾಗಿದೆ' ಎಂದು ತಿಳಿಸಿದ್ದಾರೆ.

ಕವಾಡಿಗರಹಟ್ಟಿಯಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟ ಮಂಜುಳಾ ಅವರ ಮರಣೋತ್ತರ ಪರೀಕ್ಷೆಯ ಅಂತಿಮ ವರದಿ ಶನಿವಾರ ಲಭ್ಯವಾಗಿದ್ದು, ರಕ್ತ ಪರಿಚಲನೆಯಲ್ಲಿ ಉಂಟಾದ ತೊಂದರೆಯಿಂದ ಕೊನೆಯುಸಿರೆಳೆದಿರುವುದಾಗಿ ದೃಢಪಟ್ಟಿದೆ. ಮೃತಪಟ್ಟ ಐವರ ಪೈಕಿ ನಾಲ್ವರ ದೇಹದಲ್ಲಿ ವಿಷಕಾರಿ ಅಂಶಗಳಿಲ್ಲ ಎಂಬುದನ್ನು ವಿಧಿವಿಜ್ಞಾನ ಪ್ರಯೋಗಾಲಯ ಖಚಿತಪಡಿಸಿದೆ.

ಕಲಾವಿದೆ ಶಿವಕುಮಾರಿ ನಿಧನ

ಬಿ. ಶಿವಕುಮಾರಿ

ಕೂಡ್ಲಿಗಿ (ಬಳ್ಳಾರಿ ಜಿಲ್ಲೆ): ಪಟ್ಟಣದ ರಂಗ ಕಲಾವಿದೆ ಬಿ. ಶಿವಕುಮಾರಿ(56) ಹೃದಯಾಘಾತದಿಂದ ಶನಿವಾರ ನಿಧನರಾದರು. ಅವರಿಗೆ ಒಬ್ಬ ಪುತ್ರ ಇದ್ದಾರೆ.

1984ರಲ್ಲಿ ರಂಗಭೂಮಿ ಪ್ರವೇಶಿಸಿದ ಬಿ. ಶಿವಕುಮಾರಿ ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಭಕ್ತಿ ಪ್ರಧಾನ ನಾಟಕಗಳ ಜೊತೆಗೆ ಸಿನಿಮಾ ಹಾಗೂ ಧಾರಾವಾಹಿಗಳಲ್ಲಿ ಅಭಿನಯಿಸಿದ್ದರು. ಧಾರವಾಡ ಆಕಾಶವಾಣಿಯ ನಾಟಕ ಕಲಾವಿದೆಯಾಗಿಯೂ ಆಗಿದ್ದರು. 59ನೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ, ಅಂಧ್ರಪ್ರದೇಶದ ನಂದಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಅವರು ಪಾತ್ರರಾಗಿದ್ದರು.

ಪಟ್ಟಣದ ಹೊಸಪೇಟೆ ರಸ್ತೆಯಲ್ಲಿನ ಶಾಂತಿ ಧಾಮದಲ್ಲಿ ಭಾನುವಾರ ಮಧ್ಯಾಹ್ನ 1ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ನಾಲ್ಕು ವರ್ಷದ ಪದವಿ ಕೋರ್ಸ್ ಸ್ಥಗಿತ?

ಒಂದನೇ ಪುಟದಿಂದ...

ಎನ್‌ಇಪಿ ಅಡಿಯಲ್ಲಿ ನಾಲ್ಕು ವರ್ಷಗಳ ಅವಧಿಯ ಆನರ್ಸ್ ಪದವಿ ತರಗತಿಗಳನ್ನು ಆರಂಭಿಸುವ ಪ್ರಸ್ತಾವವಿದೆ. ಆನರ್ಸ್ ಪದವಿ ಪಡೆದವರು ಪಿಎಚ್.ಡಿ ಸಂಶೋಧನೆಗೆ ನೋಂದಾಯಿಸಿಕೊಳ್ಳಲು ಅರ್ಹರು ಎಂಬ ಅಂಶ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿದೆ.

'ನಾಲ್ಕು ವರ್ಷದ ಆನರ್ಸ್ ಪದವಿ ಕೋರ್ಸ್‌ನ ಅಗತ್ಯವಿಲ್ಲ ಎಂದು ಕೆಲವು ಶಿಕ್ಷಣ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಈಗ ಐದು ಮತ್ತು ಆರನೇ ಸೆಮಿಸ್ಟರ್‌ಗೆ ಮಾತ್ರ ಪಠ್ಯಕ್ರಮ ರೂಪಿಸುವಂತೆ ಸುತ್ತೋಲೆ ನೀಡಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸದ್ಯಕ್ಕೆ ನಾಲ್ಕು ವರ್ಷಗಳ ಪದವಿ ಕೋರ್ಸ್ ಆರಂಭಿಸುವ ಕುರಿತು ರಾಜ್ಯ ಸರ್ಕಾರ ಸ್ಪಷ್ಟ ನಿರ್ಧಾರಕ್ಕೆ ಬಂದಿಲ್ಲ. ಈಗಿನ ವೇಳಾಪಟ್ಟಿ ಪ್ರಕಾರ, 2024ರ ಜೂನ್ ಅಥವಾ ಜುಲೈ ತಿಂಗಳಲ್ಲಿ ನಾಲ್ಕು ವರ್ಷಗಳ ಅವಧಿಯ ಆನರ್ಸ್ ಪದವಿ ಕೋರ್ಸ್ ಆರಂಭವಾಗಬೇಕು. ಮುಂದಿನ ಕೆಲವು ತಿಂಗಳಲ್ಲಿ ಈ ಬಗ್ಗೆ ಸ್ಪಷ್ಟ ನಿರ್ಧಾರಕ್ಕೆ ಬರಲಾಗುವುದು ಎಂದು ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ವೈ.ಎಸ್. ಸಿದ್ದೇಗೌಡ ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ 75 www.prajavani.net LIVE

ಇಂದು ಅತಿಥಿಗಳು
ನವೀನ್ ಶಂಕರ್, ನಟ
'ಕ್ಷೇತ್ರಪತಿ' ಬಸವನ ಮಾತು..
ಆ. 13, ಭಾನುವಾರ ಬೆಳಿಗ್ಗೆ 11 ಗಂಟೆಗೆ
ಸೆಲೆಬ್ರಿಟಿ PREMIER

ಯುಟ್ಯೂಬ್‌ನಲ್ಲಿ:
ನ್ಯೂಸ್ ಎಕ್ಸ್‌ಪ್ರೆಸ್: ರಾತ್ರಿ 8ಕ್ಕೆ

ಪಾಡ್‌ಕಾಸ್ಟ್
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಕ್ಕೆ

Prajavani.net Prajavani Prajavani

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	112.74	4,732	6,533
ಹಾರಂಗಿ	2,859	2,858.83	2,029	1,725
ಕಬಿನಿ	2284.00	2,281.68	5,221	5,875
ಹೇಮಾವತಿ	2,922	2,916.21	3,166	3,010
ಲಿಂಗನಮಕ್ಕಿ	1,819	1,790	5,689	5,534.92
ಸೂಪಾ (ಮೀ)	564	546.64	4,594	7,444
ಮಾಣಿ	595	581.10	485	1,000
ತುಂಗಭದ್ರಾ	1,633	1,628.70	11,654	11,392
ಮಲಪ್ರಭಾ	2079.5	2,066.80	1,317	194
ಘಟಪ್ರಭಾ	2175	2,165.41	5,264	2,356
ಭದ್ರಾ	186	167	2,702	1,718
ಆಲಮಟ್ಟಿ (ಮೀ)	519.60	519.58	12,731	12,731
ನಾರಾಯಣಪುರ (ಮೀ)	492.25	487.10	11,449	13,971

* ನೆಲಮಟ್ಟದಿಂದ

THE RAICHUR DISTRICT CENTRAL CO-OPERATIVE BANK LTD.,RAICHUR

Ref: RDCC/HO/kukinterior/2160/2023-24/ Date :11.08.2023

e-Procurement Tender Notice

The Raichur District Central Co-Operative Bank Ltd., Raichur invites e-Tender reference no: **RDCCB/2023-24/BD/WORK_INDENT3** for Construction of interior Works for Raichur District Central Cooperative Bank at Kuknur Branch Taluka Yelburga, District Koppal.. Tender Schedule and details can be obtained from KPP Portal **https://kppp.karnataka.gov.in**

Sd/- (I S GIRADDI)
Chief Executive Officer
R D C C BANK Ltd., Raichur.

Government of India
CENTRAL BUREAU OF INVESTIGATION
(Department of Personnel & Training)

HIRING OF CONSULTANTS AS PAIRVI OFFICER IN CBI

CBI intends to hire Consultants amongst retired Inspectors/Dy.SsP for the Pairvi work related to cases in various Courts in Karnataka, for a period of one year, at a fixed monthly payment, arrived at by deducting the basic pension from the pay drawn at the time retirement + Transport Allowance.

2. The duly filled in application, in the proforma available on the CBI Website (**www.cbi.gov.in**) may be sent by Regd./Speed Post to the Head of Branch, Central Bureau of Investigation, Anti Corruption Branch, No.36 Bellary Road, Ganganagar, Bangalore- 560 0032 on or before **31.08.2023.**

3. Incomplete applications and applications received after last date will be summarily rejected.

Sd/- Supdt. of Police,
CBI: ACB: Bangalore

ಕ್ಲಾಸಿಫೈಡ್ಸ್
ADMISSION CORNER

COMMUNITY INSTITUTE OF MANAGEMENT STUDIES (CIMS)

Affiliated to **BENGALURU CITY UNIVERSITY**, Approved by **AICTE**, New Delhi.
#2/1, Natabhairava Shri. V Vajramuni Road (9th Cross, 9th Main), 2nd Block Jayanagar, Bengaluru-560011

LOCATED IN PRIME LOCATION **NEAR ASHOKA PILLAR, JAYANAGAR, BENGALURU**

ADMISSIONS FOR MBA & MCA 2023

GOVERNMENT QUOTA
MBA & MCA - 2023

Any Degree Students (Even 6th Sem students) can apply or register in KEA website on / before 17th August 2023

For registration visit: www.kea.kar.nic.in

Entrance exam Date: Sunday, 10th September 2023

MANAGEMENT QUOTA
MBA & MCA
Admissions OPEN for 2023

FREE
COACHING CLASSES

CIMS is conducting FREE PGCET Coaching Classes for MBA & MCA Aspirants through Offline at CIMS Campus from 19th August 2023. Interested Students can register through Whatsapp or Website. SMS "YOUR NAME" "PGCET UPDATE" to 8884401104 or apply through online
https://forms.gle/audDtEwH9bQX9qxh8

FOR ADMISSION ENQUIRY CONTACT:
88844 01104 / 97310 22994 / 98863 97941 / 080 26577851
www.cimsbschool.org Email: admissions@cimsbschool.org
- Secretary

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ನಾರ್ತ್ ಇಂಡಿಯನ್ ಕುಕ್‌ಗಳು ಮತ್ತುಸಪ್ಲೈಯರ್ ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 9739013813, 8317354764

ಬೇಕಾಗಿದ್ದಾರೆ ವಿದ್ಯಾರ್ಹತೆ ಮತ್ತು ಅನುಭವವುಳ್ಳ ಉಪಸಂಪಾದಕ, ಮುಖ್ಯ ವರದಿಗಾರ, ಪ್ರಚಾರಕರು/ ಪ್ರತಿನಿಧಿಗಳು,ಕಛೇರಿ ಸಹಾಯಕರು (ಪುರುಷ/ಮಹಿಳೆಯರು). ತಕ್ಷಣ ಸಂಪರ್ಕಿಸಿ: 9448175385

Situation Required

ಒಂದು ಪ್ರತಿಷ್ಠಿತ ಗಾರ್ಮೆಂಟ್ ಎಕ್ಸ್‌ಪೋರ್ಟ್ ಹೌಸ್‌ಗೆ ಪ್ರೊಡಕ್ಷನ್ ಹೆಡ್, ಅಡ್ಮಿನ್- ಹೆಚ್‌ಆರ್ ಎಕ್ಸಿಕ್ಯೂಟಿವ್ಸ್, ಕ್ಯೂಎ ಎಕ್ಸಿಕ್ಯೂಟಿವ್ಸ್ ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುತ್ತದೆ. ಸಂಪರ್ಕಿಸಿ: 9840833756/ 9790917528 ಅಥವಾ selvamash592@gmail.com ವಿಳಾಸಕ್ಕೆ ಅರ್ಜಿಸಲ್ಲಿಸಿರಿ

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ವಸತಿಗೃಹಕ್ಕೆ ಇಂಗ್ಲೀಷ್ ತಿಳಿದಿರುವ ಸ್ವಾಗತಕಾರರು (Receptionist) ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ : ಶ್ರೀಕಮಲ್ ಹೋಟೆಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ, ಮೈಸೂರು ಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080-22215903

ಪ್ರವಾಸ

Travel

8 ದಿನಗಳ ಕಾಶಿಯಾತ್ರೆ. 12ದಿನಗಳ ಚಾರ್‌ಧಾಮ್‌ಯಾತ್ರೆ. 12 ದಿನಗಳ ನೇಪಾಳ,ಮುಕ್ತಿನಾಥ್. 10 ದಿನಗಳ ಗುಜರಾತ್. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467 9740228186

ಭಾರತಪರಂಪರದರ್ಶನ; 22.9.23 14ದಿನ ಚಾರ್ಧಾಮ್`ಯಾತ್ರೆ. 11.10.23, 11ದಿನ ಮುಕ್ತಿನಾಥಸಹಿತ ಕಾಶಿ. 30.10.23 11ದಿನ ಗುಜರಾತ್,ಮಧ್ಯಪ್ರದೇಶ. 31.08.23 ನವಗ್ರಹಸಹಿತ ರಾಮೇಶ್ವರಂ.9448792891.

20.09.2023 ಯಮನೋತ್ರಿ, ಗಂಗೋತ್ರಿ, ಕೇದಾರನಾಥ್ ಬದರಿನಾಥ್,ಹರಿದ್ವಾರ್. 22.11.2023 ವಿಜಯವಾಡ ಭದ್ರಾಚಲಂ ವಾಸವಿಪೆನುಗೊಂಡ ಕಲ್ಕತ್ತ,ಗಂಗಾಸಾಗರ್, ಪೂರಿಜಗನ್ನಾಥ್ ಕೋನಾರ್ಕ್,ಭುವನೇಶ್ವರ್. 11.12.2023 16 ದಿನಗಳ ಅಷ್ಟ ಜ್ಯೋತಿರ್ಲಿಂಗಗಳು ಮಹಾರಾಷ್ಟ್ರ,ಮಧ್ಯಪ್ರದೇಶ ಗುಜರಾತ್ ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವಲ್ಸ್ ಬೆಂಗಳೂರು.70. 9342287551 8050629305

★21.09.2023 12ದಿನಗಳು★ ಗಂಗೋತ್ರಿ, ಯಮುನೋತ್ರಿ, ಕೇದಾರನಾಥ್, ಬದರಿನಾಥ್, ಹರಿದ್ವಾರ. 16.11.2023 14ದಿನಗಳು ಮಧ್ಯಪ್ರದೇಶ, ರಾಜಸ್ಥಾನ,ಗುಜರಾತ್. ಶ್ರೀಗಂಗಾ ಟೂರಿಸ್ಟ್.ಬೆಂಗಳೂರು. 9480253807/ 8105522123

20.9.2023 ರೈಲಿನಲ್ಲಿ 6 ದಿನಗಳು ಕಾಶಿ, ಗಯಾ, ಭುದ್ಧಗಯಾ, ಅಯೋಧ್ಯ, ತ್ರಿವೇಣಿ ಸಂಗಮ ರೂ.10,000. ದೀಕ್ಷಿತ್‌ಟ್ರಾವೆಲ್ಸ್. 9742108991, 7795238951.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈವಾಹಿಕ

Brides Wanted

Brahmin

ವಧು ಬೇಕಾಗಿದೆ
ಸಸ್ಯಹಾರಿ/ ಬ್ರಾಹ್ಮಣ/ ಲಿಂಗಾಯತಾರಾಧ್ಯ ಕುಟುಂಬದಿಂದ ವಧು ಒಬ್ಬಂಟಿ ನಿವೃತ್ತ ಉಪನ್ಯಾಸಕನಿಗೆ ತಿಂಗಳ ಆದಾಯ 30000/– ವಯಸ್ಸಿನ ಅಭ್ಯಂತರವಿಲ್ಲ. ಉಳಿದ ವಿಷಯಗಳೆಲ್ಲಾ ಮುಕ್ತ. ನೇರ ಸಂಪರ್ಕಿಸಿ:
9448175385

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Hoskote

HOSKOTE 30X60 SITE For SALE at Kanakanagar, Sir. M. Visveshwaraiah Layout, Hoskote. Contact: 9880843416, 9743535151.

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ, ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9448687421

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ

BOOK YOUR CLASSIFIEDS ADVERTISEMENT

PRAJAVANI ALL KARNATAKA

Per word	Ordinary	Bold	Ordinary Semi Display	Bold Semi Display
	Rs. 90/-	Rs. 120/-	Rs. 100/-	Rs. 160/-

Classified Display	Single Column	Multi Column
	Rs. 480/-	Rs. 500/-

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 | 9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
conditions apply*

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹60,700
ಒಡವೆ ಚಿನ್ನ 1ಗ್ರಾಂ	₹5,615
ಬೆಳ್ಳಿ ಕೆ.ಜಿಗೆ	₹74,400

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹515

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹145.50
ಆರ್‌ಎಸ್‌ಎಸ್-5	₹139
ಗುಡ್ ಲಾಟ್	₹122.50

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹940 (945)
ಸೂರ್ಯಕಾಂತಿ (ರಿಫೈನ್ಡ್)	₹960 (960)
ಪಾಮೋಲಿನ್	₹845 (845)

ಎಫ್‌ಪಿಐ: ₹7,543 ಕೋಟಿ ಮೌಲ್ಯದ ಷೇರು ಮಾರಾಟ

ಷೇರುಪೇಟೆ: ಲಾಭ ಗಳಿಕೆಗೆ ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ಮಾರುಕಟ್ಟೆ ಮೌಲ್ಯವು ಸದ್ಯ ಗರಿಷ್ಠ ಮಟ್ಟದಲ್ಲಿ ಇರುವುದರಿಂದ ಲಾಭ ಗಳಿಕೆಯ ವಹಿವಾಟು ನಡೆಯುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರು-ಪೇಟೆಗಳಲ್ಲಿ ಲಾಭ ಮಾಡಿಕೊಳ್ಳುವು-ದರತ್ತ ಗಮನ ಹರಿಸಿದ್ದಾರೆ. ಹೀಗಾಗಿ 3 ತಿಂಗಳ ಬಳಿಕ ಆಗಸ್ಟ್ ತಿಂಗಳಿನಲ್ಲಿ ಷೇರುಗಳನ್ನು ಮಾರಾಟ ಮಾಡಲು ಗಮನ ಹರಿಸುತ್ತಿದ್ದಾರೆ. ಆಗಸ್ಟ್ 1ರಿಂದ 11ರ ವರೆಗೆ ನಡೆದಿರುವ ವಹಿವಾಟಿನಲ್ಲಿ ₹7,543 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಅಮೆರಿಕದ ಡಾಲರ್ ಮೌಲ್ಯ ವೃದ್ಧಿಯಾಗಿರುವ ಜೊತೆಗೆ 10 ವರ್ಷದ ಬಾಂಡ್ ಗಳಿಕೆಯು ಶೇ 4ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇದೆ. ಈ ಅಂಶಗಳು ಅಲ್ಪಾವಧಿಯಲ್ಲಿ ಭಾರತದಲ್ಲಿ ಎಫ್‌ಪಿಐ ಹೂಡಿಕೆ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿವೆ ಎಂದು ಅವರು ಹೇಳಿದ್ದಾರೆ.

3 ತಿಂಗಳಿನಲ್ಲಿ ಮಾರುಕಟ್ಟೆಯಲ್ಲಿ ಗೂಳಿ ಓಟ ಜೋರಾಗಿತ್ತು. ಹೀಗಾಗಿ ಇದೀಗ ವಿದೇಶಿ ಹೂಡಿಕೆದಾರರು ಲಾಭ ಮಾಡಿಕೊಳ್ಳುವುದರತ್ತ ಹೆಚ್ಚಿನ ಆಸಕ್ತಿ ತೋರುವುದನ್ನು ನಿರೀಕ್ಷೆ ಮಾಡಲಾಗಿದೆ ಎಂದೂ ಅವರು ತಿಳಿಸಿದ್ದಾರೆ.

ನಿಫ್ಟಿಯಲ್ಲಿ ಹೂಡಿಕೆದಾರರು ಬಹಳ ಎಚ್ಚರಿಕೆಯಿಂದ ವಹಿವಾಟು ನಡೆಸುತ್ತಿದ್ದಾರೆ. ವಾರದ ವಹಿವಾಟಿನಲ್ಲಿ ಐ.ಟಿ., ಲೋಹ ಮತ್ತು ಸ್ವಲ್ಪ ಮಟ್ಟಿಗೆ ಇಂಧನ ವಲಯ ಸ್ಥಿರತೆ ಕಾಯ್ದುಕೊಂಡಿದೆ. ಆದರೆ, ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ಎಫ್‌ಎಂಸಿಜಿ ಷೇರುಗಳ ಮೌಲ್ಯ ಕಡಿಮೆ ಆಗಿದ್ದರಿಂದ ನಿಫ್ಟಿ ಇಳಿಕೆ ಕಾಣುವಂತಾಯಿತು ಎಂದು ಪ್ರಭುದಾಸ್ ಲೀಲಾಧರ್ ಬ್ರೋಕರೇಜ್ ಸಂಸ್ಥೆಯ ಮುಖ್ಯ ಸಲಹೆಗಾರ ವಿಕ್ರಂ ಕಾಸಟ್ ಹೇಳಿದ್ದಾರೆ.

ವಿದೇಶಿ ಸಾಂಸ್ಥಿಕ ಹೂಡಿಕೆ ವಿವರ (ಕೋಟಿಗಳಲ್ಲಿ)



ಮಾಹಿತಿ: ಪಿಟಿಐ

ಮುಖ್ಯಾಂಶಗಳು

- ಮೂರು ತಿಂಗಳ ಬಳಿಕ ಎಫ್‌ಪಿಐ ಹೊರಹರಿವು
- ಹಣಕಾಸು, ಬಂಡವಾಳ ಸರಕುಗಳ ವಲಯದಲ್ಲಿ ಎಫ್‌ಪಿಐ ಹೂಡಿಕೆ

ಒಎನ್‌ಜಿಸಿ ಲಾಭ ಇಳಿಕೆ

ನವದೆಹಲಿ (ಪಿಟಿಐ): ಒಎನ್‌ಜಿಸಿ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 34ರಷ್ಟು ಇಳಿಕೆ ಕಂಡು, ₹10,015 ಕೋಟಿಗೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ
12-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	885(895)
ಪಾಮ್ ವಾರದ ಡೆಲಿವರಿ	843(843)
ಸೂರ್ಯಕಾಂತಿ ಎಣ್ಣೆ ಕಚ್ಚಾ	875(880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	58,7650(58,750)
ಬೆಳ್ಳಿ ಕೆ.ಜಿ	70,050(70,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ರಿಲಯನ್ಸ್‌ನಿಂದ ಡಿಜಿಟಲ್ ಇಂಡಿಯಾ ಸೇಲ್

ಬೆಂಗಳೂರು: ರಿಲಯನ್ಸ್ ಡಿಜಿಟಲ್‌ನಲ್ಲಿ ಆಗಸ್ಟ್ 15ರವರೆಗೆ 'ಡಿಜಿಟಲ್ ಇಂಡಿಯಾ ಸೇಲ್' ಆಯೋಜಿಸಲಾಗಿದೆ. ಇಲ್ಲಿ ಎಲೆಕ್ಟ್ರಾನಿಕ್ಸ್ ಮತ್ತು ಗ್ಯಾಜೆಟ್‌ಗಳ ಮೇಲೆ ಭಾರಿ ರಿಯಾಯಿತಿ ಸಿಗಲಿದೆ ಎಂದು ಕಂಪನಿ ತಿಳಿಸಿದೆ.

ಖರೀದಿಗೆ ಎಸ್‌ಬಿಐ ಕ್ರೆಡಿಟ್ ಕಾರ್ಡ್ ಬಳಸಿದರೆ ₹ 5 ಸಾವಿರ-ದವರೆಗೆ ರಿಯಾಯಿತಿ ಸಿಗಲಿದೆ. ಇಷ್ಟೇ ಅಲ್ಲದೆ, ಎಲ್ಲಾ ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳ ಮೇಲೆ ಹೆಚ್ಚುವರಿಯಾಗಿ ಶೇ 5ರಷ್ಟು ತಕ್ಷಣದ ರಿಯಾಯಿತಿ ಹಾಗೂ ಶೇ 10ರಷ್ಟು ಖಾತರಿ ರಿಯಾಯಿತಿ ವೋಚರ್ ಸಹ ಪಡೆಯಬಹುದು. ಯುಪಿಐ ಮೂಲಕ ಪಾವತಿ ಮಾಡುವವರಿಗೆ ಶೇ 10ರಷ್ಟು ತಕ್ಷಣದ ರಿಯಾಯಿತಿ ಸಿಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸ್ವಾತಂತ್ರ್ಯೋತ್ಸವಕ್ಕೆ ಜೋಯಾಲುಕ್ಕಾಸ್ ಕೊಡುಗೆ

ಬೆಂಗಳೂರು: ಜೋಯಾಲುಕ್ಕಾಸ್ ಕಂಪನಿಯು ಸ್ವಾತಂತ್ರ್ಯೋತ್ಸವದ ಸಂಭ್ರಮಾಚರಣೆಯ ಅಂಗವಾಗಿ ಗ್ರಾಹಕರಿಗೆ ವಿಶೇಷ ಕೊಡುಗೆಗಳನ್ನು ಘೋಷಿಸಿದೆ. ಹಳೆಯ ಚಿನ್ನಾಭರಣ ವಿನಿಮಯ ಮಾಡಿಕೊಳ್ಳುವಾಗ ಪ್ರತಿ ಗ್ರಾಂಗೆ ವಿನಿಮಯ ದರಕ್ಕಿಂತಲೂ ₹76 ಹೆಚ್ಚು ಪಡೆಯಬಹುದು ಎಂದು ಹೇಳಿದೆ. ಈ ಕೊಡುಗೆಯು ಶನಿವಾರದಿಂದ ಮಂಗಳವಾರದವರೆಗೆ ಮಾತ್ರವೇ ಜಾರಿಯಲ್ಲಿ ಇರಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಈ ಅವಧಿಯಲ್ಲಿ ವಜ್ರದ ಆಭರಣಗಳ ಖರೀದಿ ಮೇಲೆ ಶೇ 25ರಷ್ಟು ರಿಯಾಯಿತಿಯೂ ಸಿಗಲಿದೆ. ಕಂಪನಿಯ ಎಲ್ಲ ಮಳಿಗೆಗಳಲ್ಲಿಯೂ ಈ ಕೊಡುಗೆಗಳು ಲಭ್ಯವಿರಲಿವೆ ಎಂದು ಹೇಳಿದೆ.

ಬಿಒಎಂ: ಗೃಹ, ಸಾಲದ ಬಡ್ಡಿ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ಸೋಮವಾರದಿಂದ ಜಾರಿಗೆ ಬರುವಂತೆ ಗೃಹ ಮತ್ತು ಕಾರು ಸಾಲಗಳ ಮೇಲಿನ ಬಡ್ಡಿದರವನ್ನು ಶೇ 0.20ರವರೆಗೆ ಇಳಿಕೆ ಮಾಡಿದೆ. ಪ್ರೊಸೆಸಿಂಗ್ ಶುಲ್ಕವನ್ನೂ ಕೈಬಿಟ್ಟಿರುವು-ದಾಗಿ ಅದು ತಿಳಿಸಿದೆ.

ಈ ಪರಿಷ್ಕರಣೆಯಿಂದಾಗಿ ಗೃಹ ಸಾಲದ ನೀಡಿಕೆ ದರವು ಶೇ 8.60ರಿಂದ ಶೇ 8.50ಕ್ಕೆ ಇಳಿಕೆ ಆಗಲಿದೆ. ಕಾರು ಸಾಲದ ಬಡ್ಡಿದರವು ಶೇ 0.20ರಷ್ಟು ಇಳಿಕೆ ಆಗಲಿದ್ದು, ಶೇ 8.70ಕ್ಕೆ ತಲುಪಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	590

ತಿಪಟೂರು ಕೊಬ್ಬರಿ

ಕನಿಷ್ಠ	7700
ಗರಿಷ್ಠ	9531
ಮಾದರಿ	9401

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13800	13750	157.80 ಸೆಂಟ್ಸ್
ಎಸಿ	---	6800	6900	
ಆರ್‌ಪಿ	---	10300	10200	ಲಂಡನ್
ಆರ್‌ಸಿ	---	250	6000	2672 ಡಾಲರ್ಸ್

ನಾರಾಯಣ ಎಜುಕೇಷನ್: ಆಶಿಶ್ ಅರೋರಾ ಸಿಎಒ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ಎಜುಕೇಷನ್ ಇನ್‌ಸ್ಟಿಟ್ಯೂಷನ್ಸ್‌ಗೆ ಚೀಫ್ ಅಕಾಡೆಮಿಕ್ ಆಫಿಸರ್ ಆಗಿ ಆಶಿಶ್ ಅರೋರಾ ನೇಮಕ ಆಗಿದ್ದಾರೆ.

ಅರೋರಾ ಅವರು ಶಿಕ್ಷಣ ಕ್ಷೇತ್ರದಲ್ಲಿ ಅಕಾಡೆಮಿಕ್ ಹೆಡ್, ನ್ಯಾಷನಲ್ ಅಕಾಡೆಮಿಕ್ ಹೆಡ್, ಎಚ್‌ಒಡಿ ಹೀಗೆ ವಿವಿಧ ಹುದ್ದೆಗಳಲ್ಲಿ ಮೂರು ದಶಕಗಳ ಕಾಲ ಕೆಲಸ ಮಾಡಿರುವ ಅನುಭವ ಹೊಂದಿದ್ದಾರೆ. ಬನ್ಸಲ್ ಕ್ಲಾಸಸ್, ರಿಸೋನೆನ್ಸ್, ಅಲೆನ್, ಎಫ್‌ಐಐಟಿಜೆಇಇ ಮತ್ತು ಅನ್‌ಅಕಾಡೆಮಿಯಲ್ಲಿಯೂ ಕೆಲಸ ಮಾಡಿದ್ದಾರೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಶೂಟೌಟ್‌ನಲ್ಲಿ ಹೊರಬಿದ್ದ ಫ್ರಾನ್ಸ್

ಸೆಮಿಫೈನಲ್‌ಗೆ ಆಸ್ಟ್ರೇಲಿಯಾ, ಇಂಗ್ಲೆಂಡ್

ಬ್ರಿಸ್ಬೇನ್ (ಎಪಿ/ ಎಎಫ್‌ಪಿ): ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರಾನ್ಸ್ ತಂಡವನ್ನು 7–6 ರಿಂದ ಮಣಿಸಿದ ಆತಿಥೇಯ ಆಸ್ಟ್ರೇಲಿಯಾ ತಂಡದವರು ಫಿಫಾ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಇನ್ನೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕೊಲಂಬಿಯ ಒಡ್ಡಿದ ಪ್ರಬಲ ಸವಾಲನ್ನು ಬದಿಗೊತ್ತಿದ್ದ (2–1) ಇಂಗ್ಲೆಂಡ್ ಕೂಡಾ ನಾಲ್ಕರಘಟ್ಟಕ್ಕೆ ಲಗ್ಗೆಯಿಟ್ಟಿತು.

ಬ್ರಿಸ್ಬೇನ್ ಕ್ರೀಡಾಂಗಣದಲ್ಲಿ ಸುಮಾರು 50 ಸಾವಿರ ಪ್ರೇಕ್ಷಕರ ಸಮ್ಮುಖದಲ್ಲಿ ನಡೆದ ಆಸ್ಟ್ರೇಲಿಯಾ– ಫ್ರಾನ್ಸ್ ಪಂದ್ಯ ರೋಚಕತೆಯಿಂದ ಕೂಡಿತ್ತು. ನಿಗದಿತ ಮತ್ತು ಹೆಚ್ಚುವರಿ ಅವಧಿಯ ಆಟದ ಬಳಿಕ ಉಭಯ ತಂಡಗಳು ಗೋಲುರಹಿತ ಡ್ರಾ ಸಾಧಿಸಿದ್ದವು.

ಪೆನಾಲ್ಟಿ ಶೂಟೌಟ್‌ನಲ್ಲೂ ಪಟ್ಟುಬಿಡದೆ ಪೈಪೋಟಿ ನಡೆಸಿದವು. ಇದರಿಂದ ಫಲಿತಾಂಶ ಹೊರಬರಲು ಎರಡೂ ತಂಡಗಳಿಗೆ 10 ಕಿಕ್‌ಗಳನ್ನು ತೆಗೆದುಕೊಳ್ಳಬೇಕಾಯಿತು.

ಒಂಬತ್ತು ಅವಕಾಶಗಳ ಬಳಿಕ 6–6 ರಲ್ಲಿ ಸಮಬಲ ಕಂಡುಬಂತು. ಫ್ರಾನ್ಸ್ ಪರ 10ನೇ ಕಿಕ್ ತೆಗೆದುಕೊಂಡ ವಿಕಿ ಬೆಕೊ ಚೆಂಡನ್ನು ಗುರಿ ಸೇರಿಸಲು ವಿಫಲರಾದರು. ಆಸ್ಟ್ರೇಲಿಯಾ ಪರ ಕೋರ್ಟ್ನಿ ವೈನ್ ಅವರು ಗೋಲು ಗಳಿಸಿ ಆತಿಥೇಯ ಪ್ರೇಕ್ಷಕರ ಸಂಭ್ರಮಕ್ಕೆ ಕಾರಣರಾದರು.

ಫ್ರಾನ್ಸ್ ತಂಡವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿ ಸೆಮಿಫೈನಲ್ ಪ್ರವೇಶಿಸಿದ ಆಸ್ಟ್ರೇಲಿಯಾ ಆಟಗಾರ್ತಿಯರ ಸಂಭ್ರಮ –ಎಎಫ್‌ಪಿ ಚಿತ್ರ

ಸಿಡ್ನಿಯಲ್ಲಿ ನಡೆದ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 25ನೇ ಸ್ಥಾನದಲ್ಲಿರುವ ಕೊಲಂಬಿಯ ತಂಡ ನಾಲ್ಕನೇ ಸ್ಥಾನದ-ಲ್ಲಿರುವ ಇಂಗ್ಲೆಂಡ್‌ಗೆ ಪ್ರಬಲ ಪೈಪೋಟಿ ಒಡ್ಡಿತು. ವಿಶ್ವಕಪ್ ಟೂರ್ನಿಯಲ್ಲಿ ಇದೇ ಮೊದಲ ಬಾರಿ ಕ್ವಾರ್ಟರ್ ಫೈನಲ್ ಆಡಿದ ಕೊಲಂಬಿಯ, 44ನೇ ನಿಮಿಷದಲ್ಲಿ ಲೀಸಿ ಸ್ಯಾಂಟೋಸ್ ಗಳಿಸಿದ ಗೋಲಿನ ನೆರವಿನಿಂದ ಮುನ್ನಡೆ ಗಳಿಸಿತು.

ಆದರೆ ಮೊದಲಾರ್ಧದ ಇಂಜುರಿ ಅವಧಿಯಲ್ಲಿ (45 + 7) ಲಾರೆನ್ ಹೆಂಪ್ ಅವರು ಇಂಗ್ಲೆಂಡ್‌ಗೆ ಸಮಬಲದ ಗೋಲು ತಂದಿತ್ತರೆ, 63ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದ ಅಲೆಸ್ಸಿಯಾ ರುಸೊ ಗೆಲುವಿಗೆ ಕಾರಣರಾದರು.

ಕೊನೆಯ ನಿಮಿಷಗಳಲ್ಲಿ ಕೊಲಂಬಿಯ ಸಮಬಲದ ಗೋಲು ಗಳಿಸಲು ನಡೆಸಿದ ಪ್ರಯತ್ನಗಳ-ನ್ನು ಇಂಗ್ಲೆಂಡ್ ಗೋಲ್‌ಕೀಪರ್ ಮತ್ತು ಡಿಫೆಂಡರ್‌ಗಳು ತಡೆಯುವಲ್ಲಿ ಯಶಸ್ವಿಯಾದರು.

ಸೆಮಿಫೈನಲ್ ಪಂದ್ಯಗಳು

ಆ.15: ಸ್ಪೇನ್–ಸ್ವೀಡನ್ (ಆರಂಭ: ಮಧ್ಯಾಹ್ನ 1.30)

ಆ.16: ಆಸ್ಟ್ರೇಲಿಯಾ– ಇಂಗ್ಲೆಂಡ್ (ಆರಂಭ: ಮಧ್ಯಾಹ್ನ 3.30)

ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಟ್ರೋಫಿಯೊಂದಿಗೆ ಪುಣ್ಯಶ್ರೀ

ಸೆಸ್ಟೊಬಾಲ್ ವಿಶ್ವಕಪ್: ಪುಣ್ಯಶ್ರೀ ಬಳಗಕ್ಕೆ ಬೆಳ್ಳಿ

ಬೆಂಗಳೂರು: ಮೈಸೂರಿನ ಎನ್. ಎಸ್. ಪುಣ್ಯಶ್ರೀ ಸಾರಥ್ಯದ ಭಾರತದ ಮಹಿಳೆಯರ ತಂಡವು ಐಸಿಎ ಸೆಸ್ಟೊಬಾಲ್ ವಿಶ್ವಕಪ್ ಟೂರ್ನಿಯಲ್ಲಿ ಬೆಳ್ಳಿ ಪದಕ ಸಾಧನೆ ಮಾಡಿದೆ.

ಬೆಂಗಳೂರು ಉತ್ತರದ ದೆಹಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಈಚೆಗೆ ಟೂರ್ನಿ ಆಯೋಜಿಸಲಾಗಿತ್ತು. ಭಾರತ, ನೇಪಾಲ, ಅರ್ಜೆಂಟೀನಾ, ಬಾಂಗ್ಲಾದೇಶ, ಭೂತಾನ್, ಫ್ರಾನ್ಸ್, ಕೀನ್ಯಾ, ಶ್ರೀಲಂಕಾ ಮತ್ತು ಜಿಂಬಾಂಬ್ವೆ ತಂಡಗಳು ಭಾಗ-ವಹಿಸಿದ್ದವು. ಅರ್ಜೆಂಟೀನಾ ಪ್ರಶಸ್ತಿ ಗೆದ್ದರೆ, ಭಾರತ 2ನೇ ಸ್ಥಾನ ಪಡೆಯಿತು.

ದೇಶದಲ್ಲಿ ನಕಾರಾತ್ಮಕತೆ ಹರಡುವಿಕೆಗೆ ಸೋಲು: ಪ್ರಧಾನಿ ಮೋದಿ ಅಭಿಮತ

ಅವಿಶ್ವಾಸ ಮಂಡಿಸಿ ಕಾಲ್ಕಿತ್ತ 'ಇಂಡಿಯಾ'

ನರೇಂದ್ರ ಮೋದಿ

ಕೋಲಘಾಟ್ (ಪಶ್ಚಿಮ ಬಂಗಾಳ) (ಪಿಟಿಐ): 'ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯವನ್ನು ಧ್ವನಿ ಮತಕ್ಕೆ ಹಾಕುವ ಮೊದಲೇ 'ಇಂಡಿಯಾ' ಮೈತ್ರಿಕೂಟದ ಸದಸ್ಯರು ಕಲಾಪದಿಂದ ಓಡಿಹೋದರು. ಸರ್ಕಾರವು ಈ ನಿರ್ಣಯವನ್ನಷ್ಟೇ ಸೋಲಿಸಿಲ್ಲ. ಆ ಮೂಲಕ ದೇಶದಾದ್ಯಂತ ನಕಾರಾತ್ಮಕತೆ ಹರಡುವಿಕೆಯನ್ನೂ ಹಿಮ್ಮೆಟ್ಟಿಸಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಶನಿವಾರ ನಡೆದ ಪಂಚಾಯತ್ ರಾಜ್ ಪರಿಷತ್‌ನ ಸಭೆಯನ್ನು ಉದ್ದೇಶಿಸಿ ವರ್ಚುವಲ್ ಆಗಿ ಅವರು ಮಾತನಾಡಿದರು.

'ದೇಶದಲ್ಲಿ ನಕಾರಾತ್ಮಕತೆ ಹರಡುವುದೇ 'ಇಂಡಿಯಾ' ಕೆಲಸ. ಎರಡು ದಿನಗಳ ಹಿಂದೆ ಸಂಸತ್‌ನಲ್ಲಿ ಅವರು ಮಂಡಿಸಿದ್ದ ಅವಿಶ್ವಾಸ ನಿರ್ಣಯವನ್ನೂ ಸೋಲಿಸಿದ್ದೇವೆ. ಆದರೆ, ಧ್ವನಿ ಮತದ ಪ್ರಕ್ರಿಯೆಯಲ್ಲಿ ತನ್ನ ಹುಳುಕುಗಳು ಬಹಿರಂಗವಾಗುತ್ತವೆ ಎಂದು ವಿರೋಧಪಕ್ಷಗಳು ಪಾಲ್ಗೊಳ್ಳಲಿಲ್ಲ' ಎಂದು ಟೀಕಿಸಿದರು.

'ವಿರೋಧ ಪಕ್ಷಗಳಿಗೆ ಮಣಿಪುರ ಹಿಂಸಾಚಾರದ ಬಗ್ಗೆ ಚರ್ಚಿಸಲು ಮನಸ್ಸಿಲ್ಲ. ಯಾವುದೇ ವಿಷಯದ ಬಗ್ಗೆಯೂ ಗಹನವಾದ ಚರ್ಚೆ ಮಾಡುವುದಿಲ್ಲ. ಎಲ್ಲವನ್ನೂ ರಾಜಕೀಯಗೊಳಿಸುವುದರಲ್ಲಿ ಮುಳುಗಿವೆ' ಎಂದರು.

ದೇಶದಲ್ಲಿ ಕಾಂಗ್ರೆಸ್ 'ಗರೀಬಿ ಹಟಾವೋ' ಯೋಜನೆ ಘೋಷಿಸಿತು. ಆದರೆ, ವಾಸ್ತವದಲ್ಲಿ ಬಡತನವನ್ನು ನಿರ್ಮೂಲನೆ ಮಾಡಲಿಲ್ಲ. ರಾಷ್ಟ್ರದಲ್ಲಿನ ಬಡವರ ಜೀವನಮಟ್ಟದ ಸುಧಾರಣೆಗೂ ಯಾವುದೇ ಕ್ರಮ ವಹಿಸಲಿಲ್ಲ ಎಂದು ಅವರು ಆರೋಪಿಸಿದರು.

'ಬಡವರ ಶ್ರೇಯೋಭಿವೃದ್ಧಿಯೇ ಬಿಜೆಪಿಯ ಧ್ಯೇಯ. ಈ ನಿಟ್ಟಿನಲ್ಲಿ ದಿಟ್ಟಹೆಜ್ಜೆ ಸರ್ಕಾರ ಇಟ್ಟಿದೆ' ಎಂದರು.

'ಟಿಎಂಸಿ ಬೆದರಿಕೆ ತಂತ್ರ ಫಲಿಸಲಿಲ್ಲ'

'ಪಶ್ಚಿಮ ಬಂಗಾಳದಲ್ಲಿ ನಡೆದ ಪಂಚಾಯತ್ ಚುನಾವಣೆಯಲ್ಲಿ ಪ್ರತಿಪಕ್ಷಕ್ಕೆ ಭಯ ಹುಟ್ಟಿಸಲು ಆಡಳಿತಾರೂಢ ತೃಣಮೂಲ ಕಾಂಗ್ರೆಸ್(ಟಿಎಂಸಿ) 'ಭಯ ಹುಟ್ಟಿಸುವ ಹಾಗೂ ಬೆದರಿಕೆ'ಯ ತಂತ್ರ ಅನುಸರಿಸಿತು' ಎಂದು ಪ್ರಧಾನಿ ಮೋದಿ ಆಪಾದಿಸಿದರು.

ಆದರೆ, ಮತದಾರರು ಬಿಜೆಪಿ ಅಭ್ಯರ್ಥಿಗಳಿಗೆ ಆಶೀರ್ವದಿಸಿದರು. ಇದರಿಂದ ಭಯದ ವಾತಾವರಣ ನಿರ್ಮಿಸುವ ಅಳ್ವಿಕೆಯ ಮೇಲಿನ ಟಿಎಂಸಿ ಹಿಡಿತವೂ ತಪ್ಪಿತು ಎಂದು ಹೇಳಿದರು.

'ಬಂಗಾಳಿ ಜನರ ಪ್ರೀತಿಯು ಗೆಲುವನ್ನು ದಕ್ಕಿಸಿಕೊಟ್ಟಿತು. ಚುನಾವಣೆಯಲ್ಲಿ ಗೆದ್ದ ಬಿಜೆಪಿ ಅಭ್ಯರ್ಥಿಗಳು ವಿಜಯೋತ್ಸವ ಆಚರಣೆಗೆ ಮುಂದಾಗಲಿಲ್ಲ. ಮೆರವಣಿಗೆ ಮುಂದಾದ ಕೆಲವರ ಮೇಲೆ ದಾಳಿಯೂ ನಡೆಯಿತು. ಇದೇ ಟಿಎಂಸಿಯ ರಾಜಕೀಯ' ಎಂದು ದೂರಿದರು.

ಮೋದಿ ಹೇಳಿಕೆಗೆ ಮಮತಾ ತಿರುಗೇಟು

ಕೋಲ್ಕತ್ತ (ಪಿಟಿಐ): 'ಮಣಿಪುರದಲ್ಲಿ ನಡೆಯುತ್ತಿರುವ ದೌರ್ಜನ್ಯದಲ್ಲಿ ಭಾಗಿಯಾಗಿರುವ ತಪ್ಪಿತಸ್ಥರ ವಿರುದ್ಧ ಕೇಂದ್ರ ಸರ್ಕಾರವು ಕ್ರಮಕೈಗೊಳ್ಳಲು ನಿರ್ಲಕ್ಷ್ಯ ವಹಿಸಿದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದೂರಿದ್ದಾರೆ.

'ಪಿ.ಎಂ ಕೇರ್ ಫಂಡ್, ರಫೇಲ್ ಖರೀದಿ ಒಪ್ಪಂದ ಹಾಗೂ ನೋಟು ಅಮಾನ್ಯ ಸಂಬಂಧ ಕೇಂದ್ರದ ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿಬಂದಿದೆ. ಹಾಗಾಗಿ, ಪ್ರಧಾನಿ ಮೋದಿ ಅವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಹಕ್ಕಿಲ್ಲ' ಎಂದಿದ್ದಾರೆ.

'ಬಿಜೆಪಿಗೆ ದೇಶದ ಬಡಜನರ ಅಭ್ಯುದಯ ಬೇಕಿಲ್ಲ. ಆದರೂ, ಬಡತನ ನಿರ್ಮೂಲನೆ ಸಂಬಂಧ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ವಿರೋಧ ಪಕ್ಷಗಳ ಮೇಲೆ ಪ್ರಧಾನಿ ಅವರು ಆರೋಪ ಮಾಡುತ್ತಿದ್ದಾರೆ. ಆ ಮೂಲಕ ದೇಶದ ಜನರನ್ನು ದಿಕ್ಕುತಪ್ಪಿಸುತ್ತಿದ್ದಾರೆ' ಎಂದು ಅವರು ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ. ಪಂಚಾಯಿತಿ ಚುನಾವಣೆಯಲ್ಲಿ ಅವರಿಂದಲೇ (ಬಿಜೆಪಿ) ರಾಜ್ಯದಲ್ಲಿ 15ರಿಂದ 16 ಮಂದಿಯ ಹತ್ಯೆಯಾಗಿದೆ ಎಂದು ಆರೋಪಿಸಿದ್ದಾರೆ.

ಸ್ವಾತಂತ್ರ್ಯ ಸೇನಾನಿಗಳು...

ಕಲಬುರಗಿಯ ಎಸಿಟಿ–ನೂತನ ವಿದ್ಯಾಲಯ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಪೂರ್ವಸಿದ್ಧತೆಯ ಪ್ರಯುಕ್ತ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷಭೂಷಣದಲ್ಲಿ ಶನಿವಾರ ಸಂಭ್ರಮಿಸಿದರು

ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಸೆಂಥಿಲ್‌ಗೆ 25ರವರೆಗೆ ನ್ಯಾಯಾಂಗ ಬಂಧನ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಲಾಗಿರುವ ತಮಿಳುನಾಡಿನ ಸಚಿವ ವಿ. ಸೆಂಥಿಲ್ ಬಾಲಾಜಿ ಅವರ ಕಸ್ಟಡಿ ಅವಧಿ ಮುಗಿದ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಅವರನ್ನು ಸೆಷನ್ಸ್ ಕೋರ್ಟ್‌ಗೆ ಶನಿವಾರ ಹಾಜರುಪಡಿಸಿತು.

ಬಾಲಾಜಿ ಅವರಿಗೆ ಪ್ರಧಾನ ಸೆಷನ್ಸ್ ನ್ಯಾಯಾಧೀಶ ಎಸ್. ಅಲ್ಲಿ ಅವರು ಇದೇ 25ರವರೆಗೆ ನ್ಯಾಯಾಂಗ ಬಂಧನ ವಿಧಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿ ಹೆಚ್ಚಿನ ವಿಚಾರಣೆಗಾಗಿ ಸೆಂಥಿಲ್ ಬಾಲಾಜಿಯವರನ್ನು ಐದು ದಿನಗಳ ಕಾಲ ಇ.ಡಿ ಕಸ್ಟಡಿಗೆ ತೆಗೆದುಕೊಳ್ಳಲು ನ್ಯಾಯಾಧೀಶರು ಆಗಸ್ಟ್ 7ರಂದು ಅನುಮತಿಸಿದ್ದರು. ಹಿಂದಿನ ಎಐಎಡಿಎಂಕೆ ಆಡಳಿತದಲ್ಲಿ ಸಾರಿಗೆ ಸಚಿವರಾಗಿದ್ದಾಗ ಉದ್ಯೋಗಕ್ಕಾಗಿ ಲಂಚ ಪಡೆದ ಹಗರಣಕ್ಕೆ ಸಂಬಂಧಿಸಿ ಬಾಲಾಜಿ ಅವರನ್ನು ಜೂನ್‌ನಲ್ಲಿ ಇ.ಡಿ ಬಂಧಿಸಿದೆ.

3–12ನೇ ತರಗತಿ ಪಠ್ಯ ಪರಿಷ್ಕರಣೆ

ಎನ್‌ಸಿಇಆರ್‌ಟಿ ಹೊಸ ಸಮಿತಿಯಲ್ಲಿ ಸುಧಾಮೂರ್ತಿ, ಶಂಕರ್ ಮಹಾದೇವನ್‌ಗೆ ಸ್ಥಾನ

ಸುಧಾ ಮೂರ್ತಿ

ಶಂಕರ್ ಮಹಾದೇವನ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಪರಿಷತ್ (ಎನ್‌ಸಿಇಆರ್‌ಟಿ) 3ರಿಂದ 12ನೇ ತರಗತಿವರೆಗಿನ ಸಿಬಿಎಸ್‌ಇ ಪಠ್ಯಕ್ರಮ ಹಾಗೂ ಪಠ್ಯಪುಸ್ತಕಗಳ ಪರಿಷ್ಕರಣೆಗೆ ಹೊಸ ಸಮಿತಿಯನ್ನು ರಚಿಸಿದೆ.

ಲೇಖಕಿ ಹಾಗೂ ಇನ್ಫೊಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ, ಗಾಯಕ ಶಂಕರ್ ಮಹಾದೇವನ್, ಆರ್ಥಿಕ ತಜ್ಞ ಸಂಜೀವ್ ಸನ್ಯಾಲ್ ಅವರು ಈ ರಾಷ್ಟ್ರೀಯ ಪಠ್ಯಕ್ರಮ ಮತ್ತು ಬೋಧನಾ ಕಲಿಕಾ ಸಾಮಗ್ರಿ ಸಮಿತಿಯ (ಎನ್‌ಎಸ್‌ಟಿಸಿ) ಸದಸ್ಯರಾಗಿದ್ದಾರೆ.

ಮೇ ತಿಂಗಳಿನಲ್ಲಿ ಎನ್‌ಸಿಇಆರ್‌ಟಿ ಪಠ್ಯಕ್ರಮದ ವಿವಿಧ ತರಗತಿಯ ಪಠ್ಯಪುಸ್ತಕಗಳಲ್ಲಿ ಹಲವು ವಿಷಯಗಳು ಹಾಗೂ ಅಧ್ಯಾಯಗಳನ್ನು ಕೈಬಿಡಲಾಗಿತ್ತು. ಬಿಜೆಪಿ ನೇತೃತ್ವದ ಸರ್ಕಾರವು ಪ್ರತೀಕಾರಕ್ಕೆ ಇಳಿದಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು.

ಪಠ್ಯವನ್ನು ತರ್ಕಬದ್ಧಗೊಳಿಸುವ ನಿಟ್ಟಿನಲ್ಲಿ ಈ ಕ್ರಮಕೈಗೊಳ್ಳಲಾಗಿದೆ. ಪಠ್ಯಪುಸ್ತಕಗಳಲ್ಲಿ ಉದ್ದೇಶಪೂರ್ವಕವಲ್ಲದ ಕೆಲವು ಲೋಪಗಳಿವೆ. ಪರಿಣತರ ಶಿಫಾರಸು ಅನ್ವಯ ಇದನ್ನು ಸರಿಪಡಿಸಲಾಗುತ್ತದೆ ಎಂದು ಎನ್‌ಸಿಇಆರ್‌ಟಿ ಸ್ಪಷ್ಟಪಡಿಸಿತ್ತು.

ಒಟ್ಟು 19 ಸದಸ್ಯರನ್ನು ಒಳಗೊಂಡಿರುವ ಈ ಸಮಿತಿಯು 3ರಿಂದ 12ನೇ ತರಗತಿವರೆಗೆ ಪಠ್ಯಕ್ರಮ, ಪಠ್ಯಪುಸ್ತಕಗಳು ಹಾಗೂ ಕಲಿಕಾ ಪರಿಕರಗಳನ್ನು ಅಂತಿಮಗೊಳಿಸಲಿದೆ. ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ನಿರ್ವಹಣಾ ಸಂಸ್ಥೆಯ (ಎನ್‌ಐಇಪಿಎ) ಕುಲಪತಿ ಎಂ.ಸಿ. ಪಂತ್ ಅವರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ ಎಂದು ತಿಳಿಸಿದೆ.

ದೇಶದಾದ್ಯಂತ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ರೂಪಿಸಲು ಕೇಂದ್ರ ಸರ್ಕಾರವು ಕೆ. ಕಸ್ತೂರಿರಂಗನ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು.

ಈ ಸಮಿತಿಯು ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್–ಎಸ್‌ಇ) ರಚಿಸಿದ್ದು, ಈಗಾಗಲೇ, ಕೇಂದ್ರ ಶಿಕ್ಷಣ ಸಚಿವಾಲಯಕ್ಕೆ ಅಂತಿಮ ವರದಿ ಸಲ್ಲಿಸಿದೆ.

ಇದರ ಅನ್ವಯವೇ ಸಮಿತಿಯ ಸದಸ್ಯರು ಪಠ್ಯಕ್ರಮ ಪರಿಷ್ಕರಣೆಯ ಕೆಲಸ ನಿರ್ವಹಿಸಲಿದ್ದಾರೆ.

ಸಮಿತಿಯಲ್ಲಿ ಯಾರಿದ್ದಾರೆ?: ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಗಣಿತ ಪ್ರಾಧ್ಯಾಪಕ ಮಂಜುಲ್ ಭಾರ್ಗವ್ ಈ ಸಮಿತಿಯ ಉಪಾಧ್ಯಕ್ಷರಾಗಿದ್ದಾರೆ.

ಉಳಿದಂತೆ ಗಣಿತಶಾಸ್ತ್ರಜ್ಞೆ ಸುಜಾತಾ ರಾಮದೊರೈ, ಬ್ಯಾಡ್ಮಿಂಟನ್ ಆಟಗಾರ ಯು. ವಿಮಲ್‌ಕುಮಾರ್, ಕೇಂದ್ರ ನೀತಿ ಅಧ್ಯಯನಗಳ ಸಂಸ್ಥೆ ಅಧ್ಯಕ್ಷ ಎಂ.ಸಿ. ಶ್ರೀನಿವಾಸ್ ಹಾಗೂ ಭಾರತೀಯ ಭಾಷಾ ಸಮಿತಿ ಅಧ್ಯಕ್ಷ ಚ.ಮೂ. ಕೃಷ್ಣಮೂರ್ತಿ ಸಮಿತಿಯಲ್ಲಿರುವ ಪ್ರಮುಖ ಸದಸ್ಯರಾಗಿದ್ದಾರೆ.

ಲಕ್ಷದ್ವೀಪ: ವಿವಾದ ಸೃಷ್ಟಿಸಿದ ಶಾಲಾ ಸಮವಸ್ತ್ರ ನಿಯಮ

ತಿರುವನಂತಪುರ (ಪಿಟಿಐ): ಶಾಲೆಗಳಲ್ಲಿ ಹೊಸ ಮಾದರಿಯ ಸಮವಸ್ತ್ರ ಪರಿಚಯಿಸುವ ಲಕ್ಷದ್ವೀಪ ಆಡಳಿತದ ಕ್ರಮವನ್ನು ಕಾಂಗ್ರೆಸ್ ಶನಿವಾರ ಖಂಡಿಸಿದೆ. ಇದರ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದೆ.

ಸಮವಸ್ತ್ರಕ್ಕೆ ಸಂಬಂಧಿಸಿದ ಹೊಸ ನಿಯಮಾವಳಿಗಳಲ್ಲಿ ಮುಸ್ಲಿಮ್ ಹೆಣ್ಣು ಮಕ್ಕಳ ಹಿಜಾಬ್ ಮತ್ತು ಶಿರವಸ್ತ್ರಕ್ಕೆ ಸಂಬಂಧಿಸಿದಂತೆ ಮೌನ ವಹಿಸಲಾಗಿದೆ. ಇದು ಮುಸ್ಲಿಮ್ ಬಾಹುಳ್ಯದ ಲಕ್ಷದ್ವೀಪದ ಸಂಸ್ಕೃತಿ ಮತ್ತು ಜನರ ಜೀವನ ಶೈಲಿಯನ್ನು ಧ್ವಂಸಗೊಳಿಸಲಿದೆ ಎಂದು ಕಾಂಗ್ರೆಸ್ ನಾಯಕ, ಮಾಜಿ ಸಂಸದ ಹಮ್ದುಲ್ಲಾ ಸಯೀದ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಲಕ್ಷದ್ವೀಪದ ಸಂಸದ, ಎನ್‌ಸಿಪಿ ನಾಯಕ ಮೊಹಮದ್ ಫಯಾಜ್ ಹೊಸ ಸಮವಸ್ತ್ರ ನಿಯಮಾವಳಿಗಳನ್ನುವಿರೋಧಿಸಿದ್ದಾರೆ.

ಶಿಕ್ಷಣ ಇಲಾಖೆ ಸುತ್ತೋಲೆ: ಈ ಕುರಿತು ಶಿಕ್ಷಣ ಇಲಾಖೆ ಆಗಸ್ಟ್ 10ರಂದು ಸುತ್ತೋಲೆ ಹೊರಡಿಸಿದ್ದು, 'ಸಮವಸ್ತ್ರದಲ್ಲಿ ಏಕರೂಪತೆ ಖಾತ್ರಿಪಡಿಸಿಕೊಳ್ಳಬೇಕು' ಎಂದು ತಾಕೀತು ಮಾಡಿದೆ.

ಛತ್ತೀಸಗಢ: ಸಮವಸ್ತ್ರ ಧರಿಸಿದ ಶಿಕ್ಷಕಿ

ರಾಯಪುರ (ಛತ್ತೀಸಗಢ) (ಪಿಟಿಐ): ಸಮವಸ್ತ್ರ ಧರಿಸುವುದನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸುವಂತೆ ಪ್ರೋತ್ಸಾಹಿಸಲು ಇಲ್ಲಿನ ಸರ್ಕಾರಿ ಶಾಲೆಯ ಶಿಕ್ಷಕಿಯೊಬ್ಬರು ತಾವೇ ಸಮವಸ್ತ್ರ ಧರಿಸುವ ಮೂಲಕ ಗಮನ ಸೆಳೆದಿದ್ದಾರೆ.

ಗೋಕುಲರಾಮ್ ವರ್ಮಾ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಜಾಹ್ನವಿ ಯದು ಎಂಬವರು ಪ್ರತಿ ಶನಿವಾರದಂದು ಸಮವಸ್ತ್ರ ಧರಿಸಿ ಶಾಲೆಗೆ ಬರುತ್ತಿದ್ದು, ಈ ಸಮವಸ್ತ್ರ ಪಾಠವು ವಿದ್ಯಾರ್ಥಿಗಳ ನಡವಳಿಕೆಯಲ್ಲಿ ಬದಲಾವಣೆ ತಂದಿದೆ ಎನ್ನುತ್ತಾರೆ ಅವರು.

'ನಮ್ಮ ಶಾಲೆಗೆ ಬರುವ ಬಹುತೇಕ ವಿದ್ಯಾರ್ಥಿಗಳು ಹಿಂದುಳಿದ ವರ್ಗಕ್ಕೆ ಸೇರಿದವರು. ಹಲವು ವಿದ್ಯಾರ್ಥಿಗಳು ಖಾಲಿ ಹೊಟ್ಟೆಯಲ್ಲೇ ಬರುತ್ತಾರೆ. ಇಂತಹ ವಿದ್ಯಾರ್ಥಿಗಳಿಗೆ ಅಚ್ಚುಕಟ್ಟಾಗಿ ಸಮವಸ್ತ್ರ ಧರಿಸಿ ಬರುವಂತೆ ಹೇಳಲಾಗುತ್ತದೆ- ಯೇ? ಈ ಪರಿಸ್ಥಿತಿ ಸುಧಾರಿಸಲು ನಾನು ಸಮವಸ್ತ್ರ ಧರಿಸಿ ಶಾಲೆಗೆ ಬರುವ ಸ್ನೇಹಪರವಾದ ಮಾರ್ಗ ಕಂಡು ಕೊಂಡೆ' ಎಂದು ಜಾಹ್ನವಿ ತಿಳಿಸಿದ್ದಾರೆ.

ವಯನಾಡ್: ರಾಹುಲ್‌ಗೆ ಅದ್ದೂರಿ ಸ್ವಾಗತ

ತಮಿಳುನಾಡಿನ ನೀಲಗಿರಿ ಜಿಲ್ಲೆಯ ಮುತ್ತುನಾಡುಮಂಡು ಎಂಬಲ್ಲಿ ಶನಿವಾರ ತೋಡಾ ಬುಡಕಟ್ಟು ಸಮುದಾಯದವರೊಂದಿಗೆ ಸಮಯ ಕಳೆದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ 'ಇಳವಟ್ಟಕಲ್' ಸ್ಪರ್ಧೆಯನ್ನು ಕೂತೂಹಲದಿಂದ ವೀಕ್ಷಿಸಿದರು —ಪಿಟಿಐ ಚಿತ್ರ

ವಯನಾಡ್ (ಪಿಟಿಐ): ಲೋಕಸಭಾ ಸದಸ್ಯತ್ವ ಮರುಸ್ಥಾಪನೆಗೊಂಡ ಬಳಿಕ ಇದೇ ಮೊದಲ ಬಾರಿಗೆ ಕೇರಳದ ವಯನಾಡ್ ಲೋಕಸಭಾ ಕ್ಷೇತ್ರಕ್ಕೆ ಶನಿವಾರ ಭೇಟಿ ನೀಡಿದ ರಾಹುಲ್ ಗಾಂಧಿ ಅವರಿಗೆ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಕಾರ್ಯಕರ್ತರು ಅದ್ದೂರಿ ಸ್ವಾಗತ ಕೋರಿದರು.

ಸಂಜೆ 5.30ಕ್ಕೆ ವಯನಾಡ್ ತಲುಪಿದ ರಾಹುಲ್ ಅವರನ್ನು ಜಯ ಘೋಷಗಳೊಂದಿಗೆ ಯುಡಿಎಫ್ ನಾಯಕರು ಸಂಭ್ರಮದಿಂದ ಬರಮಾಡಿಕೊಂಡರು.

ಕಲ್‌ಪೆಟ್ಟದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ರಾಹುಲ್ ಗಾಂಧಿ, ಮಣಿಪುರದ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ತರಾಟೆಗೆ ತೆಗೆದುಕೊಂಡರು.

'ಅವರು (ಮೋದಿ) 2 ಗಂಟೆ 13 ನಿಮಿಷಗಳ ಕಾಲ ಸಂಸತ್‌ನಲ್ಲಿ ಮಾತನಾಡಿದರು. ನಕ್ಕರು, ನಗೆ ಚಟಾಕಿ ಹಾರಿಸಿದರು, ಅವರ ಮಂತ್ರಿಗಳು ನಕ್ಕರು, ಹಾಸ್ಯ ಮಾಡಿದರು, ಎಲ್ಲರೂ ಬಹಳ ಸಂತೋಷದಿಂದಿದ್ದರು. ಎಲ್ಲದರ ಬಗ್ಗೆ ಎರಡು ಗಂಟೆ ಮಾತನಾಡಿದರು. ಕಾಂಗ್ರೆಸ್ ಬಗ್ಗೆ, 'ಇಂಡಿಯಾ' ಮೈತ್ರಿಕೂಟದ ಬಗ್ಗೆ ಚರ್ಚೆ ಮಾಡಿದರು. ಆದರೆ, ಮಣಿಪುರದ ವಿಚಾರಗಳ ಬಗ್ಗೆ ಅವರು ಮಾತನಾಡಿದ್ದು ಕೇವಲ ಎರಡು ನಿಮಿಷ ಮಾತ್ರ' ಎಂದು ವಾಗ್ದಾಳಿ ನಡೆಸಿದರು.

ವಯನಾಡಿಗೆ ಬರುವ ಮಾರ್ಗಮಧ್ಯೆ ರಾಹುಲ್ ಗಾಂಧಿ, ತಮಿಳುನಾಡಿನ ನೀಲಗಿರಿಯಲ್ಲಿ ತೋಡಾ ಸಮುದಾಯದವರೊಂದಿಗೆ ಸಮಯ ಕಳೆದರು.

ನಾಲ್ಕು ಮಸೂದೆಗಳಿಗೆ ರಾಷ್ಟ್ರಪತಿ ಅಂಕಿತ

ನವದೆಹಲಿ(ಪಿಟಿಐ): ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಅಂಗೀಕಾರ ಪಡೆದಿರುವ ನಾಲ್ಕು ಮಸೂದೆಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಶನಿವಾರ ಅಂಕಿತ ಹಾಕಿದ್ದಾರೆ.

ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ, ಜನನ ಮತ್ತು ಮರಣಗಳ ನೋಂದಣಿ (ತಿದ್ದುಪಡಿ) ಮಸೂದೆ, ಜನ್ ವಿಶ್ವಾಸ್ (ನಿಬಂಧನೆಗಳ ತಿದ್ದುಪಡಿ) ಮಸೂದೆ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (ತಿದ್ದುಪಡಿ) ಮಸೂದೆಗಳಿಗೆ ರಾಷ್ಟ್ರಪತಿ ಸಹಿ ಹಾಕಿದ್ದಾರೆ.

ಈ ಪೈಕಿ, ರಾಷ್ಟ್ರ ರಾಜಧಾನಿ ಪ್ರದೇಶ ದೆಹಲಿ ಸರ್ಕಾರ (ತಿದ್ದುಪಡಿ) ಮಸೂದೆ, ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆಗಳನ್ನು ಅಧಿವೇಶನದಲ್ಲಿ ಮಂಡಿಸಿದ್ದಾಗ ಪ್ರತಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು.

ಸಂಕ್ಷಿಪ್ತ ಸುದ್ದಿ

ಗಡಿ: ನಾಳೆ ಮತ್ತೊಂದು ಸುತ್ತಿನ ಮಾತುಕತೆ

ನವದೆಹಲಿ: ಪೂರ್ವ ಲಡಾಖ್‌ನ ಗಡಿಯಲ್ಲಿನ ಉಳಿದ ಸಂಘರ್ಷ ಪೀಡಿತ ಸ್ಥಳಗಳಿಂದ ಸೇನೆಯನ್ನು ಶೀಘ್ರ ಹಿಂಪಡೆಯುವಂತೆ ಇದೇ 14ರಂದು ಚೀನಾ ಸೇನಾಧಿಕಾರಿಗಳ ಜೊತೆ ನಡೆಯಲಿರುವ ಉನ್ನತ ಮಟ್ಟದ ಸಭೆಯಲ್ಲಿ ಭಾರತ ಒತ್ತಾಯಿಸಲಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಈ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ಶಮನ ಗೊಳಿಸುವ ಸಲುವಾಗಿ ಮಾತುಕತೆ ನಡೆದು ನಾಲ್ಕು ತಿಂಗಳ ಬಳಿಕ ಸೇನಾ ಕಮಾಂಡರ್ ಮಟ್ಟದ 19ನೇ ಸುತ್ತಿನ ಮಾತುಕತೆ ನಡೆಯಲಿದೆ. ರಾಜತಾಂತ್ರಿಕ ಮತ್ತು ಸೇನೆ ಮಟ್ಟದ ಮಾತುಕತೆಗಳ ಬಳಿಕ ಎರಡೂ ದೇಶಗಳು ಕೆಲವು ಪ್ರದೇಶಗಳಿಂದ ಸೇನೆಯನ್ನು ಹಿಂಪಡೆದಿದ್ದವು.

ಮಣಿಪುರ: ಇಂಟರ್‌ನೆಟ್ ಸೇವೆಗೆ ಸೂಚನೆ

ಇಂಫಾಲ್ (ಪಿಟಿಐ): ಜನರಿಗೆ ಮೊಬೈಲ್ ಇಂಟರ್‌ನೆಟ್ ಸೇವೆಗಳನ್ನು ಒದಗಿಸುವ ಮಾರ್ಗಗಳನ್ನು ಕಂಡುಕೊಳ್ಳುವಂತೆ ಮಣಿಪುರ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ಮೇ 3 ರಂದು ರಾಜ್ಯದಲ್ಲಿ ಹಿಂಸಾಚಾರ ಭುಗಿಲೆದ್ದ ಬಳಿಕ ನಿರ್ಬಂಧಿಸಲಾದ ಮೊಬೈಲ್ ಇಂಟರ್‌ನೆಟ್ ಸೇವೆಗಳನ್ನು ಮರುಸ್ಥಾಪಿಸುವಂತೆ ಕೋರಿ ವಿವಿಧ ಪಕ್ಷಗಳು ಸಲ್ಲಿಸಿದ ಅರ್ಜಿಗಳ ವಿಚಾರಣೆಯನ್ನು ನ್ಯಾಯಾಲಯ ನಡೆಸಿತು.

ನ್ಯಾಯಮೂರ್ತಿಗಳಾದ ಅಹನತೆಮ್ ಬಿಮೋಲ್ ಸಿಂಗ್ ಮತ್ತು ಎ. ಗುಣೇಶ್ವರ್ ಶರ್ಮಾ ಅವರಿದ್ದ ನ್ಯಾಯಪೀಠ, ಮೊಬೈಲ್ ಫೋನ್‌ಗಳ ಮೂಲಕ ಇಂಟರ್‌ನೆಟ್ ಸೇವೆ ಒದಗಿಸುವ ಕಾರ್ಯವಿಧಾನಗಳನ್ನು ರೂಪಿಸಲು ಪರಿಗಣಿಸಬೇಕು ಎಂದು ಸೂಚಿಸಿ, ವಿಚಾರಣೆಯನ್ನು ಆ.31ಕ್ಕೆ ಮುಂದೂಡಿತು.

ಭೂಕುಸಿತ: 2 ಶವ ಪತ್ತೆ

ರುದ್ರಪ್ರಯಾಗ (ಪಿಟಿಐ): ಉತ್ತರಾಖಂಡದ ಗೌರಿಕುಂಡದ ಬಳಿ ಈಚೆಗೆ ಭೂಕುಸಿತ ಸಂಭವಿಸಿದ್ದ ಪ್ರದೇಶದಲ್ಲಿ ಶನಿವಾರ ಎರಡು ಮೃತದೇಹಗಳು ಪತ್ತೆಯಾಗಿದ್ದು, ಮೃತರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ.

ಮೃತರನ್ನು ಅನಿತಾ ಬೊಹ್ರಾ (25) ಮತ್ತು ಜಟಿಲ್ (7) ಎಂದು ಗುರುತಿಸಲಾಗಿದೆ. ಇನ್ನೂ 16 ಮಂದಿ ನಾಪತ್ತೆಯಾಗಿರುವುದಾಗಿ ರುದ್ರಪ್ರಯಾಗದ ವಿಪತ್ತು ನಿರ್ವಹಣಾ ಅಧಿಕಾರಿ ನಂದನ್ ಸಿಂಗ್ ರಾಜ್ವಾರ್ ತಿಳಿಸಿದ್ದಾರೆ.

ಮಿಗ್–29 ಉಡಾವಣೆ: ರನ್‌ವೇ ನಿರ್ಮಾಣ

ನವದೆಹಲಿ: ಭಾರತ ಮತ್ತು ಚೀನಾ ನಡುವಿನ ವಾಸ್ತವ ಗಡಿ ನಿಯಂತ್ರಣಾ ರೇಖೆಯಿಂದ ಕೇವಲ 50 ಕಿ.ಮೀ ದೂರದಿಂದ 'ಮಿಗ್– 29' ಅಥವಾ 'ಸುಖೋಯ್–30 ಎಂಕೆಐ' ಯುದ್ಧ ವಿಮಾನಗಳ ಉಡಾವಣೆಗೆ ಅನುಕೂಲವಾಗಲು ದಕ್ಷಿಣ ಲಡಾಖ್‌ನ ನ್ಯೋಮಾ ಎಂಬಲ್ಲಿ ಭಾರತ 10,000 ಅಡಿಗಳ ರನ್‌ವೇ ನಿರ್ಮಾಣ ಕಾರ್ಯ ಆರಂಭಿಸಿದೆ.

ರನ್‌ವೇ ನಿರ್ಮಾಣ ಕಾರ್ಯಕ್ಕೆ ಪರಿಸರ ಇಲಾಖೆ ಅನುಮತಿ ಸೇರಿದಂತೆ ಅಗತ್ಯ ಅನುಮೋದನೆಗಳನ್ನು ಪಡೆದಿರುವ ಭಾರತೀಯ ವಾಯುಪಡೆ (ಐಎಎಫ್) ಈ ವಾರ ಕಾಮಗಾರಿ ಆರಂಭಿಸಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಕಾಮಗಾರಿ ಸ್ಥಳಕ್ಕೆ ಶೀಘ್ರವೇ ಭೇಟಿ ಪರಿಶೀಲನೆ ನಡೆಸಲಿದ್ದಾರೆ.

ಅನ್ವರ್ ಉಲ್ ಹಕ್ ಕಾಕರ್ ಪಾಕ್‌ನ ಹಂಗಾಮಿ ಪ್ರಧಾನಿ

ಕರಾಚಿ (ರಾಯಿಟರ್ಸ್): ಸೆನೆಟ್ (ಸಂಸತ್ತಿನ ಮೇಲ್ಮನೆ) ಸದಸ್ಯ ಅನ್ವರ್ ಉಲ್ ಹಕ್ ಕಾಕರ್ ಅವರನ್ನು ಪಾಕಿಸ್ತಾನದ ಹಂಗಾಮಿ ಪ್ರಧಾನಿಯನ್ನಾಗಿ ಮಾಡಲು ಪ್ರಧಾನಿ ಶೆಹಬಾಜ್ ಶರೀಫ್ ಮತ್ತು ವಿರೋಧ ಪಕ್ಷದ ನಾಯಕ ರಾಜಾ ರಿಯಾಜ್ ಶನಿವಾರ ಸಮ್ಮತಿಸಿದ್ದಾರೆ.

ಈ ಕುರಿತ ಶಿಫಾರಸು ಪತ್ರಕ್ಕೆ ಪ್ರಧಾನಿ ಮತ್ತು ವಿರೋಧ ಪಕ್ಷದ ನಾಯಕರಿಬ್ಬರೂ ಸಹಿ ಹಾಕಿದ್ದು, ಅದನ್ನು ಅಧ್ಯಕ್ಷರ ಅನುಮೋದನೆಗಾಗಿ ಕಳುಹಿಸಲಾಗಿದೆ ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

'ಮುಸ್ಲಿಂ, ಕ್ರೈಸ್ತರಿಗೂ ಯುಸಿಸಿ ಅನ್ವಯಿಸುತ್ತೀರಾ?'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಮುಸ್ಲಿಂ ಹಾಗೂ ಕ್ರೈಸ್ತ ಅವಿಭಕ್ತ ಕುಟುಂಬಗಳಿಗೂ ಅನ್ವಯಿಸುತ್ತೀರಾ' ಎಂದು ಆಂಧ್ರಪ್ರದೇಶದ ರಾಜ್ಯಪಾಲರೂ ಆಗಿರುವ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಪ್ರಶ್ನಿಸಿದರು.

ಇಲ್ಲಿನ ಕಡಗಂಚಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ 'ಮಿತಾಕ್ಷರ: ಭಾರತೀಯ ನ್ಯಾಯಶಾಸ್ತ್ರದ ಅನ್ವಯಿಕ ವಿಜ್ಞಾನ' ಕುರಿತು ರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು. ವೇದಿಕೆಯ ಮೇಲಿದ್ದ ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಹಾಗೂ ಸಭಿಕರ ಆಸನದಲ್ಲಿ ಕುಳಿತಿದ್ದ ಹಿರಿಯ ವಕೀಲ ಎಂ.ಬಿ.ನರಗುಂದ ಅವರನ್ನು ತಮ್ಮ ಲಿಖಿತ ಭಾಷಣದ ಮಧ್ಯದಲ್ಲಿ ಅವರು ಮೇಲಿನಂತೆ ಪ್ರಶ್ನಿಸಿದರು.

'1956ರಲ್ಲಿ ಹಿಂದೂ ಕಾನೂನುಗಳನ್ನು ಮಾರ್ಪಾಡು ಮಾಡಲಾಯಿತು. 2005ರಲ್ಲಿ ಅದನ್ನು ಮಾರ್ಪಡಿಸಿ, ಆ ಮೂಲಕ ನಮ್ಮ ಸಹೋದರಿಯರಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲುದಾರರನ್ನಾಗಿ ಮಾಡಲಾಯಿತು. ಈಗಿರುವ ಹಿಂದೂ ಅವಿಭಕ್ತ ಕುಟುಂಬ (ಎಚ್‌ಯುಎಫ್) ತೆರಿಗೆ ಉದ್ದೇಶಕ್ಕಾಗಿ ಮಾತ್ರ ಇದೆಯಾ ಎಂದು ನಾನು ಶ್ರೀಶಾನಂದ ಅವರಿಗೆ ಕೇಳಲು ಇಚ್ಛಿಸುತ್ತೇನೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾ. ಶ್ರೀಶಾನಂದ ಅವರು, 'ಆದಾಯ ಗಳಿಸಿದವರೆಲ್ಲರೂ ತೆರಿಗೆ ಕೊಡಲೇಬೇಕು. ಚಾಣಕ್ಯನು ತನ್ನ ಅರ್ಥಶಾಸ್ತ್ರದಲ್ಲಿ ತೆರಿಗೆ ಮತ್ತು ಸಾರ್ವಜನಿಕ ವಿನಿಯೋಗದ ಬಗ್ಗೆ ಚಂದ್ರಗುಪ್ತನಿಗೆ ಒಂದು ಮಾತನ್ನು ಹೇಳಿದ್ದ. ಸಮುದ್ರದ ನೀರು ಆವಿಯಾಗಿ, ಮೋಡವಾಗಿ ಮತ್ತೆ ಮಳೆಯ ರೂಪದಲ್ಲಿ ಭೂಮಿಗೆ ಬಿದ್ದು ನದಿಗಳ ಮೂಲಕ ಅದೇ ಸಮುದ್ರ ಸೇರುತ್ತದೆ. ಹಾಗೆಯೇ ತೆರಿಗೆ ಕೂಡ. ನಾವು ದೇಶದ ಸಂಪನ್ಮೂಲವನ್ನು ಬಳಸಿ ಆದಾಯ ಗಳಿಸಿದರೆ ಅದರಲ್ಲಿ ದೇಶಕ್ಕೆ ತೆರಿಗೆ ರೂಪದಲ್ಲಿ ವಾಪಸ್ ಸಂದಾಯ ಮಾಡಲೇಬೇಕು' ಎಂದರು.

'ಒಮ್ಮೆ ಏಕರೂಪ ನಾಗರಿಕ ಸಂಹಿತೆಯ ಕರಡು ಹೊರಬಂದರೆ ಇನ್ನಷ್ಟು ಚರ್ಚೆ ಆಗುತ್ತದೆ' ಎಂದು ಹೇಳಿ ನ್ಯಾ.ನಜೀರ್ ಅವರು ತಮ್ಮ ಭಾಷಣ ಮುಂದುವರೆಸಿದರು.

ಮೈಸೂರಿನಲ್ಲಿ ಶನಿವಾರ ರಾಜ್ಯ ಮಟ್ಟದ ವಕೀಲರ ಹತ್ತನೇ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಅಧ್ಯಕ್ಷ ಎಚ್.ಎಲ್. ವಿಶಾಲ ರಘು, ಸಚಿವರಾದ ಎಚ್.ಸಿ. ಮಹದೇವಪ್ಪ, ಎಚ್.ಕೆ. ಪಾಟೀಲ, ಭಾರತೀಯ ವಕೀಲರ ಪರಿಷತ್ ರಾಷ್ಟ್ರ ಘಟಕದ ಅಧ್ಯಕ್ಷ ಮನನ್‌ಕುಮಾರ್ ಮಿಶ್ರ, ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಳೆ, ನ್ಯಾಯಮೂರ್ತಿ ಕೆ. ಸೋಮಶೇಖರ್, ಪರಿಷತ್ ಉಪಾಧ್ಯಕ್ಷ ಎಸ್. ಪ್ರಭಾಕರನ್ ಇದ್ದರು

ಒಂಟಿ ಸಲಗದ ದಾಳಿಗೆ ತುತ್ತಾಗಿ ನಾಲ್ಕು ತಿಂಗಳು ಸಾವು–ಬದುಕಿನ ಮಧ್ಯೆ ಹೋರಾಡಿದ್ದರು

ಸಾವು ಗೆದ್ದರು ಸಕ್ರೆಬೈಲ್‌ನ ಈ ಆನೆ ವೈದ್ಯ!

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ಹೊನ್ನಾಳಿ ತಾಲ್ಲೂಕಿನ ಜಿನಹಳ್ಳಿ ಬಳಿ ಏಪ್ರಿಲ್ 11ರಂದು ಒಂಟಿ ಸಲಗದ ದಾಳಿಯಿಂದ ಗಂಭೀರವಾಗಿ ಗಾಯಗೊಂಡಿದ್ದ ಸಕ್ರೆಬೈಲು ಆನೆ ಕ್ಯಾಂಪಿನ ಹಿರಿಯ ವೈದ್ಯ ಎಸ್.ವಿನಯ್ ಗುಣಮುಖರಾಗಿದ್ದಾರೆ. ಈಗ ಮತ್ತೆ ಕರ್ತವ್ಯಕ್ಕೆ ಮರಳಿದ್ದಾರೆ.

ಅವರ ಅನುಪಸ್ಥಿತಿಯಲ್ಲಿ ಹೆಚ್ಚುವರಿಯಾಗಿ ಆನೆಗಳ ದೇಖರೇಖಿ ಮಾಡಿದ್ದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮದ ವೈದ್ಯ ಡಾ.ಮುರಳಿ ಮನೋಹರ್ ಅವರಿಂದ ನಾಲ್ಕು ದಿನಗಳ ಹಿಂದಷ್ಟೇ ಆನೆ ಕ್ಯಾಂಪಿನ ಕಾರ್ಯಭಾರ ವಹಿಸಿಕೊಂಡಿದ್ದಾರೆ.

ಆನೆ ದಾಳಿಯಿಂದ ಡಾ.ವಿನಯ್ ಅವರ ಶ್ವಾಸಕೋಶಕ್ಕೆ ತೀವ್ರ ಹಾನಿಯಾಗಿತ್ತು. ಸತತ ನಾಲ್ಕು ತಿಂಗಳ ಕಾಲ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಟ ನಡೆಸಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ವಿನಯ್, ಒಂದೊಮ್ಮೆ ಬದುಕಿದರೆ ವೈದ್ಯಕೀಯ ಕ್ಷೇತ್ರದಲ್ಲೇ ಅದೊಂದು ಪವಾಡ ಆಗಲಿದೆ ಎಂದು ಶಿವಮೊಗ್ಗದಲ್ಲಿ ಅವರಿಗೆ ಮೊದಲು ಚಿಕಿತ್ಸೆ ನೀಡಿದ್ದ ವೈದ್ಯರೇ ಹೇಳಿದ್ದರು. ಅದು ನಿಜವಾಗಿದೆ. ವಿನಯ್ ಮತ್ತೆ ಬದುಕಿ ಬಂದಿದ್ದಾರೆ.

ಶಿವಮೊಗ್ಗದ ಬಳಿಯ ಸಕ್ರೆಬೈಲಿನ ಆನೆ ಕ್ಯಾಂಪಿನ ಕರ್ತವ್ಯಕ್ಕೆ ಮರಳಿದ ಡಾ.ವಿನಯ್ ತಮ್ಮ ಮೇಲೆ ದಾಳಿ ಮಾಡಿದ್ದ ಆನೆ 'ಅಭಿಮನ್ಯು'ವಿನ ಮೈದಡವಿದರು

ಡಾ.ವಿನಯ್ ಮೇಲೆ ದಾಳಿ ಮಾಡಿದ್ದ ಆ ಸಲಗ ಈಗ ಕ್ಯಾಂಪಿನಲ್ಲಿ ಖೆಡ್ಡಾಗೆ ತುತ್ತಾಗಿದೆ. ಸಾಕು ಆನೆ 'ಅಭಿಮನ್ಯು' ಆಗಿ ಬದಲಾಗಿದೆ. ಕರ್ತವ್ಯಕ್ಕೆ ಮರಳಿದ ಮೊದಲ ದಿನವೇ 'ಅಭಿಮನ್ಯು' ಭೇಟಿ ಮಾಡಿ ಮೈದಡವಿರುವ ವಿನಯ್ ಅದಕ್ಕೆ ಕಬ್ಬು ತಿನ್ನಿಸಿದ್ದಾರೆ.

ಅಂದು ಆಗಿದ್ದೇನು?: ಗುಂಪಿನಿಂದ ಬೇರೆಯಾಗಿ ಹಾಸನ ಭಾಗದಿಂದ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ, ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿಗೆ ಬಂದಿದ್ದ ಸಲಗ, ಹೊನ್ನಾಳಿ ಭಾಗವನ್ನು ಪ್ರವೇಶಿಸಿತ್ತು. ತಾನು ನಡೆದು ಬಂದ ಹಾದಿಯಲ್ಲಿ ಇಬ್ಬರನ್ನು ತುಳಿದು ಸಾಯಿಸಿದ್ದರಿಂದ ಆ ಭಾಗದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಹೀಗಾಗಿ ಆನೆ ಸೆರೆ ಹಿಡಿಯುವ ಒತ್ತಡವೂ ಹೆಚ್ಚಾಗಿತ್ತು. ಡಾ.ವಿನಯ್ ನೇತೃತ್ವದಲ್ಲಿ ಸಕ್ರೆಬೈಲು ಹಾಗೂ ಬಂಡೀಪುರ ಆನೆ ಕ್ಯಾಂಪ್‌ಗಳ ವೈದ್ಯರ ತಂಡ ಕಾರ್ಯಾಚರಣೆಗೆ ಇಳಿದಿತ್ತು.

'ಜಿನಹಳ್ಳಿ ಬಳಿ ಆನೆ ಇದೆ ಎಂಬ ಮಾಹಿತಿ ದೊರಕಿತ್ತು. ಸ್ಥಳಕ್ಕೆ ತೆರಳಿದಾಗ ಅದು ಮೆಕ್ಕೆಜೋಳದ ಹೊಲದಲ್ಲಿತ್ತು. ಜೊತೆಯಲ್ಲಿದ್ದ ಬಂಡೀಪುರ ಆನೆ ಶಿಬಿರದ ವೈದ್ಯ ಡಾ.ರಮೇಶ್ ಹಾಗೂ ನಾನು ಆನೆಗೆ ಅರಿವಳಿಕೆ ಮದ್ದು ಕೊಡಲು ನಿರ್ಧರಿಸಿ ಎರಡೂ ದಿಕ್ಕಿನಿಂದ ಹತ್ತಿರ ಹೋದೆವು. ನಮ್ಮೊಂದಿಗೆ ಅರಣ್ಯಾಧಿಕಾರಿಗಳು ಇದ್ದರು. ಆದರೆ, ಆನೆ ಏಕಾಏಕಿ ನಮ್ಮ ಬಳಿ ಧಾವಿಸತೊಡಗಿತು. ಆ ಗಡಿಬಿಡಿಯಲ್ಲಿ ಆನೆಗೆ ಅರಿವಳಿಕೆ ಮದ್ದು ಕೊಡಲು ಆಗಲಿಲ್ಲ. ಅನಿವಾರ್ಯವಾಗಿ ಎಲ್ಲರೂ ಓಡಬೇಕಾಯಿತು' ಎಂದು ವಿನಯ್ ಘಟನೆಯನ್ನು ಮೆಲುಕು ಹಾಕಿದರು.

ವಿನಯ್ ಅವರಿಗೆ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಯಲ್ಲಿ 48 ಗಂಟೆಗಳ ಕಾಲ ಪ್ರಾಥಮಿಕ ಚಿಕಿತ್ಸೆ ನೀಡಿ, ವಿಶೇಷ ಆಂಬುಲೆನ್ಸ್‌ನಲ್ಲಿ ಜೀರೊ ಟ್ರಾಫಿಕ್ ಮೂಲಕ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.

'ದೇವರ ದಯೆ ಬದುಕಿದೆ'

'ನಾನು ಭತ್ತದ ಗದ್ದೆಯಲ್ಲಿ ಓಡುವಾಗ ಕಾಲಿಗೆ ಕೂಳೆ ಸಿಲುಕಿ ಕೆಳಗೆ ಬಿದ್ದುಬಿಟ್ಟಿದ್ದೆ. ಸಾವು ಬೆನ್ನ ಹಿಂದೆಯೇ ಇತ್ತು. ಆನೆಯ ದಾಳಿಗೆ ಸಿಲುಕುವುದು ಖಚಿತವಾಯಿತು. ಮೇಲೆದ್ದವನೇ ಎದೆಗೆ ಅಡ್ಡಲಾಗಿ ಕೈ ಇಟ್ಟುಕೊಂಡು ಕಣ್ಣು-ಮುಚ್ಚಿಕೊಂಡು ದೇವರು, ಮನೆಯ ಹಿರಿಯರ ಸ್ಮರಿಸುತ್ತಾ ಕುಳಿತುಬಿಟ್ಟೆ. ಆನೆ ಬೆನ್ನ ಹಿಂದಿನಿಂದ ದಾಳಿ ಮಾಡುತ್ತಿದ್ದಂತೆಯೇ ಪ್ರಜ್ಞೆ ತಪ್ಪಿತು. ನಂತರ ಆಸ್ಪತ್ರೆಯಲ್ಲಿ ಎಚ್ಚರವಾಯಿತು. ದೇವರ ದಯೆ ಮತ್ತೆ ಬದುಕಿಬಿಟ್ಟೆ' ಎಂದು ಘಟನೆ ನಡೆದ ಕ್ಷಣವನ್ನು ಡಾ.ವಿನಯ್ ನೆನಪಿಸಿಕೊಂಡರು.

ಮೈಸೂರಿನಲ್ಲಿ ವಕೀಲರ ರಾಜ್ಯಮಟ್ಟದ 10ನೇ ಸಮಾವೇಶ

'ವಕೀಲರ ರಕ್ಷಣಾ ಕಾಯ್ದೆ ಶೀಘ್ರ ಜಾರಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಂದಿನ ವಿಧಾನ ಮಂಡಲ ಅಧಿವೇಶನದಲ್ಲಿಯೇ ವಕೀಲರ ರಕ್ಷಣಾ ಮಸೂದೆಯನ್ನು ಮಂಡಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಶನಿವಾರ ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಆಯೋಜಿಸಿದ್ದ ವಕೀಲರ ರಾಜ್ಯಮಟ್ಟದ ಹತ್ತನೇ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ವಕೀಲರ ರಕ್ಷಣಾ ಮಸೂದೆಯ ಕರಡು ಪ್ರತಿಯನ್ನು ಹಿಂದಿನ ಸರ್ಕಾರವೇ ಸಿದ್ಧಪಡಿಸಿತ್ತು. ನಮ್ಮ ಸರ್ಕಾರದ ಮೊದಲ ಅಧಿವೇಶನದಲ್ಲೇ ಅದನ್ನು ಮಂಡಿಸಲು ಸಿದ್ಧತೆ ನಡೆದಿದ್ದರೂ ಸಾಧ್ಯವಾಗಲಿಲ್ಲ' ಎಂದರು.

'ಹಿಂದೆ ಕೆಳಜಾತಿಯವರು ವಕೀಲರಾಗುವುದು ಬೇಡವೆಂಬ ಅಭಿಪ್ರಾಯವಿತ್ತು. ನನ್ನನ್ನು ವಕೀಲರನ್ನಾಗಿಸುವುದು ಬೇಡ ಎಂದು ನಮ್ಮೂರಿನ ಶಾನುಭೋಗರೊಬ್ಬರು ನನ್ನ ತಂದೆಗೆ ಹೇಳಿದ್ದರು. ಅವರ ಮಾತು ಕೇಳಿ ನಾನು ವಕೀಲನಾಗದೇ ಇದ್ದಿದ್ದರೆ ಖಂಡಿತ ಮುಖ್ಯಮಂತ್ರಿ ಆಗುತ್ತಿರಲಿಲ್ಲ' ಎಂದರು.

'ನಮ್ಮಲ್ಲಿಯೇ ಕೆಲವು ಸಂವಿಧಾನ ವಿರೋಧಿಗಳಿದ್ದು, ವಿದ್ಯಾರ್ಥಿ ದಿಸೆಯಲ್ಲಿಯೇ ಅವರನ್ನು ದಾರಿ ತಪ್ಪಿಸಲಾಗಿರುತ್ತದೆ. ಅವರೇ ನ್ಯಾಯಾಧೀಶರೂ ಆಗುತ್ತಾರೆ. ಅಂತಹವರಿಂದ ಸಮಾಜಕ್ಕೆ, ಬಡವರಿಗೆ, ದಲಿತರಿಗೆ ನ್ಯಾಯ ಸಿಗಲು ಸಾಧ್ಯವೇ? ವಕೀಲರು ಸಂವಿಧಾನದ ಉಳಿವಿಗಾಗಿ ಚರ್ಚಿಸಬೇಕು. ಎಷ್ಟೇ ಕಷ್ಟವಾದರೂ ಸಂವಿಧಾನವನ್ನು ಉಳಿಸಿಕೊಳ್ಳಬೇಕು' ಎಂದರು.

'ನಮ್ಮಲ್ಲಿ ಕೆಳ ಹಂತದ ನ್ಯಾಯಾಲಯಗಳಲ್ಲಿರುವ ಮೀಸಲಾತಿಯು ಉನ್ನತ ನ್ಯಾಯಾಲಯಗಳಲ್ಲೂ ಜಾರಿಯಾದರೆ ನ್ಯಾಯದಾನ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ಎಸ್. ಬೋಪಣ್ಣ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ವರಾಳೆ, ಭಾರತೀಯ ವಕೀಲರ ಪರಿಷತ್ ರಾಷ್ಟ್ರ ಘಟಕದ ಅಧ್ಯಕ್ಷ ಮನನ್‌ಕುಮಾರ್ ಮಿಶ್ರ, ಕರ್ನಾಟಕ ರಾಜ್ಯ ವಕೀಲರ ಪರಿಷತ್ತು ಅಧ್ಯಕ್ಷ ಎಚ್.ಎಲ್. ವಿಶಾಲ ರಘು, ಸಚಿವ ಎಚ್.ಸಿ. ಮಹದೇವಪ್ಪ ಇದ್ದರು. 14 ವರ್ಷಗಳ ಬಳಿಕ ನಗರದಲ್ಲಿ ರಾಜ್ಯಮಟ್ಟದ ವಕೀಲರ ಸಮಾವೇಶ ನಡೆದಿದೆ.

ಈ ಹೊತ್ತಿನ ತುರ್ತಿಗೆ ಸುಬ್ಬಣ್ಣ ಸ್ಮರಣೆ 11

ಕಾರ್ಮಿಕರ ಹಿರಿಯಕ್ಕ 'ಮೋಟಾಬೆನ್' 12



ಸ್ವರಾಜ್-ಅಭಿವೃದ್ಧಿಯ ಕಡೆಗೊಂದು ಹೊಸ ನೋಟ 12

ಸ್ವಾತಂತ್ರ್ಯದ ನೆರಳಲ್ಲಿ ಸತ್ಯದ ಹುಡುಕಾಟ

ಇದು ಸ್ವಾತಂತ್ರ್ಯೋತ್ಸವದ ಸಂದರ್ಭ. ಡಿಜಿಟಲ್ ಜಾಲಗಳಲ್ಲಿ ನೆರಳಿನಂತೆ ಹಿಂಬಾಲಿಸುವವರ ನಡುವೆಯೇ ಸ್ವಾತಂತ್ರ್ಯ ಕಳೆದುಕೊಂಡೆವೇನೋ ಎಂದು ಗಲಿಬಿಲಿಗೊಳ್ಳುವವರೂ ಇದ್ದಾರೆ. ಸಿಕ್ಕಿದ ಸ್ವಾತಂತ್ರ್ಯ, ಹುಡುಕಾಡುತ್ತಿರುವ ಸ್ವಾತಂತ್ರ್ಯದ ಜಿಜ್ಞಾಸೆಗೆ ಇಂಬುಗೊಡುವಂತೆ ವಿವಿಧ ಕ್ಷೇತ್ರಗಳವರು ತಮ್ಮ ಅಭಿಪ್ರಾಯವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಡಿಜಿಟಲ್ ಪ್ರೈವೆಸಿ ಹಕ್ಕು ಯಾಕಲ್ಲ?

ಸೈಬರ್ ಸುರಕ್ಷತೆ, ಆಂತರಿಕ ಭದ್ರತೆ, ಅತಿಯಾದ ರಕ್ಷಣೆ, ಕಾಳಜಿಯ ಹೆಸರಿನಲ್ಲಿ ನಮ್ಮ ಆಡಳಿತಾತ್ಮಕ ವ್ಯವಸ್ಥೆಗಳು ಹೇರುತ್ತಿರುವ ಕಾಯ್ದೆಗಳು (Data Protection Laws, Personal Data Protection Bill ಇತ್ಯಾದಿಗಳು) ನಮ್ಮ ಡಿಜಿಟಲ್ ಪ್ರೈವೆಸಿಯನ್ನು/ಡಿಜಿಟಲ್ ಖಾಸಗೀತನವನ್ನು ಹಕ್ಕು ಎಂದು ಪರಿಗಣಿಸದೆ ನಮ್ಮ ಬದುಕಿನ ಮೇಲೆ ಕಪಿ ಮುಷ್ಟಿ ಚಾಚುತ್ತಿರುವುದು ತಾಂತ್ರಿಕ ಕಾರಣಗಳಿಂದ ಸತ್ಯ. ಚುನಾವಣೆಯ ಕಾಲದಲ್ಲಿ ಮತದಾರನ ದತ್ತಾಂಶ, ಕೋವಿಡ್ ಆರೋಗ್ಯ ಸಂಬಂಧಿ ಚುಚ್ಚುಮದ್ದು ವಿತರಣೆಗೆ ದತ್ತಾಂಶ ಹೀಗೆ ಭಾರತೀಯನ ಎಲ್ಲ ದತ್ತಾಂಶಗಳನ್ನು ಒಂದೆಡೆ ಸೇರಿಸಲು ಅನೇಕ ಆ್ಯಪ್‌ಗಳು ತಯಾರಾಗಿದ್ದು, ಅವೆಲ್ಲವುಗಳಿಗೆ ಸರ್ಕಾರಗಳು ಖಾಸಗಿ ಸಂಸ್ಥೆಗಳನ್ನು ಅವಲಂಬಿಸಿದವು. ನಂತರದ ದಿನಗಳಲ್ಲಿ ಆಧಾರ್ ಅನ್ನೂ ಒಳಗೊಂಡಂತೆ ಇಂತಹ ಎಲ್ಲ ಮಾಹಿತಿಗಳೂ ಸೋರಿಕೆಯಾದದ್ದು ನಮ್ಮೆದುರಿಗೆ ನಡೆದ ದುರಂತ.

ಮಾಧ್ಯಮಗಳೂ ವರದಿಗಳ ಮೂಲಕವೇ ವ್ಯಕ್ತಿ, ಸಂದರ್ಭ, ಸೂಕ್ಷ್ಮ ವಿಚಾರಗಳ ಸೋರಿಕೆಯಲ್ಲಿ ಮುಖ್ಯ ಪಾತ್ರವಹಿಸುತ್ತಿವೆ. ಟಿಆರ್‌ಪಿಗಾಗಿ ಖಾಸಗೀತನದ ಹರಣವಾಗುತ್ತಿದೆ. ವ್ಯಕ್ತಿಯೊಬ್ಬನ ಆರೋಗ್ಯ, ದೈನಂದಿನ ಚಟುವಟಿಕೆ, ವೈದ್ಯಕೀಯ ಹಿನ್ನೆಲೆ ಹೀಗೆ ಹತ್ತಾರು ವಿಷಯಗಳು ಸೋಶಿಯಲ್ ಮೀಡಿಯಾ ಮೂಲಕ ಜಗಜ್ಜಾಹೀರಾಗಲು ನಿಮಿಷಗಳು ಸಾಕಿರುವಾಗ, ಅದರ ಸುರಕ್ಷತೆಗೆ ನಾವು ತೆಗೆದುಕೊಳ್ಳುತ್ತಿರುವ ಎಚ್ಚರಿಕೆ ಎಳ್ಳಷ್ಟೂ ಸಾಲದು.

ಇಂಟರನೆಟ್ ಬಳಕೆಯನ್ನು ತಿಂಗಳುಗಟ್ಟಲೆ ನಿರ್ಬಂಧಿಸುವ, ಮುಕ್ತ ಮಾಹಿತಿ ಹಂಚಿಕೆಗೆ ಕಡಿವಾಣ ಹಾಕುವ ದೇಶಗಳಲ್ಲಿ ಭಾರತವೂ ಅಗ್ರಗಣ್ಯವಾಗಿ ನಿಲ್ಲುತ್ತಿರುವುದನ್ನು ನಾವು ಕಾಣಬಹುದು. ದತ್ತಾಂಶಗಳು ಸಮಾಜದ ಒಳಿತಿಗೆ ಬೇಕಾದ ಸಂಶೋಧನೆಗೆ ಲಭ್ಯವಾಗದೆ ನಂಬರ್ ಗೇಮ್ ಆಗಿ ಬದಲಾಗಿವೆ. ಬಂಡವಾಳಶಾಹಿ, ಖಾಸಗೀಕರಣದಿಂದಾಗಿ ನಮ್ಮನ್ನಾಳುವ ಪ್ರಭುತ್ವ, ದೈನಂದಿನ ಬಳಕೆಯಲ್ಲಿ ಸಾಮಾನ್ಯನ ದತ್ತಾಂಶ ಕಳ್ಳತನ ತಡೆಗಟ್ಟುವ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವಲ್ಲಿ ಸ್ವಾವಲಂಬನೆ ಹೊಂದುವ ಗುರಿಯನ್ನೇ ಇಟ್ಟುಕೊಂಡಿಲ್ಲ.

ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಮೂಲ ಕಾರಣ ವಿಶ್ಲೇಷಣೆ ಮಾಡಿದಲ್ಲಿ, ಲಭ್ಯ ತಂತ್ರಜ್ಞಾನ ಹಾಗೂ ಅದರ ನಿರ್ದಿಷ್ಟ ಬಳಕೆಯ ವ್ಯವಸ್ಥೆ ಸ್ಥಾಪಿಸುವಲ್ಲಿರುವ ಅಂತರ ತಿಳಿಯುತ್ತದೆ. ತಂತ್ರಜ್ಞಾನವನ್ನು ಬಳಸಲು ಬೇಕಿರುವ ಅರಿವಿನ ಕೊರತೆ ಕೂಡ ನಮ್ಮ ಖಾಸಗೀತನದ ಕಳ್ಳತನಕ್ಕೆ ನಾವೇ ಕಾರಣವಾಗುವುದಕ್ಕೂ ಹಾಗೂ ನಮ್ಮ ಸುತ್ತಲಿನ ಸುರಕ್ಷತಾ ವ್ಯವಸ್ಥೆಗಳು ಅದನ್ನು ಭೇದಿಸುವುದಲ್ಲಿ ವಿಫಲವಾಗುವುದಕ್ಕೂ ಕಾರಣ. ಖಾಸಗೀತನವನ್ನು ಗೌರವಿಸುವುದು ಹಾಗೂ ಚಲಾಯಿಸಲು ಬೇಕಿರುವ ಅಧಿಕಾರವನ್ನು ಕೇಳಿ ಪಡೆಯಬೇಕಿರುವುದು ಸ್ವತಂತ್ರ ಭಾರತದಲ್ಲಿ ನಾವು ಕಳೆದುಕೊಳ್ಳುತ್ತಿರುವ 'ನಮ್ಮ ಹಕ್ಕು ಹಾಗೂ ಸ್ವಾತಂತ್ರ್ಯವನ್ನು' ಎತ್ತಿ ತೋರಿಸುತ್ತಿದೆ.

ಓಂಶಿವಪ್ರಕಾಶ್, ಡಿಜಿಟಲ್ ಆರ್ಕೈವಿಸ್ಟ್

ಪ್ರಶ್ನಿಸುವುದೂ ಕಷ್ಟ

ಜನಪ್ರಿಯ ನಂಬಿಕೆ ಅಥವಾ ಪಾಪ್ಯುಲರ್ ಬಿಲೀಫ್ (ಪರ್ಸನಾಲಿಟಿ) ಪ್ರಶ್ನಿಸುವ ರೀತಿಯ ಪ್ರತಿಕ್ರಿಯೆ ಕೊಡುವುದು ತುಂಬ ಕಷ್ಟವಾಗಿರುವ ಕಾಲವಿದು. ಮೊದಲು ಪತ್ರಿಕೆಗಳಲ್ಲಿ ಲೇಖನ ಪ್ರಕಟವಾದರೆ, ಅದನ್ನು ಬರೆದವರಹೆಸರುಬಿಟ್ಟರೆಬೇರೇನೂಗೊತ್ತಾಗುತ್ತಿರಲಿಲ್ಲ. ಈಗ ಅಭಿಪ್ರಾಯ ಹಂಚಿಕೊಳ್ಳುವವರ ಎಲ್ಲ ವಿವರಗಳು (ಫೋಟೊ, ಫ್ರೆಂಡ್ಸ್ etc) ಎಲ್ಲ ಸೋಶಿಯಲ್ ಮೀಡಿಯಾ ಪ್ಲಾಟ್‌ಫಾರ್ಮ್‌ಗಳಲ್ಲಿ ಇರುವುದರಿಂದ ಪ್ರತಿಕ್ರಿಯೆ ನೀಡುವವರಿಗೆ ತೊಂದರೆ ಆಗುವುದು ಹೆಚ್ಚಾಗುತ್ತಿದೆ.

ತಮಿಳುನಾಡಿನ ಒಬ್ಬ ಸ್ಟ್ಯಾಂಡ್‌ಅಪ್ ಕಾಮಿಡಿಯನ್ ತೆಲುಗಿನ ಸ್ಟಾರ್ ನಟನ ಮುಖಭಾವದ ಮೇಲೆ ಒಂದು ಜೋಕ್ ಮಾಡಿದಕ್ಕೆ ಅವನಷ್ಟೇ ಅಲ್ಲದೆ ಅವನ ಕುಟುಂದವರು, ಸ್ನೇಹಿತರನ್ನು ಕೂಡ ಸಂಪರ್ಕ ಮಾಡಿ ಅಭಿಮಾನಿಗಳು ಜೀವ ಬೆದರಿಕೆ ಹಾಕಿದ್ದರು. ಕೊನೆಗೆ ಆತ ಕ್ಷಮೆ ಕೇಳಿ ವಿಡಿಯೊ ಮಾಡಿ, ತಾನು ಮಾಡಿದ್ದ ವಿಡಿಯೊ ಡಿಲೀಟ್ ಮಾಡುವವರೆಗೆ ಬಿಡಲಿಲ್ಲ.

Groups Search for Consensus, Individuals Search for Truth ಎಂದು ಉದ್ಯಮಿ ನೇವಲ್ ರವಿಕಾಂತ್ ಹೇಳಿದ್ದಾರೆ. ನಿಜವೇ ಆಗಿದ್ದರೂ ಜನರ ಭಾವನೆಗಳಿಗೆ ನೋವು ಉಂಟು ಮಾಡುವಂತಹ ಜನಪ್ರಿಯವಲ್ಲದ ಪ್ರತಿಕ್ರಿಯೆ ವ್ಯಕ್ತಪಡಿಸುವುದು ಕಷ್ಟವಾಗಿದೆ. ಇದರ ಇನ್ನೊಂದು ವ್ಯತಿರಿಕ್ತ ಪರಿಣಾಮವೆಂದರೆ, ಆನ್‌ಲೈನ್‌ನಲ್ಲಿ ರೂಪಿತವಾಗುತ್ತಿರುವ ವಿಷಯಗಳ ಗುಣಮಟ್ಟ ದಿನದಿಂದ ದಿನಕ್ಕೆ ಕಡಿಮೆ ಆಗುತ್ತಾ ಇರುವುದು.

ಈಚೀಚೆಗೆ 'ಕಂಟೆಂಟ್ ಕ್ರಿಯೇಟರ್ಸ್' ಸೂಕ್ಷ್ಮವಾಗಿ ಪ್ರಶ್ನಿಸುವ 'ಕಂಟೆಂಟ್' ಮಾಡುವುದರ ಬದಲು ಅಪಾಯ ಕಡಿಮೆ ಎನಿಸುವಂತಹ 'ಜನಪ್ರಿಯ ಕಂಟೆಂಟ್' ಹಿಂದೆ ಹೋಗುತ್ತಿದ್ದಾರೆ. ಉದಾಹರಣೆಗೆ, ರೋಸ್ಟ್ ಚಾನೆಲ್ಸ್-ಜನ (ಮುಖ್ಯವಾಗಿ ಹೆಣ್ಣುಮಕ್ಕಳು) ಮಾಡುವ ರೀಲ್ಸ್ ನೋಡಿ ಅಪಹಾಸ್ಯ ಮಾಡುವುದು. ಇದೂ 'ಕಂಟೆಂಟ್' ಎನ್ನುವುದು ನಿಜ. ಕಲಾ ಸ್ವಾತಂತ್ರ್ಯ ಪಡೆದುಕೊಂಡಿರುವ ಈ ಹೊತ್ತಿನ ಮಜಲು ಇದು ಎನ್ನಬೇಕು.

ವಿಕಾಸ್, 'ವಿಕಿಪೀಡಿಯಾ' ಖ್ಯಾತಿಯ ಕಂಟೆಂಟ್ ಕ್ರಿಯೇಟರ್

ಕಲಾ ಸ್ವಾತಂತ್ರ್ಯದ ಈ ಬಗೆ

ಸಂಗೀತಗಾರ್ತಿಯಾಗಿ ನಾನು ಗುರುಕುಲ ಪದ್ಧತಿಯಿಂದ ಸ್ವಾತಂತ್ರ್ಯದ ವಿಷಯವನ್ನು ಪ್ರಸ್ತಾಪಿಸುವೆ. ಆಗ ಗುರುವಿನ ಮೂಲಕ ಏನು ಕಲಿಯುತ್ತಿದ್ದೆವೋ ಅದೇ ಜ್ಞಾನ. ಯಾವ ಬಾಣಿಯಲ್ಲಿ, ಯಾವ ರಾಜ್ಯದಲ್ಲಿ, ಯಾವ ಪ್ರಕಾರದಲ್ಲಿ ಸಂಗೀತ ಅಭ್ಯಾಸ ಮಾಡುತ್ತಿದ್ದೆವೋ ಆ ಚೌಕಟ್ಟಿನಲ್ಲೇ ಸೃಜಿಸುವ ಸ್ವಾತಂತ್ರ್ಯವೂ ಇರುತ್ತಿತ್ತು. ಆಧುನೀಕರಣದ ನಂತರ ಡಿಜಿಟಲ್ ಲೋಕವೂ ತೆರೆದುಕೊಂಡಿತು. ನನಗೆ ಅದು 'ಯುರೇಕಾ ಮೂಮೆಂಟ್'. ವಿವಿಧೆಡೆಯ ಸಂಗೀತ ನೋಡಿದ ಮೇಲೆ ಹೀಗೂ ಹಾಡುತ್ತಾರಾ, ಹೀಗೂ ಅಭಿವ್ಯಕ್ತಿಸುತ್ತಾರಾ ಎನಿಸತೊಡಗಿತು. ಕೇವಲ ಭಾರತೀಯ ಶಾಸ್ತ್ರೀಯ ಸಂಗೀತಕ್ಕಷ್ಟೆ ಇದು ಅನ್ವಯವಾಗುವುದಿಲ್ಲ, ವಿಶ್ವ ಸಂಗೀತಕ್ಕೆ ಆಗುವಂಥದು. ಅದಕ್ಕೂ ಮೊದಲು ಗ್ರಾಮಾಫೋನ್ ಪ್ಲೇಟ್‌ಗಳು ಎಷ್ಟು ಸಿಗುತ್ತಿದ್ದವೋ ಅಷ್ಟೇ ಬೇರೆ ಸಂಗೀತಕ್ಕೆ ನಾವೆಲ್ಲ ತೆರೆದುಕೊಳ್ಳಲು ಸಾಧ್ಯವಿತ್ತು. ಡಿಜಿಟಲೀಕರಣವು ಕಲಾವಂತರಿಗೆ ಹೊಸ ಪ್ರಪಂಚವನ್ನೇ ತೆರೆದಿಟ್ಟಿತು.

ಶಾಸ್ತ್ರೀಯ ಸಂಗೀತದ ಮನೆಯವಳಾದ ನನಗೆ ಹಳೆಯ ಕಾಲದ ನಿಬಂಧನೆಗಳ ಹಿಂದೆ ಇದ್ದ ಸದುದ್ದೇಶದ ಪರಿಚಯವೂ ಇದೆ. ನಿರ್ದಿಷ್ಟ ಸಂಗೀತ ಪ್ರಕಾರದಲ್ಲಿ ಇಂತಿಷ್ಟು ವರ್ಷ ಸಾಧನೆ ಮಾಡಿದರೆ ಪರಿಣತಿ ಸಾಧ್ಯ ಎನ್ನುವುದು ಆ ಸದುದ್ದೇಶ. ಇದರಿಂದ ಅನೇಕ ಮಹಾನ್ ಸಂಗೀತ ಪರಿಣತರನ್ನು ನಾವು ನೋಡಲು ಸಾಧ್ಯವಾಗಿದೆ. ಈಗ ನಿರ್ದಿಷ್ಟ ಕಲಾಪ್ರಕಾರದಲ್ಲಿ ಅಭ್ಯಾಸ ಮಾಡಿದವರಿಗೆ ಬೇರೊಂದು ಬಗೆಯ ಪ್ರಕಾರವನ್ನು ಗಮನಿಸುವುದು ಕಷ್ಟವಲ್ಲ. ಇದರಿಂದ ಒಳ್ಳೆಯ ಸಂಗತಿಗಳನ್ನು ಪಡೆದುಕೊಳ್ಳುವ ದಾರಿ ತೆರೆದುಕೊಂಡಂತಾಗಿದೆ. ಇದೇ ಕಲಾ ಸ್ವಾತಂತ್ರ್ಯ. ನಿಧಾನವಾಗಿ ಇದಕ್ಕೆ ಜನರು ತೆರೆದುಕೊಳ್ಳುತ್ತಿದ್ದಾರೆ. ನಾವು ಕಲಿತ ಸಾಂಪ್ರದಾಯಿಕ ಕಲೆ ಇನ್ನಷ್ಟು ಹಿಗ್ಗುವ ಬಗೆ ಇದು. ಸಾಮಾಜಿಕ ಮಾಧ್ಯಮಗಳಿರುವುದೇ ನಮ್ಮ ಸಂಭ್ರಮವನ್ನು ಹಂಚಿಕೊಳ್ಳುವುದಕ್ಕೆ. ಕಲೆಯ ವಿಷಯದಲ್ಲಿ ಪ್ರತಿಕ್ರಿಯಿಸುವವರಿಗೆ ಅರಿವು ಇದ್ದರೆ ಒಳ್ಳೆಯದು. ಪ್ರತಿಕ್ರಿಯೆಗಳಲ್ಲಿ ಕುಟುಕುವವರನ್ನೂ ಸಹಜವಾಗಿಯೇ ಎದುರಿಸಬೇಕಾಗುತ್ತದೆ.

ವಾರಿಜಾಶ್ರೀ ವೇಣುಗೋಪಾಲ್, ಸಂಗೀತಗಾರ್ತಿ

ಚೌಕಟ್ಟಿನೊಳಗಿನ ಹುಡುಕಾಟ

ರಂಗಭೂಮಿ ನಟಿಯಾಗಿ ನಾನು ಚೌಕಟ್ಟಿನಲ್ಲಿ ಇದ್ದುಕೊಂಡೇ ಏನನ್ನೋ ಹೇಳಬೇಕಾಗುತ್ತದೆ. ಇದನ್ನೇ ಸಂಪೂರ್ಣ ಸ್ವಾತಂತ್ರ್ಯವು ನನಗೆ ಇಲ್ಲ ಎಂದೂ ಅರ್ಥೈಸಬಹುದು. ಹೇಳಬೇಕಾದ ಎಲ್ಲವನ್ನೂ ರಂಗಭೂಮಿಯಲ್ಲಿ ನೇರವಾಗಿ ಹೇಳಲು ಆಗದೇ ಇರಬಹುದು. ಆಗ ನಾವು ಬೇರೆ ದಾರಿಯನ್ನು ಆಯ್ಕೆ ಮಾಡಿಕೊಂಡು, ಅದನ್ನು ಪ್ರಸ್ತುತಪಡಿಸುತ್ತೇವೆ. ಯಾವುದೋ ಪಾತ್ರ ನಿರ್ವಹಿಸುವ ನಾನು ಹೊರಬಂದ ನಂತರವೂ ಅದರ ಸಕಲವನ್ನೂ ಅನುಭವಿಸುವುದೋ, ಜೀವಿಸುವುದು ಸಾಧ್ಯವೇ ಎಂಬ ಯೋಚನೆ ಸದಾ ನನ್ನನ್ನು ಕಾಡುತ್ತದೆ. ರಂಗಭೂಮಿಯಲ್ಲಿ ಸಹಪಾಠಿಗಳ ಜತೆಗೇ ನಾವು ಕೆಲಸ ಮಾಡುವುದರಿಂದ ಒಂಟಿಯಾಗಿ ಯೋಚಿಸಲಾಗದು.

ವೈಯಕ್ತಿಕವಾಗಿ ನಾನು ಸರ್ವತಂತ್ರ ಸ್ವತಂತ್ರಗಳು ಎಂದು ತಾತ್ವಿಕವಾಗಿ ಹೇಳಲು ಆಗದೇ ಇರುವುದಕ್ಕೆ ಇಂಥವೇ ಕೆಲವು ಕಾರಣಗಳಿವೆ. ನನಗೆ ಕುಟುಂಬವಿದೆ. ಅಲ್ಲಿ ಚೌಕಟ್ಟಿನೊಳಗೆ ಇರಬೇಕು. ಅದು ನನಗೆ ಒಪ್ಪಿತವೆ. ಸರ್ವತಂತ್ರ ಸ್ವತಂತ್ರಳಾಗಬೇಕು ಎಂಬ ಕಾರಣಕ್ಕೆ ಒತ್ತಾಯಪೂರ್ವಕವಾಗಿ ಅದರಿಂದ ಹೊರಗೆ ಬರಬೇಕಾಗಿಲ್ಲ. ಇದ್ದೇ ನನ್ನ ನೆಲೆಗಟ್ಟಿನಲ್ಲೇ ಹೋರಾಟ ಮಾಡುತ್ತಿರಬೇಕು. ರಂಗಭೂಮಿಯಲ್ಲಿಯೂ ನನ್ನದು ವೈಯಕ್ತಿಕ ಹೋರಾಟ. ಮಣಿಪುರದ ಘಟನೆಯನ್ನೋ, ದೆಹಲಿಯ ನಿರ್ಭಯಾ ಪ್ರಕರಣವನ್ನೋ, ಇನ್ಯಾವುದೋ ಅತ್ಯಾಚಾರ ಪ್ರಕರಣವನ್ನೋ ನೇರವಾಗಿ ಅವವೇ ಪ್ರಕರಣಗಳ ಹೆಸರುಗಳಿಂದ ರಂಗಭೂಮಿ ಮೇಲೆ ತರಲು ಸಾಧ್ಯವಿಲ್ಲ. ಹೀಗೆ ಚೌಕಟ್ಟಿನೊಳಗೆ ಇದ್ದೇ ಇವತ್ತಿಗೂ ಮಾಡಬೇಕಾದದ್ದು ಸ್ವಾತಂತ್ರ್ಯಕ್ಕಾಗಿ ನಡೆಸುವ ಹೋರಾಟವೇ ಹೌದು. ಇವತ್ತು ಯಾರಿಗೋ ದನದ ಮಾಂಸ, ಹಂದಿ ಮಾಂಸ ತಿನ್ನಬೇಕೆನಿಸಿದರೆ ಅದನ್ನು ನಿರ್ಬಂಧಿಸುವವರಿದ್ದಾರೆ. ಸಸ್ಯಾಹಾರಿಗಳಾಗಿರುವವರಿಗೂ ಇದಷ್ಟೇ ತಿಂದರೆ ಪ್ರಯೋಜನವಿಲ್ಲ ಎಂದು ಬೋಧನೆ ಮಾಡುವವರೂ ಇದ್ದಾರೆ. ಮುಕ್ತವಾಗಿ ಇಷ್ಟಬಂದದ್ದನ್ನು ತಿನ್ನುವುದು ಈಗ ಕಷ್ಟ. ಕದ್ದುಮುಚ್ಚಿ ತಿನ್ನಬೇಕಾದ ಅನಿವಾರ್ಯವಿದೆ. ತಿನ್ನುವ ಆಹಾರ, ತೊಡುವ ಬಟ್ಟೆಗೆ ಅಂಕೆ ಇರುವಾಗ ಇದನ್ನು ಪೂರ್ಣ ಸ್ವಾತಂತ್ರ್ಯ ಎಂದು ಹೇಗೆ ಹೇಳಲಾದೀತು?

ಬಿಂದು ರಕ್ಷಿದಿ, ರಂಗಭೂಮಿ-ನಟಿ

ಆಗ ರಾಷ್ಟ್ರೀಯತೆಯ ತೊಟ್ಟಿಲು ಈಗ ಸಮಸ್ಯೆಗಳ ಕೂಪ

ಸ್ವಾತಂತ್ರ್ಯಪೂರ್ವದಲ್ಲಿ ಕಾಸ್ಮೋಪಾಲಿಟನ್ ನಗರವಾಗಿದ್ದ, ಆರ್ಥಿಕವಾಗಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ, ನವೋದ್ಯಮಗಳ ತವರೆನಿಸಿದ್ದ ಬಳ್ಳಾರಿಯು ಈಗ ಮೂಲಸೌಕರ್ಯಗಳಿಗೂ ಅಂಗಲಾಚಬೇಕಾದ ಪರಿಸ್ಥಿತಿಗೆ ಬಂದು ನಿಂತಿದೆ. ಸ್ವಾಂತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಇದೊಂದು ವ್ಯಂಗ್ಯದಂತೆ ಕಾಣುತ್ತಿದೆ.

ವೆಂಕಟ್ ನಾಗ್ ಕೋಲಾಚಲಂ

ದಕ್ಷಿಣ ಭಾರತದ ಹೃದಯದಲ್ಲಿರುವ ನಗರ ಬಳ್ಳಾರಿ ಹಿಂದೆ ಬ್ರಿಟಿಷ್ ಮದ್ರಾಸ್ ಪ್ರೆಸಿಡೆನ್ಸಿಯನ್ನು ಮೈಸೂರು ಮತ್ತು ನಿಜಾಮ್ ರಾಜ್ಯಗಳ ಜತೆಗೆ ಸಂಪರ್ಕಿಸುತ್ತಿತ್ತು. ಒಂದು ಕಾಲದಲ್ಲಿ ಅದು ಕಾಸ್ಮೋಪಾಲಿಟನ್ ನಗರಿ. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಗಳನ್ನು 19ನೇ ಶತಮಾನದ ಕೊನೆ ಹಾಗೂ 20ನೇ ಶತಮಾನದ ಮೊದಲಿನಲ್ಲಿ ಕಂಡ ನಗರಿ. ಆದರೀಗ ಸ್ವತಂತ್ರ ಭಾರತದಲ್ಲಿ ಬಳ್ಳಾರಿ ಹಿಂದುಳಿದ ಪ್ರದೇಶ. '371 ಜೆ' ಕಲಂನ ವ್ಯಾಪ್ತಿಗೆ ಅದು ಬರುತ್ತದೆ.

ಸರ್ಕಾರಕ್ಕೆ ಮೂರು ಸ್ತಂಭಗಳು-ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ. ಈ ಮೂರೂ ಸ್ತಂಭಗಳ ಸ್ಥಾಪನೆಗೆ ಬೀಜಾಂಕುರವಾದದ್ದು ಬಳ್ಳಾರಿಯಲ್ಲಿ ಎನ್ನುವುದು ಅಚ್ಚರಿಯ ಸಂಗತಿ. ದಕ್ಷಿಣ ಭಾರತದಲ್ಲಿ ಡಿಸ್ಟ್ರಿಕ್ಟ್ ಕಲೆಕ್ಟರ್ (ಡಿ.ಸಿ.) ಎನ್ನುವ ಹುದ್ದೆ ಮೊದಲು ಸೃಷ್ಟಿಯಾದದ್ದು 1799ರಲ್ಲಿ, ಬಳ್ಳಾರಿಯಲ್ಲಿ. ಆಗ ಸರ್ ಥಾಮಸ್ ಮನ್ರೋ ಮೊದಲ ಡಿ.ಸಿ. ಆದರು. ಆಡಳಿತಾತ್ಮಕ ಕಾರ್ಯನಿರ್ವಹಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಹುದ್ದೆ ಎಂದೇ ಇದನ್ನು ಭಾರತ ಸರ್ಕಾರ ಮುಂದೆ ಪರಿಗಣಿಸಿತು. ಭಾರತದಲ್ಲಿ ಚುನಾವಣಾ ರಾಜಕೀಯವು ಹುಟ್ಟು ಪಡೆದದ್ದು 1882ರಲ್ಲಿ, ವೈಸರಾಯ್ ರಿಪ್ಪನ್‌ನ ಮುನ್ಸಿಪಲ್ ಕೌನ್ಸಿಲ್ ಯೋಜನೆ ಘೋಷಿತವಾದಾಗ. ಈ ಸ್ವರೂಪದ ರಾಜಕೀಯವನ್ನು ಮೊದಲು ಅಳವಡಿಸಿಕೊಂಡಿದ್ದು ಬಳ್ಳಾರಿ. 1883ರಲ್ಲಿ ಅಲ್ಲಿ ಮುನ್ಸಿಪಲ್ ಕೌನ್ಸಿಲ್ ಚುನಾವಣೆ ನಡೆದಿತ್ತು.



ಇತಿಹಾಸ ಹುದುಗಿಸಿಕೊಂಡ ಬಳ್ಳಾರಿಯ ಡಿ.ಸಿ ಕಚೇರಿ ಪ್ರಜಾವಾಣಿ ಚಿತ್ರ: ಮುರಳೀಕಾಂತ ರಾವ್

ದಕ್ಷಿಣ ಭಾರತದಲ್ಲಿ ಬಳ್ಳಾರಿಯೇ ಭಾರತ ರಾಷ್ಟ್ರೀಯ ಚಳವಳಿಯ ತೊಟ್ಟಿಲು ಎಂದು ಪರಿಗಣಿತವಾಗಿತ್ತು. ಇಲ್ಲಿನ ಜನರೇ ಆ ಚಳವಳಿಯನ್ನು ಮುಂಚೂಣಿಗೆ ತಂದದ್ದು. 1885ರಲ್ಲಿ ಕಾಂಗ್ರೆಸ್ ಸಂಸ್ಥಾಪನೆಯಾದದ್ದೇ ರಾಷ್ಟ್ರೀಯ ಚಳವಳಿಗೆ ನಾಂದಿ. ಬಳ್ಳಾರಿಯ ವೆಂಕಟ ರಾವ್ ಕಾಂಗ್ರೆಸ್ ಸಂಸ್ಥಾಪಕರಲ್ಲಿ ಒಬ್ಬರು. ಆ ಕಾಲದ ಕಾಂಗ್ರೆಸ್‌ನ ಪ್ರಮುಖ ನಾಯಕರಲ್ಲಿ ಅವರ ಹೆಸರೂ ಇದೆ. ಬಾಲಗಂಗಾಧರ ತಿಲಕರಿಗೆ ರಾಜಕೀಯ ಮರುಹುಟ್ಟು ನೀಡಿದ ಸ್ಥಳವೂ ಇದೇ ಬಳ್ಳಾರಿ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕ್ರಾಂತಿಕಾರಿ ತಿರುವಿಗೂ ತಿಲಕರ ರಾಜಕೀಯ ಮರುಹುಟ್ಟಿಗೂ ಸಂಬಂಧವಿದೆ. ಇದೇ ರೀತಿ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ ಅನೇಕ ಚಟುವಟಿಕೆ ಬಳ್ಳಾರಿ ಜತೆಗೆ ತಳಕು ಹಾಕಿಕೊಂಡಿವೆ. ದೇಶದ ಆಧುನಿಕ ರಾಜಕೀಯ ರೂಪುಗೊಳ್ಳುವಲ್ಲಿಯೂ ಬಳ್ಳಾರಿಯ ಪಾತ್ರ ಅಪ್ರತಿಮವಾದದ್ದು.

ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಬಳ್ಳಾರಿಯು ಸಾಕಷ್ಟು ಮುಂಚೂಣಿಯಲ್ಲಿತ್ತು. 19ನೇ ಶತಮಾನದ ಕೊನೆಯ ಹೊತ್ತಿಗೆ ಅಲ್ಲಿ ಬಾಲ್ಯವಿವಾಹವನ್ನು ನಿಷೇಧಿಸಲಾಗಿತ್ತು, ವಿಧವಾ ಪುನರ್ವಿವಾಹಕ್ಕೆ ಅವಕಾಶ ಕಲ್ಪಿಸಲಾಗಿತ್ತು. ವಿಧವೆಯರು ಮರುವಿವಾಹವಾದರೆ ಅವರನ್ನು ಜನರು ನಿಂದಿಸುತ್ತಿರಲಿಲ್ಲ. ಬಳ್ಳಾರಿಯಲ್ಲಿ ಮಹಿಳಾ ಕ್ಲಬ್‌ಗಳು ಸ್ಥಾಪಿತವಾಗಿದ್ದವು. ಅಖಿಲ ಭಾರತ ಹಿಂದೂ ಮಹಿಳಾ ಸಾಮಾಜಿಕ ಔತಣಕೂಟವನ್ನು 1905ರಲ್ಲಿಯೇ ಬಳ್ಳಾರಿಯಲ್ಲಿ ಆಯೋಜಿಸಲಾಗಿತ್ತು.

ಆರ್ಥಿಕ ಸ್ವಾತಂತ್ರ್ಯವು ರಾಜಕೀಯ ಸ್ವಾತಂತ್ರ್ಯಕ್ಕೆ ಸಮಾನಾಂತರವಾಗಿ ಇರಬೇಕು ಎಂದೇ ಬಳ್ಳಾರಿಯ ಹಳೆಯ ರಾಷ್ಟ್ರೀಯವಾದಿಗಳು ನಂಬಿದ್ದರು. ಜಾಗತಿಕ ಕೈಗಾರಿಕಾ ಕ್ರಾಂತಿಯ ಅರಿವು ಪಡೆದುಕೊಂಡ ಮೇಲೆ ಬಳ್ಳಾರಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದರು. ಸಾವಿರಾರು ಜನರಿಗೆ ಉದ್ಯೋಗ ನೀಡಿದರು. ಆ ಕಾಲಘಟ್ಟದದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿದ ಪ್ರಮುಖರಲ್ಲಿ ಕೋಲಾಚಲಂ ವೆಂಕಟ ರಾವ್ ಅವರೂ ಒಬ್ಬರು. ಅರ್ಧ ಡಜನ್ ಕೈಗಾರಿಕೆಗಳನ್ನು ಸ್ಥಾಪಿಸಿದ್ದ ಅವರು, ರಷ್ಯಾ ಹಾಗೂ ಅಮೆರಿಕದ ಪಾಲುದಾರರನ್ನು ಹೊಂದಿದ್ದರೆನ್ನುವುದು ವಿಶೇಷ. ರಾವ್ ಬಹದ್ದೂರ್ ಕಣೇಕಲ್ ನೆಟ್ಟಕಲ್ಲಪ್ಪ ಅವರು ಬ್ಯಾಂಕರ್ ಹಾಗೂ ಪ್ರಮುಖ ರಫ್ತುದಾರರಾಗಿದ್ದರು. ಹತ್ತಿ ಬಟ್ಟೆ ಉತ್ಪಾದಿಸುವ ಕಾರ್ಖಾನೆ ಸ್ಥಾಪಿಸಿದ್ದ ಸಭಾಪತಿ ಮುದಲಿಯಾರ್ ಅವರಿಗೆ ಯುರೋಪ್ ಹಾಗೂ ಆಫ್ರಿಕಾದಲ್ಲಿ ವ್ಯಾಪಾರ ಸಂಪರ್ಕವಿತ್ತು. ಈ ಮೂವರೂ ಬಳ್ಳಾರಿ ಮುನಿಸಿಪಲ್ ಕೌನ್ಸಿಲ್‌ನ ಮೊದಲ ಚುನಾಯಿತ ಸದಸ್ಯರೂ ಆಗಿದ್ದರೆನ್ನುವುದು ಗಮನಾರ್ಹ.



ಕೋಲಾಚಲಂ ವೆಂಕಟ್ ರಾವ್

ಆಗಲೇ ನವೋದ್ಯಮ ಕೇಂದ್ರ

ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾ ತರಹದ ಅತಿ ಉತ್ಪ್ರೇಕ್ಷಿತ ಯೋಜನೆಗಳು ಹೊಸ ಆಲೋಚನೆಗಳೇನೂ ಅಲ್ಲ. 150 ವರ್ಷಗಳ ಹಿಂದೆಯೇ ಇವು ಜಾರಿಯಲ್ಲಿದ್ದವು. 19ನೇ ಶತಮಾನದ ಕೊನೆ ಹಾಗೂ 20ನೇ ಶತಮಾನದ ಶುರುವಿನಲ್ಲಿ ಬಳ್ಳಾರಿಯು ಭಾರತದ ಸ್ಟಾರ್ಟ್-ಅಪ್ ಅಥವಾ ನವೋದ್ಯಮಗಳ ತವರಾಗಿತ್ತು.

ನಗರದಲ್ಲಿ ಆಗ ಪ್ರದರ್ಶನ ಹಾಗೂ ಮಾರಾಟ ಮಳಿಗೆ (ಶೋರೂಂ) ಕೂಡ ಇತ್ತು. 'ದಿ ಇಂಡಿಯನ್ ಸ್ಟೋರ್ಸ್' ಎಂದು ಅದಕ್ಕೆ ಹೆಸರಿತ್ತು. ಸ್ಥಳೀಯ ಉತ್ಪನ್ನಗಳಿಗೆ ಪ್ರಚಾರ ದಕ್ಕಿಸಿಕೊಡುವ ಸ್ವದೇಶಿ ಚಳವಳಿಯ ಭಾಗವಾಗಿ ತಲೆಎತ್ತಿದ್ದ ಸ್ಟೋರ್ಸ್ ಇದು. 1905ರ ಡಿಸೆಂಬರ್‌ನಲ್ಲಿ ಬನಾರಸ್‌ನಲ್ಲಿ ಮೊದಲ ಭಾರತೀಯ ಕೈಗಾರಿಕಾ ಸಮಾವೇಶ ನಡೆದಾಗ, ಕರ್ನಾಟಕದಿಂದ ಭಾಗವಹಿಸಿದ್ದ ಪ್ರತಿನಿಧಿಗಳೆಲ್ಲ ಬಳ್ಳಾರಿಯಿಂದಲೇ ಹೋದವರಾಗಿದ್ದರು. ಅವರೆಲ್ಲ ರೂಪಿಸಿದ್ದ ಕೈಗಾರಿಕಾ ವ್ಯವಸ್ಥೆ ಎಷ್ಟು ಯಶಸ್ವಿಯಾಗಿ ಇತ್ತೆಂದರೆ, ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯ ಡಬ್ಲ್ಯು ಎಸ್. ಕೈನ್ 1896ರಲ್ಲಿ ಮಂಡಿಸಿದ ಪ್ರಬಂಧದಲ್ಲಿನ ಈ ಸಾಲೇ ಅದಕ್ಕೆ ಕನ್ನಡಿ ಹಿಡಿಯುತ್ತದೆ: 'ಭಾರತದಲ್ಲಿ ಸಾಲವಿಲ್ಲದ, ತಕ್ಕಮಟ್ಟಿಗೆ ಲಾಭವನ್ನೂ ಮಾಡಿರುವ ಏಕೈಕ ಮುನ್ಸಿಪಲ್ ಕೌನ್ಸಿಲ್ ಬಳ್ಳಾರಿ.'

11ನೇ ಪುಟಕ್ಕೆ...

ಈ ಹೊತ್ತಿನ ತುರ್ತಿಗೆ ಸುಬ್ಬಣ್ಣ ಸ್ಮರಣೆ

ಪ್ರಕಾಶ ಕುಗ್ವೆ

'ಸುಬ್ಬಣ್ಣ ಸುಮ್ಮನೆ ಆದವರೆ? ಸೂರ್ಯನ ಕುಡಿದು ಸುಡದವರು'- ನಮ್ಮೆಲ್ಲರ ರಂಗಪ್ರಜ್ಞೆಯನ್ನು ರೂಪಿಸಿದ ಕೆ.ವಿ. ಸುಬ್ಬಣ್ಣನವರ ವ್ಯಕ್ತಿತ್ವವನ್ನು ನಿರೂಪಿಸಲು ಕಂಬಾರರ ಈ ಕವಿತೆಯ ಈ ಒಂದು ಸಾಲು ಸಾಕು. ಹೆಗ್ಗೋಡಿನಂತಹ ಹಳ್ಳಿಗೆ ದಿಲ್ಲಿಯಂತಹ ಜಗತ್ತು ತಂದು ಅದರ ಸಾರವನ್ನೆಲ್ಲ ಇಲ್ಲಿನ ಜನರಿಗೆ ಸಮಾನವಾಗಿ ಉಣಬಡಿಸಿದ ಬಹುದೊಡ್ಡ ಪ್ರಜಾಪ್ರಭುತ್ವವಾದಿ ಸುಬ್ಬಣ್ಣ. ಇಂತಹವರ ಸ್ಮರಣೆಯೊಂದೇ ಈ ಹೊತ್ತಿನ ಬಿಕ್ಕಟ್ಟುಗಳಿಗೆ ತುರ್ತು ಪರಿಹಾರವೇನೋ ಅನಿಸುತ್ತಿದೆ.

ಸುಬ್ಬಣ್ಣ ಇಲ್ಲವಾಗಿ 18ನೇ ವರ್ಷ. ಈ ನೆನಪಿಗಾಗಿ ಆಯೋಜಿಸಿದ್ದ ಕುವೆಂಪು ಅವರ 'ರಕ್ತಾಕ್ಷಿ' ಹಾಗೂ ಪಿ. ಲಂಕೇಶರ ಕಥೆಗಳನ್ನು ಆಧರಿಸಿದ 'ರೊಟ್ಟಿಯ ಸಲುವಾಗಿ ಇಷ್ಟೆಲ್ಲ..!?' ನಾಟಕಗಳು ಕಿಕ್ಕಿರಿದು ತುಂಬಿದ್ದ ರಂಗಮಂದಿರದಲ್ಲಿ ಮತ್ತೆ ಮತ್ತೆ ಸುಬ್ಬಣ್ಣರ ಸ್ಮರಣೆಯ ಅಲೆ ಎಬ್ಬಿಸಿದವು.

ಶೇಕ್ಸ್‌ಪಿಯರ್‌ನ ಪ್ರಸಿದ್ಧ ನಾಟಕ 'ಹ್ಯಾಮ್ಲೆಟ್'ನಿಂದ ಪ್ರೇರಣೆ ಪಡೆದು ರಚಿತವಾಗಿರುವ 'ರಕ್ತಾಕ್ಷಿ'ಯ ಮೊದಲ ಕೆಲವು ದೃಶ್ಯಗಳಲ್ಲಿ ಈ ನಾಟಕದ ಛಾಯೆ ಕಾಣುತ್ತದೆ. ಮುಂದಿನ ಭಾಗಗಳು ಕುವೆಂಪು ಅವರ ಸ್ವಂತ ಸೃಷ್ಟಿ. ಈ ನಾಟಕದ ಇನ್ನೊಂದು ಮೂಲ ಬಿದನೂರು ಸಂಸ್ಥಾನದ ಇತಿಹಾಸ; ಇದು ಕೂಡ ಸೀಮಿತವಾಗಿ.

ಬಿದನೂರಿನ ರಾಣಿ ಚೆಲುವಾಂಬೆ ತನ್ನ ಪತಿ ಬಸಪ್ಪ ನಾಯಕನ ಸಾವಿನ ನಂತರ ಮಗನೊಬ್ಬನನ್ನು ದತ್ತು ಪಡೆದು ಆತನು ತನ್ನ ಶೀಲವನ್ನು ಶಂಕಿಸಿದ್ದರಿಂದ ಕೊಲ್ಲಿಸಿದಳು ಎಂಬ ಐತಿಹ್ಯವನ್ನು ಆಧರಿಸಿ ನಾಟಕದ ಕಥಾನಕವು ವಿಸ್ತಾರಗೊಂಡಿದೆ. ರಾಣಿಯ ಶೀಲದ ಬಗ್ಗೆ ಎದ್ದ ಸಂದೇಹ ಮತ್ತು ಹೈದರ್ ಅಲಿಯು ಬಿದನೂರನ್ನು ಆಕ್ರಮಿಸಿ ಗೆದ್ದನೆಂಬ ಇತಿಹಾಸದ ಕಥನ-ಇದನ್ನು ಭಿತ್ತಿಯಾಗಿಟ್ಟುಕೊಂಡು ಕುವೆಂಪು ಅವರು ಹಲವು ಹೊಸ ಪಾತ್ರ-ಸನ್ನಿವೇಶಗಳನ್ನು ಅದರ ಸುತ್ತ ರೂಪಿಸಿದ್ದಾರೆ. ಈ ನಾಟಕವನ್ನು ಕಟ್ಟುವಾಗ ಕುವೆಂಪು ಅವರು ಬೆಳೆಸಿರುವ ಪ್ರಮುಖ ಪಾತ್ರ ಈ ನಾಟಕದ ಮಂತ್ರಿಯ ಮಗಳು ರುದ್ರಾಂಬೆ. ಮುಂದೆ ಈ ರುದ್ರಾಂಬೆಯೇ ಉನ್ಮತ್ತಳಾಗಿ ರಕ್ತಾಕ್ಷಿಯೆಂಬ ಹೆಸರು ಹಚ್ಚಿಕೊಂಡು ನಡೆದ ಅನ್ಯಾಯಗಳ ವಿರುದ್ಧ ಸೇಡು ತೀರಿಸಿಕೊಳ್ಳುವುದೇ ಈ ನಾಟಕದ ದ್ವಿತೀಯಾರ್ಧ.

1932ರಲ್ಲಿ ಈ ನಾಟಕ ರಚನೆಯಾದರೂ ಇಂದಿಗೂ ಹೆಚ್ಚು ಪ್ರಸ್ತುತ. ಅಧಿಕಾರಕ್ಕಾಗಿ ಮನುಷ್ಯನ ಹಪಾಹಪಿತನವನ್ನು ಬಿಚ್ಚಿಡುವ ಈ ನಾಟಕವನ್ನು ಕನ್ನಡ ರಂಗಭೂಮಿಯಲ್ಲಿ ಇಷ್ಟು ವರ್ಷಗಳಲ್ಲಿ ಹಲವು ತಂಡಗಳು ಹಲವಾರು ಪ್ರಯೋಗಗಳನ್ನು ನೀಡಿವೆ. ಇದನ್ನು ರಂಗದ ಮೇಲೆ ತರುವುದು ತುಸು ಸವಾಲಿನ ಕೆಲಸ. ಅರ್ಧ ಹಳಗನ್ನಡ ಪದ್ಯ ಶೈಲಿಯಲ್ಲಿರುವ ಸಂಭಾಷಣೆಯನ್ನು ಒಪ್ಪಿಸುವುದು ನಟ ಹಾಗೂ ನಿರ್ದೇಶಕ ಇಬ್ಬರು ನುರಿತರಾಗಿದ್ದರಷ್ಟೇ ಸುಲಭ. ಇಂತಹ ಪ್ರಯೋಗಗಳಲ್ಲಿ ಎಂದಿಗೂ ಸೈ ಎನಿಸಿಕೊಂಡಿರುವ ನಿರ್ದೇಶಕ ಬಿ.ಆರ್.ವೆಂಕಟರಮಣ ಐತಾಳರು ಮತ್ತೊಮ್ಮೆ ಮೆಚ್ಚುಗೆ ಕೆಲಸವನ್ನೇ ಮಾಡಿದ್ದಾರೆ. ಪ್ರಸ್ತುತ ಪ್ರಯೋಗದಲ್ಲಿ ಬಸವಯ್ಯ, ಲಿಂಗಣ್ಣ, ಹೊನ್ನಯ್ಯ, ಚೆಲುವಾಂಬೆ, ಸನ್ಯಾಸಿ, ಕೆಂಚಣ್ಣ, ಸಿಂಗಣ್ಣ ಪಾತ್ರಧಾರಿಗಳದ್ದು ಜೀವ ಚೈತನ್ಯದ ನಟನೆ. ರಕ್ತಾಕ್ಷಿ ಪಾತ್ರದಲ್ಲಿ ವಿದ್ಯಾ ಹೆಗಡೆ ಅವರದ್ದು ಅದ್ಭುತ ಅಭಿನಯ. ರಕ್ತಾಕ್ಷಿ ಉನ್ಮತ್ತಳಾಗಿ, ಸೇಡು ತೀರಿಸಿಕೊಳ್ಳುವ ಅಭಿನಯದ ದೃಶ್ಯಗಳಂತೂ ಪ್ರೇಕ್ಷಕನ ಮನಸ್ಸಿನಲ್ ಲಿ ವಿಷಾದ ಮಡುಗಟ್ಟುವಂತೆ ಮಾಡುತ್ತವೆ. ನಿಂಬಯ್ಯ ಪಾತ್ರ ಪೋಷಣೆಗೆ ವಸ್ತ್ರಾಲಂಕಾರವೇ ತೊಡಕಾಗಿದ್ದಂತೆ ಕಾಣಿಸಿತು. ರುದ್ರಾಂಬೆಯ ಸಂಭಾಷಣೆಯ ಏರಿಳಿತ ಸಾಕಾಗಿಲ್ಲ. ರಂಗಸಜ್ಜಿಕೆ, ಸಂಗೀತ, ಬೆಳಕು ಒಂದಕ್ಕೊಂದು ಪೈಪೋಟಿ ಕೊಡುವಷ್ಟು ಗುಣಾತ್ಮಕವಾಗಿದ್ದವು. ನಾಟಕದ ಬಹುತೇಕ ಕಲಾವಿದರು ಹವ್ಯಾಸಿಗಳು ಎನ್ನುವುದು ಗಮನಿಸಬೇಕಾದ ಅಂಶ.

ಇಲ್ಲಿ ಕುತೂಹಲದ ಸಂಗತಿಯೊಂದಿದೆ. ಸುಬ್ಬಣ್ಣ ಅವರು ಮೈಸೂರಿನಲ್ಲಿ ವ್ಯಾಸಂಗ ಮಾಡುತ್ತಿರುವಾಗ 'ರಕ್ತಾಕ್ಷಿ' ನಾಟಕದ ರುದ್ರಾಂಬೆ ಪಾತ್ರದಲ್ಲಿ ನಟಿಸಿದ್ದರಂತೆ; ಅದನ್ನು ಸ್ವತಃ ಕುವೆಂಪು ಅವರು ನೋಡಿ ಮೆಚ್ಚುಗೆ ಸೂಚಿಸಿದ್ದರಂತೆ.

ಎರಡನೇ ನಾಟಕ-ಇದು ಲಂಕೇಶರ 'ರೊಟ್ಟಿ' ಮತ್ತು 'ಅಧಿಕಾರಗಳು ಮತ್ತು ಕೆಲಸದವ' ಕಥೆಗಳನ್ನು ಆಧರಿಸಿ 'ರೊಟ್ಟಿಯ ಸಲುವಾಗಿ ಇಷ್ಟೆಲ್ಲ...!?' ಹೆಸರಿನ ಆಪ್ತ ರಂಗ ಪ್ರಯೋಗ. ಈ ನಾಟಕದ ವಿನ್ಯಾಸ ಹಾಗೂ ನಿರ್ದೇಶನ ಡಾ.ಎಂ.ಗಣೇಶ್ ಅವರದ್ದು. ನೀನಾಸಂ ರಂಗ ಶಿಕ್ಷಣ ಕೇಂದ್ರದ ಪ್ರಾಂಶುಪಾಲರಾಗಿರುವ ಗಣೇಶ್ ರಜೆ ಅವಧಿಯಲ್ಲಿ ಜನಮನದಾಟ ರಂಗ ತಂಡ ಸಂಘಟಿಸಿ ಪ್ರಸ್ತುತ ಪಡಿಸಿರುವ ಪ್ರದರ್ಶನವಿದು. ಹೀಗೆ ತಂಡ ಕಟ್ಟಿ, ತಿರುಗಾಟ ನಡೆಸಲು ಸ್ಫೂರ್ತಿ ಮತ್ತು ಪ್ರೇರಣೆ ನೀಡಿದವರು ಸುಬ್ಬಣ್ಣನವರೇ ಎಂದು ಕೃತಜ್ಞತೆಯಿಂದ ಸ್ಮರಿಸುತ್ತಾರೆ ಗಣೇಶ್.

ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ಕೆ.ವಿ. ಸುಬ್ಬಣ್ಣ ಸ್ಮರಣೆಯ ಅಂಗವಾಗಿ ಜನಮನದಾಟ ತಂಡದ ಕಲಾವಿದರು ಪ್ರದರ್ಶಿಸಿದ 'ರೊಟ್ಟಿಯ ಸಲುವಾಗಿ ಇಷ್ಟೆಲ್ಲ...!?' ನಾಟಕದ ದೃಶ್ಯ.

ಹೆಗ್ಗೋಡಿನ ಶಿವರಾಮ ಕಾರಂತ ರಂಗಮಂದಿರದಲ್ಲಿ ಕೆ.ವಿ. ಸುಬ್ಬಣ್ಣ ಸ್ಮರಣೆಯ ಅಂಗವಾಗಿ ನೀನಾಸಂ ಬಳಗದ ಕಲಾವಿದರು ಪ್ರದರ್ಶಿಸಿದ 'ರಕ್ತಾಕ್ಷಿ' ನಾಟಕದಲ್ಲಿ ರಕ್ತಾಕ್ಷಿ.

> ಸುಬ್ಬಣ್ಣ ಇನ್ನಿಲ್ಲವಾಗಿ ಇದು 18ನೇ ವರ್ಷ. ಕೋವಿಡ್ ಸಂದರ್ಭದಲ್ಲಿ ಬಿಟ್ಟರೆ ಪ್ರತಿ ವರ್ಷವೂ ಅವರ ನೆನಪಿನ ಕಾರ್ಯಕ್ರಮಗಳು ಹೆಗ್ಗೋಡಿನ ನೀನಾಸಂನಲ್ಲಿ ನಡೆಯುತ್ತಾ ಬಂದಿವೆ. ಅವರ ನೆನಪಿನಲ್ಲಿ ಇತ್ತೀಚೆಗೆ ಪರಿಸರದ ಕುರಿತ ಉಪನ್ಯಾಸದ ಜತೆ ಎರಡು ನಾಟಕಗಳ ಪ್ರದರ್ಶನ ಆಯೋಜಿಸಲಾಗಿತ್ತು...



ಕೆ.ವಿ.ಸುಬ್ಬಣ್ಣ

ಈಗಿನ ರಾಜ್ಯ ಸರ್ಕಾರದ ಉಚಿತ ಯೋಜನೆಗಳನ್ನು ಟೀಕಿಸುವ ಭರದಲ್ಲಿ ಹಸಿವನ್ನೇ ಹಂಗಿಸುವ ಕೆಲಸ ವ್ಯವಸ್ಥಿತವಾಗಿ ನಡೆಯುತ್ತಿದೆ. ಆದರೆ, ನಿಜವಾಗಿಯೂ ಹಸಿವು ಎಂದರೇನು ಎಂಬುದನ್ನು ಪ್ರಯಾಣದಲ್ಲಿದ್ದು, ಹಸಿವೆಯಿಂದ ರೊಟ್ಟಿ ತಿನ್ನಲು ರೈಲ್ವೆ ನಿಲ್ದಾಣದಲ್ಲಿ ಒಬ್ಬಂಟಿ ಮುದುಕಿಯೊಬ್ಬಳು ಗಂಟು ಬಿಚ್ಚುತ್ತಿದ್ದಾಗ ಹಸಿದ ಭಿಕಾರಿಯೊಬ್ಬ ಅದನ್ನು ಕಿತ್ತುಕೊಂಡು ಪರಾರಿಯಾಗುವ ಸನ್ನಿವೇಶದ ಮೂಲಕ ಮಾರ್ಮಿಕವಾಗಿ ಕಟ್ಟಿಕೊಡಲಾಗಿದೆ.

ತದನಂತರನಡೆಯುವಘಟನಾವಳಿಗಳಿಂದತಾನೊಬ್ಬಕ್ರೂರಿ ಎಂಬಂತೆ ಪರಿಸ್ಥಿತಿ ನಿರ್ಮಾಣವಾದುದರ ಬಗೆಗೆ ಮುದುಕಿ ಬೇಸತ್ತು ತನ್ನಲ್ಲಿರುವ ರೊಟ್ಟಿ, ಹಣ ಎಲ್ಲವನ್ನೂ ಎಲ್ಲರಿಗೂ ಹಂಚಲು ಮುಂದಾದರೂ ಜನ ಅವಳನ್ನು ತಿರಸ್ಕರಿಸಿ ಹಿಂದೆ ಸರಿಯುತ್ತಾರೆ. ಕಂಗಾಲಾದ ಆಕೆ ದುಃಖದಿಂದ ಕುಸಿಯುತ್ತಾಳೆ. ಇದಿಷ್ಟು ಕಥೆಯನ್ನು ಬಹಳ ಸರಳ ರಂಗಸಜ್ಜಿಕೆಯಲ್ಲಿ, ನಾಲ್ಕೇ ಪಾತ್ರಗಳು ಅಭಿನಯ-ಸಂಭಾಷಣೆಗಳ ಮೂಲಕವೇ ಪ್ರೇಕ್ಷಕರಿಗೆ ದಾಟಿಸುತ್ತವೆ. ನಾಲ್ವರದ್ದೂ ಪೈಪೋಟಿಯ ನಟನೆ. 'ಮುದುಕಿ'ಯಾಗಿ ವಿಭಾ ನಿಧಿ ಶಿವಂ ಅವರದ್ದು ಸಾಟಿ ಇಲ್ಲದ ಅಭಿನಯ.

ಇನ್ನೊಂದು ಕಥೆ 'ಅಧಿಕಾರಿಗಳು ಮತ್ತು ಕೆಲಸದವ'. ಇದರಲ್ಲಿ ಜಗತ್ತಿನ ಸ್ಪಂದನೆಗಳಿಗೆ ಮೂಕರು- ಕಿವುಡರೂ ಆಗಿರುವ ಸರ್ಕಾರಿ ಅಧಿಕಾರಿಗಳ ನಿರ್ಲಿಪ್ತ, ನಿರ್ಲಜ್ಜತನಗಳನ್ನು ಬಿಚ್ಚಿಡಲಾಗುತ್ತದೆ. ಕೆಲಸಗಾರರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುವ ಅಧಿಕಾರ ವ್ಯವಸ್ಥೆಯ ಕ್ರೂರತೆ ಇಲ್ಲಿ ದರ್ಶನವಾಗುತ್ತದೆ. ಸತತ ದೌರ್ಜನ್ಯದಿಂದ ಕಂಗೆಟ್ಟ ಕೆಲಸಗಾರನೂ ಒಮ್ಮೆ ಎದೆ ಸೆಟೆದು ನಿಲ್ಲುತ್ತಾನೆ ಎಂಬುದನ್ನು ಸೂಚ್ಯವಾಗಿ ತಿಳಿಸುವ ಮೂಲಕ ನಾಟಕ ಮುಕ್ತಾಯವಾಗುತ್ತದೆ. ❖

ಆಗ ರಾಷ್ಟ್ರೀಯತೆಯ ತೊಟ್ಟಿಲು...

10ನೇ ಪುಟದಿಂದ..

ಕೈಗಾರಿಕೆಗಳು ಕಟ್ಟುತ್ತಿದ್ದ ತೆರಿಗೆಯೇ ಆಗ ಆದಾಯದ ಮುಖ್ಯ ಪಾಲಾಗಿತ್ತು. 1921ರ ಹೊತ್ತಿಗೆ ಎರಕಹೊಯ್ದ ಕಬ್ಬಿಣದಿಂದ ತಯಾರಿಸಿದ ಬೀದಿದೀಪಗಳು ಬಳ್ಳಾರಿಯಲ್ಲಿದ್ದವು. ನಗರದ ರಸ್ತೆಗಳ ಅಡಿಯಲ್ಲಿ ನೀರಿನ ಪೈಪ್‌ಲೈನ್ ಹಾಕಲಾಗಿತ್ತು. ಆ ಪೈಪ್‌ಲೈನ್‌ನಿಂದ ನಿವಾಸಿಗಳ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿತ್ತು. 1931ರಲ್ಲಿ ಪೂರ್ಣಪ್ರಮಾಣದ ವಿಮಾನ ನಿಲ್ದಾಣ ಬಳ್ಳಾರಿಯಲ್ಲಿತ್ತು ಹಾಗೂ ಭಾರತದಲ್ಲಿ ಮೊದಲ ನಾಗರಿಕ ವಿಮಾನ ಸಂಚಾರ ಅಲ್ಲಿಂದಲೇ ಶುರುವಾಗಿತ್ತು. ಜೆಆರ್‌ಡಿ ಟಾಟಾ ಸಂಸ್ಥೆ ನಿರ್ವಹಿಸುತ್ತಿದ್ದ ವಿಮಾನವು ಲಾಹೋರ್-ಬಾಂಬೆ-ಬಳ್ಳಾರಿ-ಮದ್ರಾಸ್ ಮಾರ್ಗದಲ್ಲಿ ಹಾರುತ್ತಿತ್ತು. 1943ರವರೆಗೆ ಬೆಂಗಳೂರಿನಲ್ಲಿ ವಿಮಾನ ನಿಲ್ದಾಣ ಇರಲಿಲ್ಲ.

1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಬಳ್ಳಾರಿಯು ತನ್ನ ಬೆಳವಣಿಗೆಯಲ್ಲಿ ಕ್ರಮೇಣ ಕುಸಿತ ಕಾಣಲಾರಂಭಿಸಿತು. ಇವತ್ತು, ಬಳ್ಳಾರಿಯಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ಕೆಲವೊಮ್ಮೆ ನಗರದ ಜನರಿಗೆ ಹದಿನೈದು ದಿನಗಳಾದರೂ ನೀರು ಪೂರೈಕೆಯಾಗುವುದಿಲ್ಲ. ಕಳಪೆ ಗುಣಮಟ್ಟದ ನೀರಿನಿಂದಾಗಿ ಬಳ್ಳಾರಿಯ ಗ್ರಾಮಾಂತರ ಪ್ರದೇಶಗಳಲ್ಲಿ ಇತ್ತೀಚೆಗೆ ಜನ ಅಸುನೀಗಿದ ಉದಾಹರಣೆಗಳೂ ಇವೆ. ಯಾವ ಸ್ಥಳದಲ್ಲಿ ಕಾರ್ಯಾಂಗ ಹಾಗೂ ರಾಜಕೀಯ ಸಂಸ್ಥೆಗಳು ಹುಟ್ಟಿದ್ದವೋ ಅಲ್ಲಿಯೇ ಅವೆರಡರ ಅಧಃಪತನವಾಗಿರುವುದರ ಸಂಕೇತವಿದು. ಹಳೆಯ ವಿಮಾನ ನಿಲ್ದಾಣವು ಆಧುನಿಕ ವಿಮಾನಗಳ ಹಾರಾಟಕ್ಕೆ ಯೋಗ್ಯವಾಗಿಲ್ಲ ಎಂದರು. ಆದರೆ, ಕೇಂದ್ರ ಸರ್ಕಾರವಾಗಲೀ, ರಾಜ್ಯ ಸರ್ಕಾರವಾಗಲೀ ಹೊಸ ವಿಮಾನ ನಿಲ್ದಾಣ ನಿರ್ಮಿಸುವ ಆಲೋಚನೆಯನ್ನೇ ಮಾಡಲಿಲ್ಲ. ಬಳ್ಳಾರಿಯ ನಿರ್ಮಾತೃಗಳು ರೂಪಿಸಿದ್ದ ಕೈಗಾರಿಕಾ ವ್ಯವಸ್ಥೆಯು ನಿಂತಲ್ಲೇ ನಿಂತಿತು. ಆಮೇಲೆ ಬೆಳೆಯಲೇ ಇಲ್ಲ. ಜಾಗತಿಕ ಕೈಗಾರಿಕಾ ಕ್ರಾಂತಿಗೆ ಪ್ರತಿಕ್ರಿಯಿಸಿದ್ದ ಬಳ್ಳಾರಿಯು ಆಧುನಿಕ ಮಾಹಿತಿ ತಂತ್ರಜ್ಞಾನದ ಅಗತ್ಯಗಳಿಗೆ ಒಗ್ಗಿಕೊಳ್ಳಲೇ ಇಲ್ಲ. ಈಗಂತೂ ಅದು ಸಾಧ್ಯವಾಗುವುದು ದೂರದ ಮಾತೇ ಹೌದು.



ಆ ಕಾಲದ 'ದಿ ಇಂಡಿಯನ್ ಸ್ಟೋರ್ಸ್'ನ ಜಾಹೀರಾತು

ಬಳ್ಳಾರಿಯ ಕೋಟೆ (ಸಾಂಕೇತಿಕ ಚಿತ್ರ)

ಕೆಲವು ಹಳೆಯ ನಿವಾಸಿಗಳು ಸ್ವಾತಂತ್ರ್ಯ ಬಂದಮೇಲೆ ಬಳ್ಳಾರಿಯನ್ನು ಮೈಸೂರು ರಾಜ್ಯಕ್ಕೆ ಸೇರಿಸುವುದನ್ನು ಖಂಡಿಸಿದರು. ಆಂಧ್ರಪ್ರದೇಶಕ್ಕೆ ಸೇರಿಸಿದ್ದಿದ್ದರೆ ಬಳ್ಳಾರಿಯನ್ನು ಅದರ ರಾಜಧಾನಿಯನ್ನಾಗಿಸುವ ಪ್ರಸ್ತಾವ ಇತ್ತು. 1970ರಲ್ಲಿ ಬಳ್ಳಾರಿಯು ವ್ಯಾಪಾರ ಸಮುದಾಯದವರು ಹಾಗೂ ಸಂಸ್ಕಾರವಂತರು ನೆಲೆಸಲು ಯೋಗ್ಯವಲ್ಲದ ಸ್ಥಳವಾಗಿ ಮರಳು ಮಾಫಿಯಾದವರು ಪರಿವರ್ತಿಸಿದರು ಎಂದೂ ಇಲ್ಲಿನ ಜನ ಹಿರೀಕರು ತಿಳಿಸುತ್ತಾರೆ. ಇತ್ತೀಚೆಗೆ ಅಕ್ರಮವಾಗಿ ಗಣಿಗಾರಿಕೆ ನಡೆಸುತ್ತಿರುವವರು ನಗರದಲ್ಲಿ ಸದಾ ದೂಳು ತುಂಬಿರುವಂತೆ ಮಾಡಿದ್ದಾರೆ. ಪ್ರಕೃತಿ ಸಂಪತ್ತನ್ನು ನಾಶಪಡಿಸಿ, ಮೂಲಸೌಕರ್ಯವನ್ನು ಹದಗೆಡಿಸಿದ್ದಾರೆ.

ವಸಾಹತು ಆಡಳಿತಗಾರರಿಂದ ದೇಶಕ್ಕೆ ಸ್ವಾತಂತ್ರ್ಯವೇನೋ ಸಿಕ್ಕಿತು. ಆದರೆ, ಅದೇ ಬಳ್ಳಾರಿಯ ಜನರಿಗೆ ಶಾಪವಾಗಿ ಪರಿಣಮಿಸಿತೆ? ❖

ಪ್ರತಿಕ್ರಿಯೆಗಳು

ರವಿ ಮಡೋಡಿ ಅವರು ಯಕ್ಷಗುರು ಐನಬೈಲ್ ಅವರ ಸಮಗ್ರ ಪರಿಚಯ ಮಾಡಿಕೊಟ್ಟಿದ್ದು ಸಾಂದರ್ಭಿಕ. ಯಕ್ಷಗುರುಗಳು ಇಷ್ಟು ಸುದೀರ್ಘ ಕಾಲ ಕಲಾಕ್ಷೇತ್ರಕ್ಕೆ ನೀಡಿರುವ ಕಾಣಿಕೆಯನ್ನು ತಲಸ್ಪರ್ಶಿಯಾಗಿ ಲೇಖನವು ಕಾಣಿಸಿದೆ.

ಶ್ರೀಹರ್ಷ ಹೆಗಡೆ, ಮೈಸೂರು

ಆಗಸ್ಟ್ 6ರ 'ಭಾನುವಾರದ ಪುರವಣಿ'ಯಲ್ಲಿ ಪ್ರಕಟವಾದ ಪಾರಿವಾಳಗಳು ನಗರದಲ್ಲಿ ಏನೆಲ್ಲ ಸಮಸ್ಯೆಗಳನ್ನು ಒಡ್ಡುತ್ತಿವೆ ಎನ್ನುವ ಅಗ್ರ ಲೇಖನ (ಎಚ್.ಎಸ್. ಸುಧೀರ) ಸಕಾಲಿಕ. ವೈಯಕ್ತಿಕವಾಗಿ ನಾನೂ ಸಮಸ್ಯೆ ಅನುಭವಿಸಿದ್ದೇನೆ. ಮೊದಲು ಬಾಲ್ಕನಿಯ ಬಳಿ ಅವು ಬಂದಾಗ ನಾನು ಬೆಳಿಗ್ಗೆ ಕಾಳುಗಳನ್ನು ಹಾಕುವ ಅಭ್ಯಾಸ ಮಾಡಿದೆ. ಆಮೇಲೆ ಅವು ಅಲ್ಲಿಯೇ ಸಂಸಾರ ಹೂಡಿ ಗಲೀಜು ಮಾಡಿದವು. ಅವು ಮರಳಿ ಬಾರದಂತೆ ಮಾಡಲು ಇಡೀ ಬಾಲ್ಕನಿಗೆ ಹಾಕಿದ್ದ ಗ್ರಿಲ್‌ನಲ್ಲೇ ಮಾರ್ಪಾಟು ಮಾಡಬೇಕಾಗಿ ಬಂತು. ಒಂದು ಮನೆಯ ಕಥೆಯೇ ಹೀಗಾದರೆ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಇವುಗಳ ಕಾಟ ಹೇಗಿರಬೇಡ?

ಸಂಗಮೇಶ ಎಸ್., ಬೆಂಗಳೂರು

ಜುಲೈ 16ರ ಭಾನುವಾರದ ಪುರವಣಿಯಲ್ಲಿ ಪ್ರಕಟವಾದ 'ತಮಟೆಯ ಸದ್ದು ಬೆಳಕಿನ ಸುದ್ದಿ' (ಗುರು ಪಿ.ಎಸ್.) ಲೇಖನ ಓದುವಾಗ ನಾವೂ ಅವರ ತಂಡದ ತಮಟೆ ವಾದ್ಯವನ್ನು ಕೇಳಬೇಕು ಎನಿಸಿತು. ಬಾಲ್ಯ, ಬದುಕು, ವಿದ್ಯಾಭ್ಯಾಸದ ಹಂತದಿಂದಲೂ ಅತ್ಯಂತ ಕಷ್ಟದಿಂದ ಬಂದ ಕೆ. ನಾಗರಾಜ ಅವರು ಆಸಕ್ತರಿಗೆ ತಮಟೆ ಬಾರಿಸುವುದನ್ನು ಕಲಿಸುವುದು ಮಾತ್ರವಲ್ಲ ನೂರಾರು ಜನರ ಜೀವನಕ್ಕೆ ದಾರಿ ಮಾಡಿಕೊಡುತ್ತಿದ್ದಾರೆ. ಅವರ ಕಾಯಕ ಹೀಗೆಯೇ ಮುಂದುವರಿಯಲಿ.

ಕೆ.ಎಂ. ರುಕ್ಮಿಣಿ, ಬೆಂಗಳೂರು

'ಭಾನುವಾರದ ಪುರವಣಿ'ಯ ಪ್ರವಾಸಿ ಲೇಖನಗಳು ಚಿತ್ರವತ್ತಾಗಿ ಮೂಡಿಬರುತ್ತಿವೆ. ಹೆಚ್ಚು ಜನರು ವೀಕ್ಷಿಸದ ಸ್ಥಳಗಳ ಕುರಿತ ಬರವಣಿಗೆಗಳೇ ವ್ಯಾಪಕವಾದರೆ ಇನ್ನೂ ಉತ್ತಮವಾಗಿರುತ್ತದೆ.

ಚನ್ನಕೇಶವ, ರಾಯಚೂರು

ಜುಲೈ 30ರ ಭಾನುವಾರದ ಪುರವಣಿಯಲ್ಲಿ ಪ್ರಕಟವಾದ 'ಜನಾನುರಾಗಿ ಗಣಿತ ಶಿಕ್ಷಕ ಸಿ.ಕೆ.ಸರ್' ಲೇಖನ ವೃತ್ತಿಯನ್ನು ಪ್ರೀತಿಸುವ ಅಧ್ಯಾಪಕರೊಬ್ಬರ ನಿಜವಾದ ಯಶಸ್ಸಿನ ಕಥೆಯನ್ನು ಹೇಳಿದೆ. ಇಂತಹ ಶಿಕ್ಷಕರ ಸಂಖ್ಯೆ ಮತ್ತಷ್ಟು ಹೆಚ್ಚಾಗಬೇಕು.

ವಿಶಾಲಾಕ್ಷಿ, ಗದಗ

ಕಪ್ಪತ್ತಗುಡ್ಡದಲ್ಲಿ ಪ್ರಾಣಿಗಳ ಸಂಖ್ಯೆ ಹೆಚ್ಚಾಗಿ, ಹೊಸ ಪ್ರಭೇದದ ಪ್ರಾಣಿಗಳೂ ಕಾಣಿಸಿಕೊಳ್ಳುತ್ತಿರುವುದು ಪರಿಸರದ ದೃಷ್ಟಿಯಿಂದ ಸಂತೋಷಪಡಬೇಕಾದ ವಿಚಾರ. ಅಲ್ಲಿನ ಕಾಳ್ಗಿಚ್ಚಿನ ಸುದ್ದಿಯನ್ನಷ್ಟೇ ತಿಳಿದಿದ್ದ ನನಗೆ ಸತೀಶ್ ಬೆಳ್ಳಕ್ಕಿ ಅವರ ಲೇಖನ (ಜೂನ್ 30ರ ಸಂಚಿಕೆ) ಹೊಸ ಮಾಹಿತಿಯನ್ನೇ ನೀಡಿತು.

ದಿವ್ಯಾ ಬಡಿಗೇರ್, ಬೆಳಗಾವಿ

ಮರ್ಯಾದೆಗೇಡು ಹತ್ಯೆಗಳು ಈ ಕಾಲದಲ್ಲಿಯೂ ಆಗುತ್ತಿರುವುದು ನಾಚಿಕೆಗೇಡು. ಅದರ ಹಿಂದೆ ಇರುವ ಜಾತಿ ಸೂಕ್ಷ್ಮಗಳು ಬಿಡಿಸಲಾರದಷ್ಟು ಗೋಜಲಾಗಿವೆ ಎನ್ನುವುದನ್ನು ಮಂಜುಶ್ರೀ ಕಡಕೋಳ ಅವರ ಬರಹವು (ಜೂನ್ 23ರ ಸಂಚಿಕೆ) ಅನಾವರಣಗೊಳಿಸಿದೆ. ಇನ್ನು ಮುಂದಾದರೂ ಇಂತಹ ಪ್ರಕರಣಗಳು ನಡೆಯದಂತೆ ಸ್ಥಳೀಯ ಜನಸಮೂಹವೇ ಎಚ್ಚರದಿಂದ ವರ್ತಿಸುವಂತಾಗಲಿ.

ಚೇತನಾ ಎಂ., ಬಾಗಲಕೋಟೆ

ಜುಲೈ 30ರ 'ಭಾನುವಾರದ ಪುರವಣಿ'ಯಲ್ಲಿ ಕ್ಯಾಪ್ಟನ್ ಗೋಪಿನಾಥ್ ಅವರು 'ಕೃಷ್ಣ ಸೃಜಿಸಿದ ಜಗತ್ತ'ನ್ನು ಚಿತ್ರವತ್ತಾಗಿ ಕಟ್ಟಿಕೊಟ್ಟಿದ್ದಾರೆ. ಸಂಗೀತ ಕಛೇರಿಯೊಂದರ ರಸಾಸ್ವಾದವನ್ನಷ್ಟೆ ಅಲ್ಲದೆ, ಆ ಸಂಗೀತಗಾರ ಮಾಡಿರುವ ಹಾಗೂ ಮಾಡುತ್ತಿರುವ ಪ್ರಯೋಗಗಳನ್ನು, ಸಂಶೋಧನೆಯನ್ನು ಸೂಕ್ಷ್ಮವಾಗಿ ಅವಲೋಕಿಸಿರುವ ಬರಹವಿದು. ಎಂದಿನ ಸಂಗೀತ ವಿಮರ್ಶೆ ಅಥವಾ ವಿಶ್ಲೇಷಣೆಗೆ ಹೊರತಾದ ಈ ಬರಹದ ಓದು ಮುದನೀಡಿತು.

ಗೌರೀತನಯ, ದೊಡ್ಡಬಳ್ಳಾಪುರ

ಮುನ್ನೋಟ 13-08-2023 ರಿಂದ -19-08-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ವಿದೇಶದ ವ್ಯಾಮೋಹ ನಿಮ್ಮನ್ನು ಹೆಚ್ಚಾಗಿ ಕಾಡುತ್ತದೆ. ಅಲ್ಲಿಗೆ ಓದಲು ಹೋಗಬೇಕೆನ್ನುವವರಿಗೆ ಅನುಕೂಲತೆಗಳು ಒದಗಿಬರುತ್ತವೆ. ದಾರಿ ತಪ್ಪಿದ್ದ ವ್ಯವಹಾರಗಳು ಈಗ ಸರಿದಾರಿಗೆ ಬರುತ್ತವೆ. ಸಹೋದರಿಯರಿಂದ ಸಾಕಷ್ಟು ಸಹಾಯ ದೊರೆಯುತ್ತವೆ. ಕೃಷಿಕರಿಗೆ ಉತ್ತಮ ಬೆಳೆ ಬರುತ್ತದೆ. ನರ ದೌರ್ಬಲ್ಯ ಇರುವವರು ಎಚ್ಚರಿಕೆ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ನಿಮ್ಮ ಚಟುವಟಿಕೆಗಳಿಗೆ ಪೂರಕವಾದ ಸಹಕಾರ ಸಂಗಾತಿಯಿಂದ ದೊರೆಯುತ್ತದೆ. ಸರ್ಕಾರದಿಂದ ಬರಬೇಕಿದ್ದ ಯಾವುದೇ ರೀತಿಯ ಬಾಕಿ ಹಣ ಈಗ ಬರುತ್ತದೆ. ಸರ್ಕಾರಿ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಮಹಿಳಾ ಅಧಿಕಾರಿಗಳಿಂದ ಸಾಕಷ್ಟು ಅನುಕೂಲವಾಗುತ್ತವೆ. ಆಸ್ತಿ ವಿಚಾರದಲ್ಲಿ ಹೊಸ ಸಮಸ್ಯೆಗಳು ಬರಬಹುದು. ಹೈನುಗಾರಿಕೆ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಅತಿಯಾದ ಚುರುಕುತನವನ್ನು ನಿಮ್ಮಲ್ಲಿ ಕಾಣಬಹುದು. ಒಡಹುಟ್ಟಿದವರಿಂದ ನಿಮಗೆ ಸಹಾಯ ನೀಡುವ ಬಗ್ಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಆಸ್ತಿ ಕೊಳ್ಳುವ ವಿಚಾರದಲ್ಲಿ ಸಾಕಷ್ಟು ಗಲಿಬಿಲಿಗಳಿರುತ್ತವೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ ಇರುತ್ತದೆ. ಆಪ್ತರೊಬ್ಬರಿಗೆ ಆರೋಗ್ಯ ವ್ಯತ್ಯಾಸವಾಗುವ ಸಂದರ್ಭ ಬರಬಹುದು. ಸಂಗಾತಿಯು ಸಾಕಷ್ಟು ಸಹಕಾರವನ್ನು ನೀಡುತ್ತಾರೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಬಹಳ ಆತ್ಮಾಭಿಮಾನ ನಿಮ್ಮಲ್ಲಿ ಇರುತ್ತದೆ. ನಿಮ್ಮ ವ್ಯವಹಾರಗಳಲ್ಲಿ ಸಂಬಂಧಿಕರು ಮೂಗು ತೂರಿಸಿ ಗೊಂದಲಗಳನ್ನು ಉಂಟು ಮಾಡಬಹುದು , ಹಾಗಾಗಿ ವ್ಯವಹಾರಗಳಿಂದ ಸಂಬಂಧಿಕರನ್ನು ದೂರವಿಡಿರಿ. ಆಸ್ತಿಗೆ ಸಂಬಂಧಪಟ್ಟ ವಿಚಾರಗಳಲ್ಲಿ ಸ್ವಲ್ಪ ನಿರಾಸೆ ಮೂಡಬಹುದು. ವಿದ್ಯಾರ್ಥಿಗಳು ಹಾಕುವ ಶ್ರಮಕ್ಕೆ ತಕ್ಕಂತೆ ಫಲ ಇರುತ್ತದೆ. ವೃತ್ತಿಯಲ್ಲಿ ಹಿತಶತ್ರುಗಳು ಬರಬಹುದು, ಅವರ ಬಗ್ಗೆ ಎಚ್ಚರದಿಂದಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಮಾತಿನಲ್ಲಿ ಕಠಿಣತೆ ಇರುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಮುನ್ನಡೆ ಇರುತ್ತದೆ. ಹೊಟ್ಟೆಯಲ್ಲಿ ಆಹಾರ ವ್ಯತ್ಯಾಸದಿಂದ ಅನಾರೋಗ್ಯ ಕಾಣಿಸಬಹುದು. ನಿಮ್ಮನ್ನು ದ್ವೇಷಿಸುತ್ತಿದ್ದ ಹಿರಿಯರು ಈಗ ನಿಮ್ಮನ್ನು ಕ್ಷಮಿಸುವರು. ವಿದೇಶದಲ್ಲಿರುವ ಅಧ್ಯಾಪಕರಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುತ್ತವೆ. ಹೈನುಗಾರಿಕೆ ಮಾಡುವವರಿಗೆ ಉತ್ತಮ ಆದಾಯವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಆತ್ಮಸ್ಥೈರ್ಯ ಸ್ವಲ್ಪ ಕಡಿಮೆ ಇರುತ್ತದೆ. ಬಂಧುಗಳಿಂದ ಸಿಗುತ್ತಿದ್ದ ಸಹಕಾರ ಕಡಿಮೆಯಾಗುವ ಸಾಧ್ಯತೆ ಇದೆ. ಹಿರಿಯರಿಂದ ತಕ್ಕಮಟ್ಟಿನ ಸಹಾಯಗಳು ದೊರೆಯುತ್ತವೆ. ವಿದೇಶದಲ್ಲಿರುವ ತಮ್ಮ ಮಕ್ಕಳನ್ನು ನೋಡಲು ಹೋಗಿ ಬರಬಹುದು. ವೃತ್ತಿಯಲ್ಲಿ ಸ್ಥಾನಮಾನ ಸಿಗುವುದು ನಿಧಾನವಾಗುತ್ತದೆ. ಆದರೆ ಕೆಲವು ಮಹಿಳಾಧಿಕಾರಿಗಳ ಒಲವಿನಿಂದ ನಿಮ್ಮ ಸ್ಥಾನ ಹೆಚ್ಚಾಗುವ ಸಾಧ್ಯತೆ ಇದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಸ್ವಲ್ಪ ಆಲಸಿತನ ನಿಮ್ಮಲ್ಲಿ ತುಂಬಿರುತ್ತದೆ. ಸರ್ಕಾರಿ ಹುದ್ದೆಯಲ್ಲಿರುವವರಿಗೆ ಹೆಚ್ಚಿನ ಅಧಿಕಾರ ದೊರೆಯುವ ಸಾಧ್ಯತೆ ಇದೆ. ಧರ್ಮದ ಬಗ್ಗೆ ಆಸಕ್ತಿ ಹೆಚ್ಚಾಗುತ್ತದೆ. ಕೃಷಿ ಭೂಮಿಯನ್ನು ಹೊಂದುವ ಯೋಗವಿದೆ. ಸಂಗಾತಿಯ ದುಬಾರಿ ಜೀವನ ಸ್ವಲ್ಪ ಬೇಸರ ಮೂಡಿಸಬಹುದು. ಹೆಂಗಸರ ಅಲಂಕಾರಿಕ ವಸ್ತುಗಳನ್ನು ತಯಾರಿಸಿ ಮಾರುವವರಿಗೆ ಹೆಚ್ಚಿನ ಲಾಭ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ನಿಮ್ಮ ಒಡಹುಟ್ಟಿದವರಿಂದ ನಿರೀಕ್ಷಿತ ಸಹಾಯಗಳು ದೊರೆಯದಿರಬಹುದು. ಕೆಲವು ಕೈ ಸಾಲಗಳನ್ನು ತೀರಿಸಿಕೊಳ್ಳುವ ಅವಕಾಶ ದೊರೆಯುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಬಂಡವಾಳದ ಕೊರತೆ ಕಾಡಬಹುದು. ನಿಮ್ಮ ಸಂಗಾತಿಗೆ ಸರ್ಕಾರದ ಕಡೆಯಿಂದ ಬರಬೇಕಿದ್ದ ಹಣ ಬರುವ ಸಾಧ್ಯತೆ ಇದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ನೆರೆಹೊರೆಯವರೊಡನೆ ಉತ್ತಮ ಗೌರವ ಸಂಪಾದನೆ ಮಾಡಿಕೊಳ್ಳುವಿರಿ. ಶತ್ರುಗಳನ್ನು ಹೇಗೆ ಮಟ್ಟ ಹಾಕಬೇಕೆನ್ನುವ ವಿಚಾರ ಹೊಳೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಯಶಸ್ಸು ಇರುತ್ತದೆ. ವಿದೇಶಿ ಭಾಷಾ ಕಲಿಕೆ ಮಾಡುವವರಿಗೆ ಈಗ ಸೂಕ್ತ ಅವಕಾಶಗಳು ದೊರೆಯುತ್ತವೆ. ಪ್ರೀತಿ ಪ್ರೇಮದ ವಿಚಾರದಲ್ಲಿ ಮುಂದುವರೆಯುವ ಸಂದರ್ಭವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಏನೋ ಒಂದು ರೀತಿಯ ಆಲಸ್ಯ ನಿಮ್ಮಲ್ಲಿ ಇರುತ್ತದೆ. ಸಾರ್ವಜನಿಕವಾಗಿ ಮಾತನಾಡುವಾಗ ಸ್ವಲ್ಪ ನಿಧಾನ ಗತಿಯಿರಲಿ. ಧರ್ಮಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ಮೂಡುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ. ಇಲಾಖೆಯ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಶೀತ ಬಾಧೆ ಇರುವವರು ಎಚ್ಚರಿಕೆ ವಹಿಸಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಸಾಂಪ್ರದಾಯಿಕ ಕಲೆಗಳನ್ನು ಬೋಧಿಸುವವರಿಗೆ ಬೇಡಿಕೆ ಹೆಚ್ಚುತ್ತದೆ. ಸಾಂಪ್ರದಾಯಿಕ ತಳಿಗಳ ಬೀಜಗಳನ್ನು ಉತ್ಪಾದಿಸಿ ಮಾರಾಟ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಯುವಕರ ನಡವಳಿಕೆ ಗುರು ಹಿರಿಯರು ಟೀಕಿಸುವಂತೆ ಆಗಬಹುದು. ಕಣ್ಣಿನ ತೊಂದರೆ ಅಥವಾ ಉಸಿರಾಟದ ತೊಂದರೆ ಇರುವವರು ಹೆಚ್ಚು ಎಚ್ಚರಿಕೆ ವಹಿಸಿ. ಅದಿರು ವ್ಯಾಪಾರ ಮಾಡುವವರಿಗೆ ವ್ಯವಹಾರ ಈಗ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ಬಂಧುಗಳು ನಿಮ್ಮ ಕಷ್ಟಕ್ಕೆ ಸಹಾಯ ಮಾಡುವರು. ಕೃಷಿ ಜಮೀನನ್ನು ಕೊಳ್ಳಬೇಕೆನ್ನುತ್ತಿದ್ದವರಿಗೆ ಅವಕಾಶ ಒದಗಿ ಬರುತ್ತದೆ. ನಿಮ್ಮ ಮಕ್ಕಳಿಗೆ ಆರ್ಥಿಕ ಸಹಾಯ ಮಾಡುವಿರಿ. ರಕ್ತ ಪರಿಚಲನೆಯಲ್ಲಿ ತೊಂದರೆ ಇರುವವರು ಹೆಚ್ಚಿನ ಎಚ್ಚರಿಕೆ ವಹಿಸಿರಿ. ನಿಮ್ಮ ಕೆಲವು ಸಾಲಗಳನ್ನು ತೀರಿಸಲು ನಿಮ್ಮ ಸಂಗಾತಿ ಒಪ್ಪುವರು. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ.

ಪದಬಂಧ 2802



ಮೇಲಿನಿಂದ ಕೆಳಕ್ಕೆ

1.ದೀಪ ಹಚ್ಚುವ ಮಾಸ 3
2.ಸೂರ್ಯನ ಪ್ರಥಮ ಕಿರಣ ಕಾಣುವ ಪೂರ್ವದೇಶ 3
3.ಬೆದೆಗೆ ಬಂದ ಹಸುಗರು 3
4.ಮುಗಿಲಿಗಿಂತ ಮೇಲೆ 3
7.ಮಾನವನಾಗಿ ಹುಟ್ಟಿದವ 3
9.ದಕ್ಷಿಣ ದೇಶ ಹಿಂದೊಮ್ಮೆ ಪಡೆದಿದ್ದ ಆಂಗ್ಲರೂಪ 3
10.ನಾರದ ವೀಣಾನಾಮ 3
11.ಇದು ಅಸಲಿಯಲ್ಲ 3
12.ಬ್ರಹ್ಮನ ಪುತ್ರರಲ್ಲಿ ಮೊದಲಿಗ 3
13.ರೋಗ ತಡೆಗಟ್ಟುವ ಮದ್ದು 3
16.ಯೌವನದಲ್ಲಿರುವ ಯೋಧ 3
18.ಮಾನ ಮರ್ಯಾದೆಯ ಬೆಲೆ ಕಟ್ಟಲು ಬಳಸುತ್ತಿದ್ದ ಕನಿಷ್ಠ ಕಾಸು 3
19.ಇದು ಸ್ವಲ್ಪ ಹರಿದರೂ ಸಾಕು ಬೆಳಕು 3
20.ಗುಮ್ಮನಂತೆ ಬರುವ ಅನುಮಾನ 3
21.ಸಂಗೀತದ ಸುದೀರ್ಘ ಆರಂಭ 3
22.ಸುಸಂಸ್ಕೃತರು ಕುಡಿಯುವ ನೀರು 3

ಎಡದಿಂದ ಬಲಕ್ಕೆ

1.ಬಯಕೆಯುಳ್ಳ ಅರಸ 4
3.ನಮ್ಮಂತಹ ಸಾಮಾನ್ಯರು ಆಳುತ್ತಿರುವವರನ್ನು ಹೀಗೆ ಬೋಧಿಸುತ್ತಾರೆ 4
5.ಕೈ ಹಿಡಿವ ಮದುವೆ ಕಾರ್ಯ ಗ್ರಹಣದಲ್ಲಿ ಅಂತ್ಯ 5
6.ಕಾವ್ಯ ಬ್ರಹ್ಮನ ಅಂತರಂಗ 4
8.ಬೆಣ್ಣೆ ಬಾರದಿದ್ದಾಗ ಬೇಕಾಗುವ ಸಾಧನ 4
10.ಇವರು ದೊಡ್ಡ ಮಂದಿ 4
12.ಹಂಚಿನ ಕಡ್ಡಿಯಂತಿರುವ ಆಸಾಮಿ 4
14.ಸಂಸ್ಕೃತದ ಬಾಳೆ ಬೆಳೆದ ಕಾಡು 5
15.ಬೊಗಸೆಯಲ್ಲಿ ಬಿಡಬಹುದಾದ ಎಳ್ಳು ನೀರು 4
17.ಸ್ಥಾನದಿಂದ ಜರುಗಿಸಿದ್ದು 4
19.ಮೋಹಕ ತುಟಿಯ ಅಂಚಿನಲ್ಲಿ ಬೀರುವ ಮಂದಹಾಸ 4
21.ತಮಿಳರಿಗೆ ಆಷಾಢ ತಿಂಗಳು 4
23.ರತ್ನ ವೈಢೂರ್ಯದ ನಡುವೆ ಹೊಳೆಯುವ ಕಲ್ಲಿನ ಹಾರ 5
24.ಸಂಸಾರದ ಜವಾಬ್ದಾರಿ ಹೊತ್ತ ಹೆಣ್ಣನ್ನು ಹೀಗನ್ನಬಹುದೆ 4
25.ಅನ್ಯರ ಸಮಯಕ್ಕೆ ಮಠವೊಂದನ್ನು ಜ್ಞಾಪಿಸಿಕೊಳ್ಳಿ 4

ಪದಬಂಧ ಉತ್ತರ -2801

ಮೇಲಿಂದ ಕೆಳಕ್ಕೆ

1.ಬಸದಿ 2.ತುಮುಲ 3.ಕಾಡುಮೇಡು 4.ಕಡಿವಾಣ 7.ಕರ್ತಾರ 9.ಸಾಕುಪ್ರಾಣಿ 10.ಪದುಮನಾಭ 11.ತೀರಿಸು 13.ಗಜಗೀ 14.ತಾಯಿನುಡಿ 16.ಸಂತಾಪ 17.ತಪೋವನ 18.ರಸಕವಿ 19.ಗಳಿಕೆ 20.ರಬ್ಬರು

ಎಡದಿಂದ ಬಲಕ್ಕೆ

1.ಬರೀಮಾತು 3.ಕಾಯಕ 5.ಮುದನೀಡು 6.ಡಿಬಾಕ 8.ದಿನಸಾಲ 10.ಪಡುವಣತೀರ 12.ಪ್ರಾಣಬಿಂದು 13.ಗಣಿ 14.ಕಾಸು 15.ನಾದಮಯಿ 16.ಸಂಗೀತಸೌರಭ 19.ಗಡಿಯಾರ 21.ಪಲ್ಲವ 22.ಕರಾವಳಿ 23.ನಧಾವಿ 24.ಕೆರೆನೀರು

ಕಾರ್ಮಿಕರ ಹಿರಿಯಕ್ಕ 'ಮೋಟಾಬೆನ್'

ಸುಮಂಗಲಾ

ಭಾರತದ ಮ್ಯಾಂಚೆಸ್ಟರ್ ಎಂದೇ ಹೆಸರಾದ ಅಹಮದಾಬಾದಿನಲ್ಲಿ 1900ರ ಆರಂಭದಲ್ಲಿ ಮೂವತ್ತಕ್ಕೂ ಹೆಚ್ಚು ಬಟ್ಟೆ ಮಿಲ್ಲುಗಳು ಇದ್ದವು. ಮೊದಲನೇ ಮಹಾಯುದ್ಧ ಆರಂಭವಾಗುತ್ತಿದ್ದಂತೆ ಇಲ್ಲಿ ತಯಾರಾಗುವ ಹತ್ತಿ ಬಟ್ಟೆಗಳಿಗೆ ಬೇಡಿಕೆಯೂ ಹೆಚ್ಚಿತು. 1915ರ ವೇಳೆಗೆ ಬಟ್ಟೆಮಿಲ್‌ಗಳ ಸಂಖ್ಯೆ 49ಕ್ಕೆ ಏರಿತು. ಬಟ್ಟೆಮಿಲ್‌ಗಳ ಕಾರ್ಯಾಚರಣೆಯೂ ಅಧಿಕಗೊಂಡು, ಲಕ್ಷಾಂತರ ಕಾರ್ಮಿಕರಿಗೆ ಜೀವನೋಪಾಯ ಒದಗಿಸಿತು. ಆದರೆ ಕಾರ್ಮಿಕರಿಗೆ ದುಡಿಮೆಗೆ ತಕ್ಕ ಸಂಬಳವಿರಲಿಲ್ಲ, ಕೆಲಸದ ಅವಧಿ ಹೆಚ್ಚಿತ್ತು. ಕೆಲಸಗಾರರು ಹೊಟ್ಟೆಪಾಡಿಗಾಗಿ ಮಾಲೀಕರ ಶೋಷಣೆಯನ್ನು ಹಲ್ಲುಕಚ್ಚಿ ಸಹಿಸುತ್ತಿದ್ದ ಕಾಲವದು.

1917ರಲ್ಲಿ ಅಹಮದಾಬಾದಿಗೆ ಪ್ಲೇಗ್ ಕಾಲಿಟ್ಟಿತ್ತು. ಮಿಲ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಹಲವಾರು ಕಾರ್ಮಿಕರು ಮರಳಿ ಹಳ್ಳಿಗಳಿಗೆ ಹೋದರು. ಕೆಲಸಕ್ಕೆ ಜನರು ಕಡಿಮೆ ಬೀಳುತ್ತಿದ್ದರು. ಹೀಗಾಗಿ ಹಳ್ಳಿಗಳಿಂದ ಬಂದವರಿಗೆ ಬೋನಸ್ ನೀಡಿ, ಉಳಿಸಿಕೊಂಡರು. ಆದರೆ ಅಹಮದಾಬಾದಿನವರೇ ಆಗಿದ್ದ ಕಾರ್ಮಿಕರಿಗೆ ಬೋನಸ್ ನೀಡಲಿಲ್ಲ. ತಮಗೂ ವೇತನ ಹೆಚ್ಚಿಸುವಂತೆ ಮಿಲ್ ಮಾಲೀಕರನ್ನು ಕೇಳಿಕೊಂಡ ಈ ಕಾರ್ಮಿಕರು 48 ಗಂಟೆ ಗಡುವು ಕೊಟ್ಟರು. ನಂತರ ಡಿಸೆಂಬರ್ 4ರಿಂದ ಹರತಾಳ ಆರಂಭಿಸಿ, 21 ದಿನ ನಡೆಸಿದರು. ಆಗ ಕಾರ್ಮಿಕರ ಬೆನ್ನಿಗೆ ಆಸರೆಯಾಗಿ ಇದ್ದವರು ಆ ಕಾಲದಲ್ಲೇ 'ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್'ನಲ್ಲಿ ಕಾರ್ಮಿಕರು ಮತ್ತು ಸಮಾಜ ಕಲ್ಯಾಣದ ಬಗ್ಗೆ ಕಲಿತುಬಂದಿದ್ದ ಒಬ್ಬ ಮಹಿಳೆ. ವಿಚಿತ್ರವೆಂದರೆ ಇದೇ ಮಹಿಳೆಯ ಪ್ರೀತಿಯ ತಮ್ಮನೂ ಮಿಲ್ ಮಾಲೀಕ ಮಾತ್ರವಲ್ಲ, ಮಿಲ್ ಮಾಲೀಕರ ಸಂಘದ ಅಧ್ಯಕ್ಷರೂ ಆಗಿದ್ದರು. ಮಿಲ್ ಮಾಲೀಕರು ಹಾಗೂ ಕಾರ್ಮಿಕರ ನಡುವಣ ಸಂಘರ್ಷವನ್ನು ತಿಳಿಗೊಳಿಸಲು ಗಾಂಧೀಜಿಯನ್ನು ಕೇಳಿಕೊಂಡಿದ್ದರು. ಕೊನೆಗೂ ಸಂಧಾನವಾಗಿ ಕಾರ್ಮಿಕರು ಕೆಲಸಕ್ಕೆ ಹೋಗಲು ಆರಂಭಿಸಿದ್ದರು. ಅಂದಹಾಗೆ, ಆ ಮಹಿಳೆ ಅಹಮದಾಬಾದಿನ ಪ್ರಭಾವೀ ಶ್ರೀಮಂತ ಕುಟುಂಬದವರಾಗಿದ್ದರು... ಮಿಲ್ ಕಾರ್ಮಿಕರೆಲ್ಲರಿಗೆ ಆಕೆ ಅಚ್ಚುಮೆಚ್ಚಿನ 'ಮೋಟಾಬೆನ್'; ಪೂರ್ಣ ಹೆಸರು ಅನಸೂಯಾ ಸಾರಾಭಾಯಿ. ಆಗ ಮಿಲ್ ಮಾಲೀಕರ ಸಂಘದ ಅಧ್ಯಕ್ಷರಾಗಿದ್ದವರು ಅವರ ತಮ್ಮ ಅಂಬಾಬಾಯಿ ಸಾರಾಭಾಯಿ (ವಿಕ್ರಮ್ ಸಾರಾಭಾಯಿಯ ತಂದೆ).

> ಸ್ವಾತಂತ್ರ್ಯ ಸಂಗ್ರಾಮ, ಕ್ರಾಂತಿಕಾರಿ ಮಹಿಳೆಯರು ಇತ್ಯಾದಿ ವಿಚಾರಗಳನ್ನು ಮಾತನಾಡುವಾಗ ತೆರೆಮರೆಯಲ್ಲಿದ್ದುಕೊಂಡೇ, ಸಾಮಾಜಿಕ ಹಾಗೂ ಆಧುನಿಕ ಕಾರ್ಮಿಕ ಆಂದೋಲನಕ್ಕೆ ಮುನ್ನುಡಿ ಹಾಡಿದ ಅನಸೂಯಾ ಸಾರಾಭಾಯಿ ತುಂಬಾ ಮುಖ್ಯವೆನಿಸುತ್ತಾರೆ.

ಮೋಟಾಬೆನ್ ನೆನಪುಗಳ ಮೆರವಣಿಗೆ ಮಾಡುವ ಶಾಂತಿಸದನದಲ್ಲಿನ ಗ್ಯಾಲರಿ

ಇದು ಅಹಮದಾಬಾದಿನಲ್ಲಿ ಟ್ರೇಡ್ ಯೂನಿಯನ್ ಆಂದೋಲನವು ರೂಪುತಳೆಯಲು ಕಾರಣವಾಯಿತು. ನಂತರ 1920ರಲ್ಲಿ ಮಾಲೀಕರು ಹಾಗೂ ಕಾರ್ಮಿಕರ ನಡುವೆ ಸಂಧಾನ, ಮಾತುಕತೆಗಾಗಿ ರೂಪುಗೊಂಡ ವೇದಿಕೆಯೇ 'ಮಜ್ದೂರ್ ಮಹಾಜನ್ ಸಂಘ' ಅಥವಾ 'ಟೆಕ್ಸ್‌ಟೈಲ್ ಲೇಬರ್ ಅಸೋಸಿಯೇಶನ್'(ಟಿಎಲ್‌ಎ).

ಅನಸೂಯಾ ಹುಟ್ಟಿದ್ದು 1985ರಲ್ಲಿ ಶ್ರೀಮಂತ ಕುಟುಂಬದಲ್ಲಿ. ಮಿಲ್ ಮಾಲೀಕರಾಗಿದ್ದ ತಂದೆ ಸಾರಾಭಾಯಿ ಶೇತ್ 31ರ ಹರೆಯದಲ್ಲಿಯೇ ತೀರಿಕೊಂಡಾಗ ಅನುಸೂಯಾ ಅವರಿಗೆ 10 ವರ್ಷ, ತಮ್ಮ ಅಂಬಾಲಾಲನಿಗೆ 5 ವರ್ಷ, ಜೊತೆಗೆ ಪುಟ್ಟ ತಂಗಿ. ಕೆಲವೇ ತಿಂಗಳಲ್ಲಿ ತಾಯಿಯೂ ಅಗಲಿದರು. ಆಗ ಈ ಮೂರೂ ಮಕ್ಕಳನ್ನು ಸಲಹಿದ್ದು ಚಿಕ್ಕಪ್ಪ. ಅನಸೂಯಾರಿಗೆ ತುಂಬ ಓದಬೇಕೆಂಬ ಮನಸ್ಸಿತ್ತು. ಆದರೆ ಆಗಿನ ವಾಡಿಕೆಯಂತೆ 13ನೇ ವರ್ಷಕ್ಕೆ ಮದುವೆ ಮಾಡಿದ್ದರು. ಗಂಡನ ಮನೆಯಲ್ಲಿ ಶಾಲೆಗೆ ಹೋಗಲು ಪ್ರಯತ್ನಿಸಿದ್ದರು. ಶಾಲೆ ಕಲಿಯುತ್ತಿದ್ದ ಗಂಡ ಎಲ್ಲದರಲ್ಲಿ ಫೇಲಾಗುತ್ತಿದ್ದರು. ಹೀಗಾಗಿ ಅನಸೂಯಾ ಉತ್ತೀರ್ಣರಾಗುವುದನ್ನು ಸಹಿಸದೇ, ಶಾಲೆ ಬಿಡಿಸಿ ಅಡುಗೆ ಕೆಲಸಕ್ಕೆ ಹಚ್ಚಿದ್ದರು. ಭ್ರಮನಿರಸನಗೊಂಡ ಅನಸೂಯಾ ಚಿಕ್ಕಪ್ಪ ತೀರಿಕೊಂಡ ನಂತರ ತವರಿಗೆ ಬಂದವರು, ಮತ್ತೆ ಗಂಡನ ಮನೆಗೆ ಹೋಗಲೇ ಇಲ್ಲ. ಆ ವೇಳೆಗೆ ಯುವಕ ಅಂಬಾಲಾಲ್ ತಮ್ಮ ಗತಿಸಿದ ತಂದೆಯ ವ್ಯವಹಾರಗಳನ್ನು ಒಂದೊಂದಾಗಿ ಕೈಗೆ ತೆಗೆದುಕೊಂಡರು. ಪ್ರೀತಿಯ ಅಕ್ಕನ ಯಾವುದೇ ನಿಲುವುಗಳನ್ನು ಎಂದೂ ಪ್ರಶ್ನಿಸದೇ ಎಲ್ಲವನ್ನೂ ಬೆಂಬಲಿಸಿದರು. ಓದಬೇಕು, ಏನಾದರೂ ಮಾಡಬೇಕು ಎಂಬ ಅವರ ಮನದೊಳಗಿನ ಹಂಬಲಕ್ಕೆ ಕುಟುಂಬದ ಸ್ನೇಹಿತ ವೈದ್ಯರೊಬ್ಬರು ಲಂಡನ್ನಿಗೆ ಹೋಗಿ, ಓದುವಂತೆ ಪ್ರೇರೇಪಿಸಿದರು. ಅನಸೂಯಾ ತಮ್ಮನ ಮದುವೆಯಾಗುವವರೆಗೆ ಮನೆಯನ್ನು ನಡೆಸಿದರು. ಅವನ ಮದುವೆಯಾಗಿದ್ದೇ, ಓದು ಮುಂದುವರೆಸಲೆಂದು ಅನಸೂಯಾ ಲಂಡನ್ನಿಗೆ ಹೋದರು. ಮೊದಲು ವೈದ್ಯಳಾಗಬೇಕೆಂದು ಬಯಸಿ, ಆರಂಭಿಕ ಪರೀಕ್ಷೆಗಳನ್ನು ತೆಗೆದುಕೊಂಡರು; ಮತ್ತೆ ಮನಸ್ಸು ಬದಲಿಸಿ, ಲಂಡನ್ ಸ್ಕೂಲ್ ಆಫ್ ಎಕಾನಾಮಿಕ್ಸ್ ಸೇರಿದರು. ಆ ಸಮಯದಲ್ಲಿ ಜಿಡ್ಡು ಕೃಷ್ಣಮೂರ್ತಿ ತಮ್ಮ ಸಹಪಾಠಿಯಾಗಿದ್ದರು ಎಂದು ಅನಸೂಯಾ ಹೇಳಿಕೊಂಡಿದ್ದಾರೆ.

1913ರ ಕೊನೆಯಲ್ಲಿ ಇನ್ನೇನು ಅಂತಿಮ ಪರೀಕ್ಷೆ ಬರೆಯಬೇಕಿತ್ತು... ತಂಗಿ ಕಾಂತಾ ತೀರಿಕೊಂಡ ಸುದ್ದಿ ಬಂದಿತು. ಆಗ ಭಾರತಕ್ಕೆ ಮರಳಿದ ಅನಸೂಯಾ ಮರಳಿ ಹೋಗಲಿಲ್ಲ. ಮಹಿಳೆಯರಿಗಾಗಿ ಏನಾದರೂ ಮಾಡುವ ಯೋಚನೆ ಮಾಡಿದರು.

ಮೊದಲು ಮಿಲ್ ಕೆಲಸಗಾರರ ಹೆಣ್ಣುಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದರು. ಅನಸೂಯಾ ಅಲ್ಲಿ ಕೆಲಸ ಮಾಡುತ್ತ ಮಿಲ್ ಕೆಲಸಗಾರರ ಹಾಗೂ ಅವರ ಕುಟುಂಬದವರ ಬಡತನವನ್ನು ಮನಗಂಡರು. ಅನಸೂಯಾ ಅವರ ಸಾಮಾಜಿಕ ಅಂತಸ್ತು, ಅವರ ತಮ್ಮನೂ ಸೇರಿದಂತೆ ಎಲ್ಲ ಪ್ರಮುಖ ಮಿಲ್ ಮಾಲೀಕರೊಂದಿಗೆ ಅವರಿಗಿದ್ದ ಸ್ನೇಹ ಸಂಬಂಧದ ಅರಿವು ಕಾರ್ಮಿಕರಿಗೂ ಇತ್ತು. ಆದರೂ ಅವರು ಅದಾವುದೋ ನಂಬಿಕೆಯಿಂದ ಇವರ ಬಳಿ ಬಂದು ತುಂಬ ಕಡಿಮೆ ಸಂಬಳ, ಅತಿಯಾದ ಕೆಲಸದ ಹೊರೆ, ಮೇಲ್ವಿಚಾರಕರ ದಬ್ಬಾಳಿಕೆ, ಹೀಗೆ ತಮ್ಮ ಸಂಕಷ್ಟಗಳನ್ನು ಹೇಳಿಕೊಳ್ಳುತ್ತಿದ್ದರು. ಅನಸೂಯಾ ತಮ್ಮ ಅಂಬಾಲಾಲ್ ಬಳಿಯೂ ಈ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದರು. ಈ ಬಗ್ಗೆ ಸಹಾನುಭೂತಿಯಿದ್ದರೂ, ಆತ ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. 1917ರಲ್ಲಿ ಮೊಟ್ಟಮೊದಲ ಸಲ ಕಾರ್ಮಿಕರೆಲ್ಲ ತಮ್ಮ ಬೇಡಿಕೆಯ ಕುರಿತು ಚರ್ಚಿಸಲು ಎಲಿಸ್ ಸೇತುವೆ ಕೆಳಗೆ ಸೇರಿದಾಗ, ಸಭೆಯಲ್ಲಿ ಭಾಗವಹಿಸುವಂತೆ ಮತ್ತು ತಮ್ಮ ಬೇಡಿಕೆಗೆ ಸಹಿ ಹಾಕುವಂತೆ ಅನಸೂಯಾ ಅವರಲ್ಲಿ ಕೇಳಿಕೊಂಡಿದ್ದರು. ನಂತರದ್ದು ಇತಿಹಾಸ. 1920ರಲ್ಲಿ ಮಜ್ದೂರ್ ಮಹಾಜನ್ ಸಂಘದ ಸ್ಥಾಪನೆಯ ನಂತರ ಅನಸೂಯಾಬೆನ್ ಕಾರ್ಮಿಕ ಆಂದೋಲನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡರು.

ಮಿಲ್‌ಗಳಲ್ಲಿ ಚಿಕ್ಕಮಕ್ಕಳಿಗಾಗಿ ಬಾಲಗೃಹ, ಹೆಣ್ಣುಮಕ್ಕಳ ಶೌಚಾಲಯಗಳನ್ನು ಕಟ್ಟುವಂತೆ ಮಾಲೀಕರಿಗೆ ತಾಕೀತು ಮಾಡಿದರು. ಹೆರಿಗೆ ಆಸ್ಪತ್ರೆಯೊಂದನ್ನು ನಿರ್ಮಿಸಿದರು. ಜೊತೆಗೆ ಐದಾರು ವರ್ಷದ ಮಕ್ಕಳಿಗೆ ನರ್ಸರಿ ಶಾಲೆಗಳು, ವಯಸ್ಕರರಿಗೆ ಸಾಕ್ಷರತೆ ಕೇಂದ್ರಗಳನ್ನು ತೆರೆದರು.

'ನನಗೆ ಹಿತವೆನ್ನಿಸಿದ್ದನ್ನು ಮಾತ್ರ ಮಾಡಿದ್ದೇನೆ. ಹೀಗೆ ಮಾಡು ಎಂದು ಯಾರಾದರೂ ನನಗೆ ಹೇಳುವುದಾಗಲೀ ಅಥವಾ ನನ್ನನ್ನು ಯಾರೋ ಆಳುವುದಾಗಲೀ ಸಾಧ್ಯವಿಲ್ಲ. ಸಾಬರಮತಿ ಆಶ್ರಮದಲ್ಲಿದ್ದ ನರಹರಿಭಾಯಿ ನಾವೆಲ್ಲರೂ ಜೈಲಿಗೆ ಹೋಗಬೇಕೆಂದು ಎಂದು ಹೇಳಿದರು. ನಾನು ಗಾಂಧೀಜಿಯ ಬಳಿಗೆ ಹೋಗಿ, ನನಗೆ ಜೈಲಿಗೆ ಹೋಗಲು ಇಷ್ಟವಿಲ್ಲ. ಒಂದೇ ಒಂದು ಸಲ ಹೋಗುವುದೂ ನನಗೆ ಕಷ್ಟ ಎಂಬ ಸಂಗತಿಯನ್ನು ಒಪ್ಪಿಕೊಂಡೆ. ನೀನು ಹೋಗಲು ಸಿದ್ಧವೆನ್ನಿಸಿದಾಗ ಮಾತ್ರ ಹೋಗು ಅಂತ ಗಾಂಧೀಜಿ ಹೇಳಿದರು' ಎಂದು ಅಣ್ಣನ ಮಗಳು ಗಿರಾಬೆನ್‌ಗೆ ನೀಡಿದ ಕೊನೆಗಾಲದ ಸಂದರ್ಶನದಲ್ಲಿ ಹೇಳಿದ್ದರು.

ಖಾದಿಯನ್ನೇ ಉಟ್ಟುಕೋ ಎನ್ನುತ್ತಿದ್ದ ಗಾಂಧೀಜಿಗೆ ಒಮ್ಮೆ ಸ್ಪಷ್ಟವಾಗಿ ಹೇಳಿದ್ದರು: 'ಬಾಪೂ ನನಗೆ ನಿಮ್ಮಂತೆ ಖಾದಿ ತೊಡುವುದು ಆಗಲಿಲ್ಲಕ್ಕಿಲ್ಲ.' ಹುಷಾರಿಲ್ಲದೇ ಮಲಗಿದ್ದಾಗ, ಖಾದಿ ಸೀರೆ ತುಂಬಾ ಭಾರವೆನ್ನಿಸಿ, ಅಹಿತವೆನ್ನಿಸುತ್ತಿತ್ತು ಎಂದು ಮನೆಯಲ್ಲಿ ಮಿಲ್ ಹತ್ತಿಸೀರೆಯನ್ನು ಉಡತೊಡಗಿದರು. ಹೊರಗಡೆ ಮಾತ್ರ ಖಾದಿ ಸೀರೆ ಉಡುತ್ತಿದ್ದರು. ಜನರು ತಪ್ಪು ತಿಳಿಯಬಾರದು ಎಂದು ಸಭೆಯೊಂದರಲ್ಲಿ 'ಇದು ಮಿಲ್ ಸೀರೆ, ಖಾದಿಯಲ್ಲ' ಎಂದು ನೇರ ಹೇಳಿಯೂ ಇದ್ದರು.

ಅನಸೂಯಾಬೆನ್ ಮಜ್ದೂರ್ ಮಹಾಜನ್ ಸಂಘದ ಎಲ್ಲ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗುತ್ತ, ಮಿಲ್ ಮಾಲೀಕರೆದುರು ಅವರ ಬೇಡಿಕೆಗಳನ್ನಿಟ್ಟು ವಾದಿಸುತ್ತಿದ್ದರು. ಅವರ ತಮ್ಮ ಅಂಬಾಲಾಲ್ ಮಿಲ್ ಮಾಲೀಕರ ಸಂಘವನ್ನು ಪ್ರತಿನಿಧಿಸುತ್ತಿದ್ದರು. ಹೀಗೆ ಪರಸ್ಪರರ ನಿಲುವುಗಳಲ್ಲಿ ಭಿನ್ನತೆಗಳಿದ್ದರೂ, ಅಕ್ಕ-ತಮ್ಮನ ನಡುವೆ ಬಾಲ್ಯದ ಪ್ರೀತಿ, ಬಾಂಧವ್ಯ ನಂಬಿಕೆ ಉಳಿದುಕೊಂಡಿದ್ದು ತುಂಬ ದೊಡ್ಡ ಸಂಗತಿಯೆನ್ನಿಸುತ್ತದೆ.

ಅನಸೂಯಾಬೆನ್ ಹಾಗೂ ಅಂಬಾಲಾಲರು ತಮ್ಮ ಬಾಲ್ಯ ಹಾಗೂ ಹರೆಯದ ದಿನಗಳನ್ನು ಕಳೆದಿದ್ದು 'ಶಾಂತಿಸದನ' ಎಂಬ ಹೆಸರಿನ ಬಂಗಲೆಯಲ್ಲಿ. ನಂತರ ಕಾರ್ಮಿಕರೊಂದಿಗೆ ಒಡನಾಟ ಬೆಳೆದಂತೆ ಅನಸೂಯಾಬೆನ್ ಬೇರೆ ಮನೆಗೆ ಹೋದರು. ಅಂಬಾಲಾಲರೂ ಬೇರೆ ಮನೆಗೆ ಹೋದರು. ಮುಂದೆ ಅನಸೂಯಾಬೆನ್, ಗಾಂಧೀಜಿ, ಮಿಲ್ ಮಾಲೀಕರು ಹಾಗೂ ಕಾರ್ಮಿಕರ ಜೊತೆಗೆ ಮಾತುಕತೆಗಳು ನಡೆದು, ಮಜ್ದೂರ್ ಮಹಾಜನ ಸಂಘ ರೂಪುತಳೆದಿದ್ದೂ ಇದೇ ಶಾಂತಿಸದನದಲ್ಲಿಯೇ. ಇಲ್ಲಿಯೇ ಆ ಸಂಘದ ನಿಯಮಾವಳಿಗಳನ್ನು ಗಾಂಧೀಜಿಯ ಮಾರ್ಗದರ್ಶನದಲ್ಲಿ ರಚಿಸಿದ್ದರು ಎನ್ನಲಾಗುತ್ತದೆ.

ಅದೇ ಶಾಂತಿಸದನದಲ್ಲಿ ಮೋಟಾಬೆನ್ ಅವರ ಹಳೆಯ ಭಾವಚಿತ್ರಗಳು, ಅವರೇ ಹೇಳಿದ ಕೆಲವು ಮಾತುಗಳು ಇತ್ಯಾದಿಯನ್ನು ಒಳಗೊಂಡ ಒಂದು ಗ್ಯಾಲರಿ ಪ್ರದರ್ಶನವನ್ನು 2012ರಲ್ಲಿ ಆರಂಭಿಸಲಾಗಿದೆ. ಅವರು ತೀರಿಕೊಂಡು ಮುಂದಿನ ಸೆಪ್ಟೆಂಬರಿಗೆ 51 ವರ್ಷಗಳಾಗುತ್ತವೆ. ಆದರೆ ಅಹಮದಾಬಾದಿನ ಹಳೆಯ ತಲೆಮಾರಿನ ಕಾರ್ಮಿಕರಿಗೆ ಮೋಟಾಬೆನ್ಎಂದಿಗೂ ಮಾಸದ ನೆನಪು.

ಅನಸೂಯಾ ಬೆನ್ ಲಂಡನ್‌ನಲ್ಲಿದ್ದಾಗ...

ಕಾರ್ಮಿಕ ಬರೆದ ಕವಿತೆ

ಯಾರೋ ಅನಾಮಿಕ ಕೆಲಸಗಾರರೊಬ್ಬರು 1922ರಲ್ಲಿ ಕಾರ್ಮಿಕ ಹೋರಾಟ ನಡೆಸುತ್ತಿದ್ದ ಸಮಯದಲ್ಲಿ ಅನಸೂಯಾಬೆನ್ ಬಗ್ಗೆ ಗುಜರಾತಿಯಲ್ಲಿ ಒಂದು ಕವಿತೆ ಬರೆದಿದ್ದರು. ಬಡವರ ಸಹಾಯಕ್ಕೆ ಅನಸೂಯಾಬೆನ್ ಬರುತ್ತಿದ್ದಾರೆ, ಸಮಾಧಾನದಿಂದ ಇರಿ, ಅಸೋಸಿಯೇಶನ್ ಕುರಿತು ನಿಮ್ಮೆಲ್ಲರಿಗೆ ತಿಳಿವಳಿಕೆ ನೀಡುತ್ತಾರೆ, ಕೆಲಸಗಾರರ ಬವಣೆ, ಬೋನಸ್ ಇತ್ಯಾದಿ ಕುರಿತು ಮಿಲ್ ಮಾಲೀಕರಿಗೆ ವಕೀಲರ ಹಾಗೆ ತಿಳಿಸಿ ಹೇಳುತ್ತಿದ್ದಾರೆ ಅನಸೂಯಾಬೆನ್...ಎಂಬರ್ಥದಲ್ಲಿ ಶುರುವಾಗುವ ಕವಿತೆ 'ಎದೆಗೊಟ್ಟು ಅವರ ಮಾತು ಕೇಳಿ, ಬಹೆನ್ ಹೇಳಿದ ಕೆಲಸವನ್ನು ಮಾಡಿ' ಎಂದು ಕೊನೆಗೊಳ್ಳುತ್ತದೆ.

ಪದ್ಯದ ಪ್ರತಿ ಸಾಲಿನ ಕೊನೆಯಲ್ಲಿ ಅನುಸೂಯಾಬೆನ್ ಎಂದು ಪುನರಾವರ್ತನೆಯಾಗುತ್ತದೆ. ಸಾಮಾನ್ಯ ಕಾರ್ಮಿಕರೊಬ್ಬರು ಅನಸೂಯಾಬೆನ್ ಬಗ್ಗೆ ಕಟ್ಟಿದ ಲಾವಣಿ ರೀತಿಯ ಈ ಹಾಡು ಕಾರ್ಮಿಕರ ಬದುಕಿನಲ್ಲಿ ಆಕೆ ಎಷ್ಟು ಹಾಸುಹೊಕ್ಕಾಗಿದ್ದರು, ಕಾರ್ಮಿಕರು ಹಾಗೂ ಅನಸೂಯಾಬೆನ್ ನಡುವೆ ಅದೆಂಥ ಆಳವಾದ ವಿಶ್ವಾಸದ, ಪರಸ್ಪರ ಕಾಳಜಿಯ, ಸಹಜಪ್ರೀತಿಯ ಅನುಬಂಧವಿತ್ತು ಎಂಬುದನ್ನು ತೋರಿಸುತ್ತದೆ.

ಸ್ವರಾಜ್-ಅಭಿವೃದ್ಧಿಯ ಕಡೆಗೊಂದು ಹೊಸ ನೋಟ

ಎ. ನಾರಾಯಣ

ಒಳನೋಟ

ಆಗಸ್ಟ್ ಸ್ವಾತಂತ್ರ್ಯೋತ್ಸವದ ಮಾಸ. ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಮಾತನಾಡುವಾಗಲೆಲ್ಲಾ 'ಸ್ವರಾಜ್' ಎನ್ನುವ ಪದವೊಂದನ್ನು ಬಳಸುತ್ತಿರುತ್ತೇವೆ. ಅದೊಂದು ಪದವಲ್ಲ, ಗಾಢ ಪರಿಕಲ್ಪನೆ. ಯಾರು ಯಾವ ನೆಲೆಯಲ್ಲಿ ನಿಂತು ನೋಡುತ್ತಾರೆ ಎನ್ನುವುದರ ಮೇಲೆ ಅದರ ಅರ್ಥಸಾಧ್ಯತೆ ವ್ಯಕ್ತಗೊಳ್ಳುತ್ತದೆ.

ಸಾಮಾನ್ಯರ ಮನಸ್ಸಲ್ಲಿ ಸ್ವರಾಜ್ ಅಂದರೆ ಸ್ವ-ರಾಜ್ಯ: ಬ್ರಿಟಿಷರಿಂದ ವಿಮುಕ್ತಿಗೊಂಡ ಭಾರತ. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಜನ ಅದನ್ನು ಹಾಗೆ ಅರ್ಥಮಾಡಿಕೊಳ್ಳುವುದೇ ಮುಖ್ಯವಾಗಿತ್ತು. ಸ್ವರಾಜ್ ಎನ್ನುವಲ್ಲಿ ಗಾಂಧೀಜಿಯವರ ಮನಸ್ಸಲ್ಲಿ ಏನಿತ್ತು ಎನ್ನುವುದು ಗಾಂಧೀಜಿಯ ಹಾಗೆಯೇ ಒಂದು ಒಗಟು. ಗಾಂಧೀಜಿಯವರ ಸ್ವರಾಜ್ ಕಲ್ಪನೆಯಲ್ಲಿ ಅಧ್ಯಾತ್ಮ, ಅರ್ಥಶಾಸ್ತ್ರ, ರಾಜಕೀಯ, ಪರಿಸರ ಸಂರಕ್ಷಣೆ ಮುಂತಾದ ಸೂಕ್ಷ್ಮಗಳೆಲ್ಲಾ ಸೇರಿಕೊಂಡಿದ್ದವು. ಸ್ವರಾಜ್ಯ ಎಂದರೆ ಮನುಷ್ಯ ತನ್ನನ್ನು ತಾನೇ ಆಳಿಕೊಳ್ಳುವುದು. ಅದು ಅಧ್ಯಾತ್ಮ. ಹಾಗೆ ಆಳಿಕೊಂಡಾಗ ಆಳುವವರ ಅರ್ಥಾತ್ ಸರ್ಕಾರದ ಪ್ರಾಮುಖ್ಯ ಕಡಿಮೆಯಾಗುತ್ತದೆ. ಅದು ರಾಜಕೀಯ. ತನ್ನನ್ನು ತಾನು ಆಳಿಕೊಳ್ಳುವುದು ಎಂದರೆ ಪರಮಾವಧಿ ಸ್ವಾವಲಂಬನೆ. ಹಾಗಾದಾಗ ಮನುಷ್ಯ ಭೌತಿಕ ಜಗತ್ತಿನ (material world) ಮೇಲೆ ಅವಲಂಬಿತವಾಗುವುದು ಕಡಿಮೆಯಾಗುತ್ತದೆ. ಅಂದರೆ ಬೇಡಿಕೆ ಕಡಿಮೆಯಾಗುತ್ತದೆ. ಅದು ಅರ್ಥಶಾಸ್ತ್ರ. ಬೇಡಿಕೆ ಕಡಿಮೆಯಾದಾಗ ಮನುಷ್ಯ ಪರಿಸರವನ್ನು ಹಾಳುಗೆಡಹುವುದು ಕಡಿಮೆಯಾಗುತ್ತದೆ. ಅದು ಪರಿಸರ ಸಂರಕ್ಷಣೆ. ಪರಿಸರ ಕೆಡಿಸದೆ ಬೇಡಿಕೆ ಪೂರೈಸಿಕೊಳ್ಳುವುದು ಎಂದರೆ ಅದು ಸುಸ್ಥಿರ ಅಭಿವೃದ್ಧಿ. ಹೀಗೆ ಆ 'ಸ್ವರಾಜ್' ಎನ್ನುವ ಮೂರಕ್ಷರದ ಪದದಲ್ಲಿ ಏನೇನೋ ಇದೆ. ಏನೇನು ಇದೆ ಎನ್ನುವ ಶೋಧ ಮುಂದುವರಿದಿದೆ. ಈ ಶೋಧನೆಯ ಮುಂದುವರಿಕೆಯಾಗಿ 'ಅಭಿವೃದ್ಧಿ ಸ್ವರಾಜ್' (Development as Swaraj) ಎನ್ನುವ ಹೊಸ ಇಂಗ್ಲಿಷ್ ಪುಸ್ತಕವೊಂದು ಬಂದಿದೆ. ಲೇಖಕ ಕರ್ನಾಟಕದ ಸುಮನಸ್ ಕೌಲಗಿ. ಸ್ವರಾಜ್ ಎಂಬ ವಿಸ್ತೃತ ಪರಿಕಲ್ಪನೆ ಏನಿದೆ ಅದು ಅಭಿವೃದ್ಧಿಯ ಹೊಸ ಮಾದರಿ ಆಗಬೇಕೆನ್ನುವ ಆಶಯ ಇಲ್ಲಿದೆ. ಹಾಗಂತ ಇದು ಆಶಯ ಮಾತ್ರವಲ್ಲ, ಕಾರ್ಯಸಾಧುವಾದ ಪ್ರಾಯೋಗಿಕ ಸಲಹೆ ಎನ್ನುವ ಅಂಶವನ್ನು ಪ್ರತಿಪಾದಿಸುವ ಸಲುವಾಗಿ ಕರ್ನಾಟಕದ ಖಾದಿ ಉದ್ಯಮವನ್ನು ಕೇಂದ್ರೀಕರಿಸಿಕೊಂಡು, ಅದರಲ್ಲೂ ಮುಖ್ಯವಾಗಿ ಮೇಲುಕೋಟೆಯ ಜನಪದ ಸೇವಾ ಟ್ರಸ್ಟ್ ನಡೆಸುತ್ತಿರುವ ಖಾದಿ ಉದ್ಯಮದ ಪ್ರಯೋಗವನ್ನು ಉದಾಹರಣೆಯಾಗಿ ನೀಡುತ್ತಾರೆ.

ಅಭಿವೃದ್ಧಿ, ಅಭಿವೃದ್ಧಿ, ಅಭಿವೃದ್ಧಿ. ಇದು ಸಮಸ್ತ ಮಾನವಕೋಟಿ ಏಕಸ್ವರದಿಂದ ಪಠಿಸುತ್ತಿರುವ ಮಂತ್ರ. ಈ ಮಂತ್ರ ತಾರಕವೂ ಹೌದು, ಮಾರಕವೂ ಹೌದು ಎಂದು ಮನುಷ್ಯನಿಗೆ ಮನವರಿಕೆಯಾಗುವ ಹೊತ್ತಿಗೆ ಮನುಷ್ಯ ಅಭಿವೃದ್ಧಿ ಯಂತ್ರದ ಕಬಂಧಬಾಹುಗಳಿಂದ ಬಿಡಿಸಿಕೊಳ್ಳಲು ಸಾಧ್ಯವಾಗದಷ್ಟು ಅದರ ಮೇಲೆ ಅವಲಂಬಿಸಿ ಆಗಿಹೋಗಿತ್ತು. ಅಂದರೆ ಹೆಚ್ಚು ಹೆಚ್ಚು ಸರಕುಗಳನ್ನು ಉತ್ಪಾದಿಸುವುದು. ಹೊಸ ಹೊಸ ಬೇಡಿಕೆಗಳನ್ನು ಸೃಷ್ಟಿಸುವುದು. ಮತ್ತಷ್ಟು ಉತ್ಪಾದಿಸುವುದು. ಅಭಿವೃದ್ಧಿಯ ಈ ಪಯಣಕ್ಕೆ ಕೊನೆ ಎಂಬುದಿಲ್ಲ. ಇದರಿಂದಾಗಿ ಪರಿಸರ ನಾಶ ಮತ್ತು ಅಸಮಾನತೆ ವಿಪರೀತ ಹೆಚ್ಚಿದಾಗ ಉದಯಿಸಿದ್ದು ಸುಸ್ಥಿರ ಅಭಿವೃದ್ಧಿ (sustainable development) ಎಂಬ ಪರಿಕಲ್ಪನೆ. ಪ್ರಖ್ಯಾತ ಚಿಂತಕ ಶಿವವಿಶ್ವನಾಥನ್ ಒಮ್ಮೆ ಈ ಸುಸ್ಥಿರ ಅಭಿವೃದ್ಧಿಯನ್ನು ಇದೊಂದು ಅಸಂಗತೋಕ್ತಿ (oxymoron) ಎಂದಿದ್ದರು. ಅಂದರೆ, ಒಂದೋ ಮನುಷ್ಯರು ಅಭಿವೃದ್ಧಿಯ ಹೆಸರಲ್ಲಿ ಏನು ಮಾಡುತ್ತಾರೋ ಅದನ್ನು ಮಾಡುತ್ತಾ ಇರಬಹುದು ಅಥವಾ ಅದನ್ನು ಬಿಟ್ಟು ಸುಸ್ಥಿರ ಬದುಕನ್ನು ಕಟ್ಟಿಕೊಳ್ಳಬಹುದು. ಸುಸ್ಥಿರವಾಗಿ ಅಭಿವೃದ್ಧಿ ಸಾಧಿಸುತ್ತೇವೆ ಅಂತ ಹೊರಟರೆ ಅದು ವಿರೋಧಾಭಾಸವಾಗುತ್ತದೆ ಎಂದು ವಾದಿಸಿದ್ದರು. ಹೀಗೆ ಈ ಸುಸ್ಥಿರ ಅಭಿವೃದ್ಧಿ ಮಿತಿಯನ್ನು ಕಂಡುಕೊಂಡ ನಂತರ ಏನು ಎನ್ನುವ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನಗಳು ನಿರಂತರ ನಡೆಯುತ್ತಲೇ ಇವೆ. ಈ ತನಕ ಕಂಡುಕೊಂಡ ಪರ್ಯಾಯ ಮಾರ್ಗಗಳಿಗೆ ಅವುಗಳದ್ದೇ ಮಿತಿಯೂ ಇದೆ. ಈ ಪುಸ್ತಕದಲ್ಲಿ ಕೌಲಗಿಯವರು ಮುಂದಿಡುವ ಪರ್ಯಾಯ ಮಾದರಿಯು ಸ್ವರಾಜ್‌ನ ಮಾದರಿ. ಇದನ್ನು ಅವರು ಗಾಂಧೀಜಿ ಮತ್ತು ಗಾಂಧೀಜಿಯವರ ಆಪ್ತ ಬಳಗದಲ್ಲಿದ್ದ ಅರ್ಥಶಾಸ್ತ್ರಜ್ಞ ಜೆ.ಸಿ. ಕುಮಾರಪ್ಪ ಅವರ ಚಿಂತನೆಗಳನ್ನು ಮಥಿಸಿ ನಿರೂಪಿಸಿದ್ದಾರೆ.

ಹೀಗೊಂದು ಹೊಸ ಮಾದರಿಯನ್ನು ಹುಡುಕುವುದೆಂದರೆ ಅದು ಸಮೃದ್ಧಿಯನ್ನು (prosperity) ಬಲಿಕೊಡುವುದು ಎಂದರ್ಥವಲ್ಲ. ಆದರೆ ಸಮೃದ್ಧಿ ಎಂದರೆ ಏನು ಎಂಬ ಪ್ರಶ್ನೆಗೆ ಹೊಸ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ. ಈ ಮಾದರಿಯಲ್ಲಿ ಸಮೃದ್ಧಿ ಎಂದರೆ ಅಸಮಾನತೆ ಮತ್ತು ಹಿಂಸೆಯನ್ನು ಬಗಲಿಗೆ ಕಟ್ಟಿಕೊಂಡು ಅಗತ್ಯ ಇರುವ ಮತ್ತು ಅಗತ್ಯ ಇಲ್ಲದ ಎಲ್ಲಾ ಸರಕುಗಳನ್ನು ಉತ್ಪಾದಿಸಿ, ಖರೀದಿಸಿ, ಗುಡ್ಡೆಹಾಕುವ ಮೂಲಕ ಅರ್ಥವ್ಯವಸ್ಥೆಯನ್ನು ಬೆಳೆಸುವುದಲ್ಲ. ಇಲ್ಲಿ ಸಮೃದ್ಧಿ ಎಂದರೆ ಸಾಮಾಜಿಕ ಶಾಂತಿ, ಮನಶಾಂತಿ, ತೃಪ್ತಿ, ಬೆಚ್ಚಗಿನ ಸಂಬಂಧಗಳು, ನಳನಳಿಸುವ ಹಸಿರು, ತಿಳಿಯಾಗಿ ಹರಿಯುವ ನೀರು, ಹಿಂಸೆಯಿಂದ ಮುಕ್ತವಾದ ನಿಯಂತ್ರಣ ವ್ಯವಸ್ಥೆಮುಂತಾದ ಉದ್ದೇಶಗಳನ್ನು ಹೊಂದಿರುತ್ತದೆ.. ಮಾನವ ಕೋಟಿಯ ಪಯಣ ಈ ಗುರಿಗಳೆಡೆಗೆ ಇರಬೇಕೆ ಹೊರತು ಇವೆಲ್ಲವನ್ನೂ ಕಸಿದುಕೊಳ್ಳುವ ಎಲ್ಲೆಲ್ಲೂ ಕಾಂಕ್ರೀಟು, ಎಲ್ಲೆಲ್ಲೂ ವಾಹನಗಳು, ಎಲ್ಲೆಲ್ಲೂ ವೇಗ, ಎಲ್ಲೆಲ್ಲೂ ಧಾವಂತ, ಎಲ್ಲೆಲ್ಲೂ ಬರೀ, ಎಲ್ಲೆಲ್ಲೂ ಹೆಚ್ಚುವ ದಾಹ-ಮೋಹ ಎಂಬ ಆಧುನಿಕ ಅಭಿವೃದ್ಧಿಯೆಡೆಗೆ ಇರಬಾರದು ಎನ್ನುವುದು ಕೃತಿಯ ಒಟ್ಟು ಸಂದೇಶ. ಈ ಸಂದೇಶದಲ್ಲಿ ಸಿದ್ಧಾಂತ ಮಂಡನೆ ಮಾತ್ರವಲ್ಲದ, ಪ್ರಾಯೋಗಿಕ ಸಾಧ್ಯತೆಯ ಉದಾಹರಣೆ ಸಹಿತ ಇರುವುದು ಕೃತಿಯ ವಿಶೇಷತೆ.

ಪರಾಡಳಿತಕ್ಕೆ ಸ್ವಾತಂತ್ರ್ಯ ಮತ್ತು ಸಂವಿಧಾನ ಉತ್ತರ ಅಂತ ಭಾವಿಸಿದ್ದೇವೆ, ಆದರೆ, ನಮ್ಮ ಅಭಿವೃದ್ಧಿಯ ಪರಿಕಲ್ಪನೆ ಮತ್ತು ಅಭಿವೃದ್ಧಿಯೆಡೆಗಿನ ಪಯಣ ಇನ್ನೂ ಪಾಶ್ಚಿಮಾತ್ಯರು ಹಾಕಿಕೊಟ್ಟ ದಾರಿಯಲ್ಲೇ ಇದೆ. ಈ ದಾರಿಯನ್ನು ಬದಲಿಸದೆ ಹೋದರೆ 1947ರ ಸ್ವಾತಂತ್ರ್ಯಕ್ಕೆ ಅರ್ಥವೂ ಇಲ್ಲ, ಮನುಕುಲಕ್ಕೆ ಉಳಿಗಾಲವೂ ಇಲ್ಲ. ಹೊಸ ಅಭಿವೃದ್ಧಿ ಚಿಂತನೆ, ಸಮೃದ್ಧಿಯ ಪರ್ಯಾಯ ಪರಿಕಲ್ಪನೆ ಮತ್ತು ಅದನ್ನು ಸಾಧಿಸಲು ಹೊಸ ಮಾದರಿಗಳ ಆವಿಷ್ಕಾರ ಇತ್ಯಾದಿಗಳೆಲ್ಲ ಸೇರಿ ಹೊಸದೊಂದು ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭ ಆಗಬೇಕಿದೆ. ಎಲ್ಲಾ ಸಂಗ್ರಾಮಗಳಿಗೂ ಪ್ರೇರಣೆಯಾಗಿ ಒಂದಷ್ಟು ಗ್ರಂಥಗಳಿವೆ. ಸ್ವರಾಜ್ ಮಾದರಿಯ ಅಭಿವೃದ್ಧಿಗಾಗಿ ಸಂಘಟಿಸಬೇಕಾದ ಸಂಗ್ರಾಮಕ್ಕೆ ಬರೆಯಬೇಕಿರುವ ಮುನ್ನುಡಿಯ ಮೊದಲ ವಾಕ್ಯ ಎಂಬಂತೆ 'ಅಭಿವೃದ್ಧಿ ಸ್ವರಾಜ್' ಎಂಬ ಕೃತಿ ನಮ್ಮ ಮುಂದಿದೆ.



ಪು: 160 ₹830

ಡೆವಲಪ್‌ಮೆಂಟ್ ಆ್ಯಸ್ ಸ್ವರಾಜ್: ಟುವರ್ಡ್ಸ್ ಎ ಸಸ್ಟೇನಬಲ್ ಅಂಡ್ ಈಕ್ವಿಟಬಲ್ ಫ್ಯೂಚರ್

ಲೇ: ಸುಮನಸ್ ಕೌಲಗಿ

ಪ್ರ: ರೂಟ್‌ಲೆಡ್ಜ್ ಫೋಕಸ್

ವೆಬ್‌ಸೈಟ್: https://www.routledge.com/india

ಪ್ರಜಾವಾಣಿ @75
ದೀಪಾವಳಿ ವಿಶೇಷಾಂಕ 2023
ಕಥೆ–ಕವನ ಸ್ಪರ್ಧೆಗಳಿಗೆ ಇದೋ ಆಹ್ವಾನ
ಪ್ರವೇಶಗಳು ನಮಗೆ ತಲುಪಲು ಕೊನೆಯ ದಿನಾಂಕ
ಆಗಸ್ಟ್ 19, 2023
ವಿವರಗಳಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಜಯರಾಮ ಚಾರಿ ಅವರ ಸಂತೆಯಲ್ಲಿ ನಕ್ಕವನು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ನಿಂಗಪ್ಪ ಮುದೇನೂರು ಅವರ ನಮ್ಮ ಮನದ ಪ್ರಿಯ ಬಂಧುವೇ...
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಮೊದಲ ಓದು

ಸಾಂವಿಧಾನಿಕ ಆಶಯ ಮನದಟ್ಟು ಮಾಡುವ ಯತ್ನ



ಪು: 320 ₹300

ಸಂವಿಧಾನದ ನೆರಳಿನಲ್ಲಿ

ಲೇ:ಡಾ.ಎಚ್.ಸಿ.ಮಹದೇವಪ್ಪ

ನಿ: ರಮೇಶ್ ಎಚ್.ಕೆ

ಪ್ರ: ಅಮೂಲ್ಯ ಪುಸ್ತಕ

ಸಂ: 9448676770

ರಾಜ್ಯ ಸರ್ಕಾರದ ಸಚಿವರಾಗಿರುವ ಡಾ.ಎಚ್.ಸಿ.ಮಹದೇವಪ್ಪನವರ ಸಾಮಾಜಿಕ–ರಾಜಕೀಯ ಅಧ್ಯಯನ, ಆಲೋಚನೆ, ನಿಲುವುಗಳ ಬರಹ ರೂಪವೇ 'ಸಂವಿಧಾನದ ನೆರಳಲ್ಲಿ' ಕೃತಿಯಾಗಿ ಹೊರಬಂದಿದೆ.'ದೇಶದಲ್ಲಿ ಕೋಮುಶಕ್ತಿಗಳು ಪ್ರಜಾಪ್ರಭುತ್ವದ ಸತ್ವವನ್ನೇ ಕೊಲ್ಲುವ ಕೆಲಸ ಮಾಡುತ್ತಿರುವಾಗ ವಿಪಕ್ಷಗಳು ಹೇಗೆ ಸಂವಿಧಾನದ ಆಶಯಗಳ ಪರಿಮಿತಿಯಲ್ಲಿ ಪ್ರತಿರೋಧ ವ್ಯಕ್ತಪಡಿಸಬಹುದು ಎಂಬ ಅನುಕರಣಾ ಮಾದರಿಯನ್ನು ತಮ್ಮ ಬರಹಗಳ ಮೂಲಕ ನೀಡಿರುವ ಈ ಪುಸ್ತಕದ ವಿಚಾರಗಳನ್ನು ಕಾಂಗ್ರೆಸ್ ಆದಿಯಾಗಿ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟ ಎಲ್ಲ ಪಕ್ಷದ ನಾಯಕರು ಮತ್ತು ಕಾರ್ಯಕರ್ತರು ಓದಿ ತಿಳಿದುಕೊಳ್ಳಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೃತಿಯ ಬೆನ್ನುಡಿಯಲ್ಲಿ ಬರೆದಿದ್ದಾರೆ.

ಸಮಕಾಲೀನ ಸವಾಲುಗಳು, ಸಮಕಾಲೀನ ರಾಜಕಾರಣ, ಸಮಾಜ ಮತ್ತು ಸಾಮಾಜಿಕ ನ್ಯಾಯ, ವ್ಯಕ್ತಿತ್ವ, ಪಕ್ಷ ಮತ್ತು ರಾಜಕಾರಣ, ಪ್ರತಿಸ್ಪಂದನ ಎಂಬ ವಿಭಾಗಗಳಲ್ಲಿ ಒಟ್ಟು 116 ಲೇಖನಗಳಿವೆ. ಸಂವಿಧಾನದ ಮೂಲ ಆಶಯ, ಬಿಜೆಪಿ ಅದನ್ನು ದುರುಪಯೋಗಪಡಿಸಿಕೊಂಡಿದ್ದು, ಮತಾಂತರ ನಿಷೇಧ ಕಾಯ್ದೆಯ ಸಾಧಕ-ಬಾಧಕಗಳು, ಬಿಜೆಪಿಯ ದಲಿತ ವಿರೋಧಿ ನೀತಿ ಸೇರಿದಂತೆ ಕೇಂದ್ರ ಹಾಗೂ ರಾಜ್ಯದಲ್ಲಿನ ಬಿಜೆಪಿ ಸರ್ಕಾರದ ವೈಫಲ್ಯಗಳು ಸಾಕಷ್ಟು ಲೇಖನಗಳಲ್ಲಿ ಕಾಣಸಿಗುತ್ತವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಹಿಂದಿನ ಅವಧಿಯಲ್ಲಿ ನೀಡಿರುವ ಯೋಜನೆಗಳು, ಅದರ ಹಿಂದಿನ ಆಶಯಗಳ ಕುರಿತು ಕೆಲವು ಲೇಖನಗಳು ಮಾತನಾಡುತ್ತವೆ.

'ಎಚ್.ಸಿ.ಮಹದೇವಪ್ಪನವರ ಈ ಪ್ರತಿಕ್ರಿಯೆ ರೂಪದ ಬರವಣಿಗೆಗಳನ್ನು ಓದಿದರೆ ಅವರಿಗೆ ಇರುವ ವಿಷಯಜ್ಞಾನ, ಸೈದ್ಧಾಂತಿಕ ಸ್ಪಷ್ಟತೆ ಮತ್ತು ಬದ್ಧತೆಯ ಅರಿವಾಗುತ್ತದೆ. ನ್ಯಾಯಕ್ಕೆ ಸಂಬಂಧಿಸಿದ ಮೀಸಲಾತಿ, ಭೂಸುಧಾರಣೆ, ದಲಿತ ಸಮುದಾಯದ ಅನ್ಯಾಯ–ಅಪಮಾನದ ಪ್ರಶ್ನೆಗಳು, ಹಿಂದುತ್ವದ ರಾಜಕಾರಣಕ್ಕೆ ಸಂಬಂಧಿಸಿದ ಕೋಮುವಾದ ಸೇರಿದಂತೆ ಎಲ್ಲ ಜ್ವಲಂತ ವಿಷಯಗಳಿಗೆ ಅವರು ತಕ್ಷಣ ಸ್ಪಂದಿಸಿ ಸಾರ್ವಜನಿಕ ಚರ್ಚೆಗೆ ವೇದಿಕೆ ಒದಗಿಸಿದ್ದಾರೆ' ಎಂದು ದಿನೇಶ್ ಅಮಿನ್ ಮಟ್ಟು ಕೃತಿಯ ಕುರಿತಾಗಿ ಹೇಳುತ್ತಾರೆ.

ಮಹದೇವಪ್ಪನವರ ಆಲೋಚನೆಗಳನ್ನು ರಮೇಶ್ ಎಚ್.ಕೆ. ಅವರು ಸೊಗಸಾಗಿ ಅಕ್ಷರ ರೂಪಕ್ಕೆ ಇಳಿಸಿದ್ದಾರೆ.

ಗೋವಾ ಬಡಜನರ ಬದುಕಿಗೆ ಕನ್ನಡಿ

ಈ ಕೃತಿಯು ಕೊಂಕಣಿ ಲೇಖಕ ಪ್ರಕಾಶ್ ಎಸ್. ಪರಿಯೆಂಕರ್ ಅವರ ಹದಿನೈದು ಸಣ್ಣಕಥೆಗಳ ಅನುವಾದವಾಗಿದೆ. ಇಲ್ಲಿನ ಬಹುತೇಕ ಕಥೆಗಳಲ್ಲಿ ಗೋವಾ ರಾಜ್ಯದ ಗ್ರಾಮೀಣ ಪರಿಸರದಲ್ಲಿನ ಬಡಜನರ ಬದುಕಿನ ಚಿತ್ರಣವಿದೆ. ಅವರ ಕೃಷಿ ಮೂಲ ಬದುಕು, ಹಬ್ಬದ ಆಚರಣೆಗಳು, ಕೆಲವು ವಿಶಿಷ್ಟ ತಳಸಮುದಾಯಗಳು ಜೀವನೋಪಾಯಕ್ಕೆ ಅನುಸರಿಸುವ ವೃತ್ತಿವಿಶೇಷ ಹಾಗೂ ಆಹಾರಕ್ರಮದ ಕುರಿತು ಅಪರೂಪದ ವಿವರಗಳು ಈ ಕಥೆಗಳಲ್ಲಿ ಓದಲು ಸಿಗುತ್ತವೆ.

'ಬೋನು' ಕಥೆಯಲ್ಲಿ ನೀರುನಾಯಿಯನ್ನು ಹಿಡಿದು ಅದರ ಚರ್ಮದ ಕೊಬ್ಬಿನ ಎಣ್ಣೆಯಿಂದ ನಾಟಿ ಔಷಧ ತಯಾರಿಸುವ ಅಲೆಮಾರಿ ಜನಾಂಗದ ಬೋನನ್ನು ಕಸಿದುಕೊಳ್ಳುವ ಮೂಲಕ ಊರಿನ ನಾಗರಿಕರು ಅವರ ದಂಧೆಗೆ ಪ್ರಹಾರ ನೀಡುವ ವಿವರಗಳಿವೆ. ಸಂಕಲನದ ಶೀರ್ಷಿಕೆ ಕಥೆ 'ವರ್ಸಲ್' ಕಥೆಯಲ್ಲಿ ದಲಿತ ಬಾಲಕನೊಬ್ಬ ದಸರಾ ಹಬ್ಬದಂದು ಧೋಲಕ್ ಬಾರಿಸುವ ಪಾಳಿ ತನ್ನ ಪಾಲಿಗೆ ಬಂದರೂ, ಮನೆಮನೆಗೆ ಹೋಗಿ ಅಕ್ಕಿ, ಕಾಯಿಗಳನ್ನು ಬೇಡಿ ಪಡೆಯುವ ಸಂಪ್ರದಾಯವನ್ನು ಧಿಕ್ಕರಿಸಿ ತಾನು ಕಲಿತು ಸ್ವತಂತ್ರವಾಗಿ ಜೀವಿಸಬಲ್ಲೆನೆಂದು ತೋರಿಸುವ ಮಹತ್ವದ ಸಂದೇಶವಿದೆ. ಸ್ವತಃ ಪರಿಸರವಾದಿಯಾಗಿ, ಯುವಜನರನ್ನು ಸಂಘಟಿಸಿ ಅವರಲ್ಲಿ ಪ್ರೋತ್ಸಾಹ ತುಂಬುವ ಕಾರ್ಯಕರ್ತರಾಗಿ ದುಡಿಯುತ್ತಿರುವ ಲೇಖಕ ಡಾ.ಪ್ರಕಾಶ್ ಎಸ್. ಪರಿಯೆಂಕರ್ ಅವರು ಗೋವಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಈ ಸಂಕಲನದ ಕಥೆಗಳು ಓದುಗರಿಗೆ ಹೊಸ ಅನುಭವ ನೀಡುವ ವೈವಿಧ್ಯಪೂರ್ಣ ಅಪರೂಪದ ವಸ್ತುಗಳನ್ನು ಹೊಂದಿವೆ. ಪರಿಸರ ಮತ್ತು ಸಾಮಾಜಿಕ ಕಾಳಜಿಯ ಆಶಯವನ್ನು ಹೊಂದಿರುವ ಈ ಕಥೆಗಳನ್ನು ಈ ಹಿಂದೆ ಹಲವು ಕೊಂಕಣಿ ಕಥೆ ಮತ್ತು ಕಾದಂಬರಿಗಳನ್ನು ಅನುವಾದಿಸಿರುವ ಡಾ. ಗೀತಾ ಶೆಣೈ ಅವರು ಸಮರ್ಥ ರೀತಿಯಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಪು: 150 ₹120

ವರ್ಸಲ್ ಮತ್ತು ಇತರ ಕಥೆಗಳು

ಲೇ: ಕೊಂಕಣಿ ಮೂಲ: ಡಾ. ಪ್ರಕಾಶ್ ಎಸ್. ಪರಿಯೆಂಕರ್, ಕನ್ನಡಾನುವಾದ : ಡಾ. ಗೀತಾ ಶೆಣೈ,

ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಸಂ: 080-23183312

• ಎಂ.ಎಸ್.ಪೂಜಾರ

[illegible]

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನ ಕುದುರೆ

ಪ್ರವಾಸಕ್ಕೆಂದು ಬೊಂಬೆಗಳ ನಾಡು ಚನ್ನಪಟ್ಟಣಕ್ಕೆ ಹೋಗಿದ್ದ ಗುಂಡ ಅಂಗಡಿಯೊಂದರ ಮುಂದೆ ಇಟ್ಟಿದ್ದ ಮರದ ಕುದುರೆಯನ್ನು ಕಂಡ. ಅದನ್ನೇರಿ ಕುಳಿತ ಗುಂಡ, ಕುದುರೆ ಓಡಿಸುವಂತೆ ಅದನ್ನು ಹಿಂದಕ್ಕೆ ಮುಂದಕ್ಕೆ ಆಡಿಸತೊಡಗಿದ. ಮರದ ಕುದುರೆ ಕ್ರಮೇಣ ವೇಗ ಪಡೆಯಿತು. ಗುಂಡನಿಗೆ ಮತ್ತಷ್ಟು ಖುಷಿಯಾಗಿ ಜೋರಾಗಿ ತೂಗಾಡಿದ. ಆ ರಭಸಕ್ಕೆ ಮರದ ಕುದುರೆ ಏಕಾಏಕಿ ಚಿಮ್ಮಿತು. ಗುಂಡ ಹಾಗೂ ಆತನ ಟೋಪಿಯೂ ಹಾರಿ ಹೋಯ್ತು...



ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಯಶೋಧರಿ
ರಾಯಚೂರು

ಭುವನ್ ಎನ್.ಆರ್.
ನಂಜನಗೂಡು

ಸಂಜನಾಶ್ರೀ
ಚಿಕ್ಕಬಳ್ಳಾಪುರ.

ಸೃಜನ್ ಓಬಣ್ಣನವರ್
ವಿಜಯನಗರ

ಮನೀಶ
ಗದಗ

ಜ್ಞಾನವಿ ಆರ್.ಗೌಡ
ಬೆಂಗಳೂರು

ನಿಮ್ಮ ಪದ-ಪರಿಚಯ ಪರೀಕ್ಷೆ

ಇಲ್ಲಿ ಕೊಟ್ಟಿರುವ 'ಕಡ' ಎಂಬ ಮೂಲ ಪದಕ್ಕೆ ಸ್ವರಾಕ್ಷರ ಚಿಹ್ನೆ ಬಳಸಿ ಎಷ್ಟು ಪದಗಳನ್ನು ಮಾಡಬಲ್ಲಿರಿ?
ಉದಾಹರಣೆ: ಕಡಿ

	ಕ	ಡ
1		
2		
3		
4		
5		
6		
7		
8		
9		
10		
11		
12		
13		
14		
15		
16		

ಗಣಿತದಲ್ಲಿ ಗರ್ದಿ ಗಮ್ಮತ್ತು

ಗಣಿತ: ಕೆಲವು ಅನಿಸಿಕೆಗಳು

- ನನ್ನ ಕಾವ್ಯದ ಸ್ಫೂರ್ತಿಯೇ ನಂಬರು
  ಹೀಗೆ ಹೇಳಿದರೆ ಯಾರೂ ನಂಬರು!
- ಗಣಿತ ಕಬ್ಬಿಣದ ಕಡಲೆ ಅಲ್ಲ; ಕಬ್ಬಿನ ರಸ
- ನಂಬರು ನೆಚ್ಚರು ಬರಿದೆ ಕರೆವರು
- ಮಗ್ಗದವನಿಗೂ ಮಗ್ಗಿ ಬೇಕು
- ಆಸಕ್ತಿ ಕೆರಳಿಸದೆ ಗಣಿತ ಬೋಧಿಸುವುದೆಂದರೆ ಕಾಯಿಸದೇ ಕಬ್ಬಿಣ ಬಡಿದಂತೆ
- ಗಣಿತ ಗುಮ್ಮ ಅಲ್ಲೋ ತಮ್ಮ
- ಜಗತ್ತಿಗೆ ಭಾರತವು ಶೂನ್ಯ ದಾನವ ಮಾಡಿ
  ಗಣಿತಕ್ಕಂಜಿದೊಡೆಂಥಯ್ಯ!

ಚೂರು-ಮುರಿ

ಅಕ್ಷರಮಾಲೆ

ಇಲ್ಲಿ ಪ್ರತಿ ಅಕ್ಷರದಿಂದ ಪ್ರಾರಂಭವಾಗುವ ಪದಗುಚ್ಛವಿದು.

ಟು ಇನ್ ಒನ್

ಪದಬೆಸುಗೆ

ಇಲ್ಲಿ ಕೊಟ್ಟಿರುವ ಪದಗಳಿಗೆ ಅಕ್ಷರ ಪಟ್ಟಿಯಿಂದ ಸೂಕ್ತವಾದ ಎರಡು ಅಕ್ಷರಗಳನ್ನು ಆಯ್ದು ಪದದ ಆರಂಭಕ್ಕೆ ಹಾಗೂ ಕೊನೆಗೆ ಒಂದೊಂದು ಅಕ್ಷರ ತುಂಬಿದರೆ ಆರಂಭಕ್ಕೆ ಮೂರು ಅಕ್ಷರದ ಒಂದು ಪದ ಹಾಗೂ ಕೊಟ್ಟಿರುವ ಪದದಿಂದ ಮತ್ತೊಂದು ಅಂತ್ಯ ಪದವಾಗುವುದು.

ಸುಳಿ ಗೋರಿ ಗಡಿ
ಬರ ಕಣಿ

ಅಕ್ಷರ ಪಟ್ಟಿ

ಲ	ಮಾ	ಗೆ	ಅಂ	ಹ
ಲ್ಲಾ	ಕೂ	ವು	ಉ	ವೆ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಬೆಸುಗೆ: 1.ಆಕರಡಿ 2.ಗೀಜಗಳ 3.ಬೇಸರತಿ 4.ಸಾಗರಡಿ 5.ಅಮರಳು
ಅದಲು ಬದಲು...: 1.ಯಮನಕರ 2.ದಾರಪಡಿ 3.ದರಸಮರ 4.ಹುರಿಕಟ್ಟು
ಆಲ್ಫಾಬೆಟ್ ಗೇಮ್ : 1.BOOK 2.COOL 3.DOOR 4.FOOT 5.FOOL 6.GOOD 7.HOOD 8.LOOK 9.MOON 10.MOOD 11.NOON 12.POOR 13.ROOF 14.SOON 15.WOOL

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1.ನೀರು ದೂಡು = ________
2.ರಮಣನ ಜನ = ________
3.ಮಾವಿನಮರ = ________
4.ರವಿಹಾಯುವಾ = ________



ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಮಲೇಷ್ಯಾ ವಿರುದ್ಧ 4–3 ಗೋಲುಗಳ ಗೆಲುವು

ಭಾರತದ ಮುಡಿಗೆ ಕಿರೀಟ

ಚೆನ್ನೈ (ಪಿಟಿಐ): ಮಲೇಷ್ಯಾ ತಂಡ ಒಡ್ಡಿದ ಸ್ಫೂರ್ತಿಯುತ ಸವಾಲನ್ನು ಬದಿಗೊತ್ತಿದ ಭಾರತ ತಂಡ, ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಕಿರೀಟ ಮುಡಿಗೇರಿಸಿಕೊಂಡಿತು.

ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಫೈನಲ್ ಪಂದ್ಯವನ್ನು ಹರ್ಮನ್‌ಪ್ರೀತ್ ಸಿಂಗ್ ಬಳಗ 4–3 ಗೋಲುಗಳಿಂದ ಗೆದ್ದಿತು.

ಭಾರತ ತಂಡ ನಾಲ್ಕನೇ ಬಾರಿ ಪ್ರಶಸ್ತಿ ಗೆದ್ದ ಸಾಧನೆ ಮಾಡಿದೆ. ಈ ಹಿಂದೆ 2011, 2016 ಮತ್ತು 2018 ರಲ್ಲಿ (ಪಾಕಿಸ್ತಾನದ ಜತೆ ಜಂಟಿಯಾಗಿ) ಚಾಂಪಿಯನ್ ಅಗಿತ್ತು.

ಜುಗ್‌ರಾಜ್ ಸಿಂಗ್ (9ನೇ ನಿ.), ಹರ್ಮನ್‌ಪ್ರೀತ್ ಸಿಂಗ್ (45ನೇ ನಿ.), ಗುರುಜಂತ್ ಸಿಂಗ್ (45ನೇ ನಿ.) ಮತ್ತು ಆಕಾಶ್‌ದೀಪ್ ಸಿಂಗ್ (56ನೇ ನಿ.) ಅವರು ಗೋಲು ಗಳಿಸಿ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಮಲೇಷ್ಯಾ ತಂಡದ ಪರ ಅಬು ಕಮಲ್ ಅಝ್ರಾಯ್ (14ನೇ ನಿ.), ರಹೀಂ ರಝಿ (18ನೇ ನಿ.) ಹಾಗೂ ಮುಹಮ್ಮದ್ ಅಮೀನುದೀನ್ (28ನೇ ನಿ.) ಅವರು ಚೆಂಡನ್ನು ಗುರಿ ಸೇರಿಸಿದರು.

45ನೇ ನಿಮಿಷದರೆಗೆ 1–3 ಗೋಲುಗಳಿಂದ ಹಿನ್ನಡೆಯಲ್ಲಿದ್ದ ಭಾರತ, ಕೊನೆಯಲ್ಲಿ ಅಮೋಘ ರೀತಿಯಲ್ಲಿ ಮರುಹೋರಾಟ ನಡೆಸಿ ಗೆದ್ದಿತು.

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯನ್ನು ಗೆದ್ದುಕೊಂಡ ಭಾರತ ತಂಡದ ಆಟಗಾರರು ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಭಾರತಕ್ಕೆ 4ನೇ ಪ್ರಶಸ್ತಿ
- ಫೈನಲ್‌ನಲ್ಲಿ 4–3 ಗೋಲುಗಳ ಜಯ
- ಆಕಾಶ್‌ದೀಪ್ ಸಿಂಗ್ ಗೆಲುವಿನ ಗೋಲು

ಜುಗ್‌ರಾಜ್ ಅವರ ಗೋಲಿನ ನೆರವಿನಿಂದ ಆತಿಥೇಯ ತಂಡ 9ನೇ ನಿಮಿಷದಲ್ಲೇ ಮುನ್ನಡೆ ಗಳಿಸಿತು. ಆದರೆ ಸುಲಭದಲ್ಲಿ ಬಿಟ್ಟುಕೊಡಲು ಸಿದ್ಧವಿಲ್ಲದ ಮಲೇಷ್ಯಾ ಮೊದಲ ಕ್ವಾರ್ಟರ್‌ನ ಕೊನೆಯಲ್ಲಿ ಗೋಲು ಗಳಿಸಿ ಸಮಬಲ ಸಾಧಿಸಿತು.

ಎರಡನೇ ಕ್ವಾರ್ಟರ್‌ನಲ್ಲಿ ಆಟದ ಮೇಲೆ ಪೂರ್ಣ ನಿಯಂತ್ರಣ ಸಾಧಿಸಿದ ಎದುರಾಳಿ ತಂಡ ಮತ್ತೆರಡು ಗೋಲುಗಳನ್ನು ಗಳಿಸಿತು. ಮೊದಲಾರ್ಧ ಕೊನೆಗೊಂಡಾಗ 1–3 ರಿಂದ ಹಿನ್ನಡೆಯಲ್ಲಿದ್ದ ಭಾರತ ಒತ್ತಡಕ್ಕೆ ಒಳಗಾಯಿತು.

ಆದರೆ ಆತಿಥೇಯ ಆಟಗಾರರು ಮೂರನೇ ಕ್ವಾರ್ಟರ್‌ನಲ್ಲಿ ನಿಧಾನವಾಗಿ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. 45ನೇ ನಿಮಿಷದಲ್ಲಿ ಬೆನ್ನುಬೆನ್ನಿಗೆ ಎರಡು ಗೋಲುಗಳನ್ನು ಗಳಿಸಿ ಪಂದ್ಯವನ್ನು 3–3 ರಿಂದ ಸಮಸ್ಥಿತಿಗೆ ತಂದರು.

ಪಂದ್ಯ ಕೊನೆಗೊಳ್ಳಲು ನಾಲ್ಕು ನಿಮಿಷಗಳಿರುವಾಗ ಮನ್‌ದೀಪ್ ಸಿಂಗ್ ಅವರ ಪಾಸ್‌ನಲ್ಲಿ ಚೆಂಡನ್ನು ಗುರಿ ಸೇರಿಸಿದ ಆಕಾಶ್‌ದೀಪ್, ಭಾರತದ ಗೆಲುವಿಗೆ ಕಾರಣರಾದರು.

ಜಪಾನ್‌ಗೆ ಮೂರನೇ ಸ್ಥಾನ: ಕಳೆದ ಬಾರಿಯ ಚಾಂಪಿಯನ್ ದಕ್ಷಿಣ ಕೊರಿಯಾ ತಂಡವನ್ನು 5–3 ಗೋಲುಗಳಿಂದ ಮಣಿಸಿದ ಜಪಾನ್ ತಂಡ, ಮೂರನೇ ಸ್ಥಾನ ಗಳಿಸಿತು.

ರ್‍ಯೋಮ ಓಕಾ (3ನೇ ನಿ.), ರ್‍ಯೊಸೆಯಿ ಕಾಟೊ (9ನೇ ನಿ.), ಕೆಂಟಾರೊ ಫುಕುದಾ (28), ಶೋತಾ ಯಮಾಡ (53) ಮತ್ತು ಕೆನ್ ನಗಯೊಶಿ (58) ಅವರು ಜಪಾನ್ ತಂಡದ ಭರ್ಜರಿಗೆ ಗೆಲುವಿಗೆ ಕಾರಣರಾದರು.

ಕೊರಿಯಾ ತಂಡದ ಪರ ಜಾಂಗ್‌ಹ್ಯೂನ್ ಜಾಂಗ್ (15 ಮತ್ತು 33ನೇ ನಿ.) ಚೆಯೊಲಿಯೊನ್ (26) ಗೋಲು ತಂದಿತ್ತರು.

ಗಿಲ್, ಜೈಸ್ವಾಲ್ ಮಿಂಚು

ಟಿ20: ಸರಣಿಯಲ್ಲಿ ಸಮಬಲ ಸಾಧಿಸಿದ ಭಾರತ ತಂಡ

ಲಾಡೆರ್‌ಹಿಲ್, ಅಮೆರಿಕ (ಪಿಟಿಐ): ಯಶಸ್ವಿ ಜೈಸ್ವಾಲ್ ಮತ್ತು ಶುಭಮಲ್ ಗಿಲ್ ಅವರ ಬಿರುಸಿನ ಅರ್ಧಶತಕಗಳ ನೆರವಿನಿಂದ ಭಾರತ ತಂಡ, ವೆಸ್ಟ್ ಇಂಡೀಸ್ ವಿರುದ್ಧದ ನಾಲ್ಕನೇ ಟಿ20 ಪಂದ್ಯದಲ್ಲಿ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ವಿಂಡೀಸ್ ತಂಡ 8 ವಿಕೆಟ್‌ಗಳಿಗೆ 178 ರನ್ ಗಳಿಸಿದರೆ, ಹಾರ್ದಿಕ್ ಪಾಂಡ್ಯ ಬಳಗ ಇನ್ನೂ ಮೂರು ಓವರ್‌ಗಳು ಇರುವಂತೆಯೇ 1 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು.

ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ2–2 ರಲ್ಲಿ ಸಮಬಲ ಸಾಧಿಸಿತು. ಸರಣಿಯ ಐದನೇ ಹಾಗೂ ನಿರ್ಣಾಯಕ ಪಂದ್ಯ ಭಾನುವಾರ ಇದೇ ಕ್ರೀಡಾಂಗಣದಲ್ಲಿ ನಡೆಯಲಿದೆ.

ಸವಾಲಿನ ಗುರಿ ಬೆನ್ನಟ್ಟಿದ ಭಾರತ ತಂಡಕ್ಕೆ ಜೈಸ್ವಾಲ್ (ಔಟಾಗದೆ 84, 51 ಎ., 4X11, 6X3) ಮತ್ತು ಗಿಲ್ (77 ರನ್, 47 ಎ., 4X3, 6X5) ಮೊದಲ ವಿಕೆಟ್‌ಗೆ 15.3 ಓವರ್‌ಗಳಲ್ಲಿ 165 ರನ್ ಸೇರಿಸಿ ಗೆಲುವಿನ ಹಾದಿ ಸುಗಮಗೊಳಿಸಿದರು. ವಿಂಡೀಸ್ ತಂಡದ ವೇಗ ಮತ್ತು ಸ್ಪಿನ್ ದಾಳಿಯನ್ನು ಇವರು ಸಮರ್ಥವಾಗಿ ಎದುರಿಸಿ ನಿಂತರು.

ಟಿ20 ಕ್ರಿಕೆಟ್‌ನಲ್ಲಿ ಭಾರತದ ಪರ ಮೊದಲ ವಿಕೆಟ್ ದಾಖಲಾದ ಅತಿದೊಡ್ಡ ಜತೆಯಾಟದ ದಾಖಲೆಯನ್ನು ಇವರು ಸರಿಗಟ್ಟಿದರು. ಕೆ.ಎಲ್.ರಾಹುಲ್ ಮತ್ತು ರೋಹಿತ್ ಶರ್ಮಾ ಅವರು 2017 ರಲ್ಲಿ ಇಂದೋರ್‌ನಲ್ಲಿ ಶ್ರೀಲಂಕಾ ವಿರುದ್ಧ ಮೊದಲ ವಿಕೆಟ್‌ಗೆ 165 ರನ್ ಸೇರಿಸಿದ್ದರು.

ಗಿಲ್ ಔಟಾದ ಬಳಿಕ ತಿಲಕ್ ವರ್ಮಾ (ಔಟಾಗದೆ 7) ಅವರೊಂದಿಗೆ ಸೇರಿಕೊಂಡು ಯುವ ಆಟಗಾರ ಜೈಸ್ವಾಲ್, ಭಾರತ ತಂಡವನ್ನು ಜಯದತ್ತ ಮುನ್ನಡೆಸಿದರು.

ಹೆಟ್ಮೆಯರ್ ಆಸರೆ: ಇದಕ್ಕೂ ಮುನ್ನ ಟಾಸ್ ಗೆದ್ದ ವೆಸ್ಟ್ ಇಂಡೀಸ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಹೆಟ್ಮೆಯರ್ (61; 39ಎ, 4X3, 6X4) ಮತ್ತು ಶೈ ಹೋಪ್ (45; 29ಎ, 4X3, 6X2) ಅವರ ಆಟದಿಂದ ಸವಾಲಿನ ಮೊತ್ತ ಪೇರಿಸಿತು.

ಭಾರತದ ಎಡಗೈ ವೇಗಿ ಅರ್ಷದೀಪ್ ಸಿಂಗ್ (38ಕ್ಕೆ3) ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ (26ಕ್ಕೆ2) ಪರಿಣಾಮಕಾರಿ ದಾಳಿಯ ಮುಂದೆ ಸಣ್ಣ ಮೊತ್ತಕ್ಕೆ ಕುಸಿಯುವ ಆತಂಕವನ್ನು ಆತಿಥೇಯ ತಂಡವು ಅನುಭವಿಸಿತ್ತು. 57 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು.

ಆದರೆ ಈ ಭೀತಿಯನ್ನು ಐದನೇ ಕ್ರಮಾಂಕದ ಬ್ಯಾಟರ್ ಹೆಟ್ಮೆಯರ್ ಅವರು ದೂರಗೊಳಿಸಿದರು.

ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 20 ಓವರ್‌ಗಳಲ್ಲಿ 8ಕ್ಕೆ178 (ಶೈ ಹೋಪ್ 45, ಶಿಮ್ರಾನ್ ಹೆಟ್ಮೆಯರ್ 61, ಒಡಿಯನ್ ಸ್ಮಿತ್ ಔಟಾಗದೆ 15, ಅರ್ಷದೀಪ್ ಸಿಂಗ್ 38ಕ್ಕೆ3, ಕುಲದೀಪ್ ಯಾದವ್ 26ಕ್ಕೆ2)

ಭಾರತ: 17 ಓವರ್‌ಗಳಲ್ಲಿ 1 ವಿಕೆಟ್‌ಗೆ 179 (ಯಶಸ್ವಿ ಜೈಸ್ವಾಲ್ ಔಟಾಗದೆ 84, ಶುಭಮನ್ ಗಿಲ್ 77, ತಿಲಕ್ ವರ್ಮಾ ಔಟಾಗದೆ 7) ಫಲಿತಾಂಶ: ಭಾರತಕ್ಕೆ 9 ವಿಕೆಟ್ ಗೆಲುವು

ಯಶಸ್ವಿ ಜೈಸ್ವಾಲ್ (ಎಡ) ಮತ್ತು ಗಿಲ್ –ಎಎಫ್‌ಪಿ ಚಿತ್ರ

ಏಷ್ಯನ್ ಗೇಮ್ಸ್: ಹಾಕಿ ರಾಷ್ಟ್ರೀಯ ಶಿಬಿರಕ್ಕೆ 34 ಮಂದಿ

ರಾಣಿ ರಾಂಪಾಲ್‌ಗೆ ಸಿಗದ ಸ್ಥಾನ

ಬೆಂಗಳೂರು (ಪಿಟಿಐ): ಅನುಭವಿ ಆಟಗಾರ್ತಿ ಮತ್ತು ಮಾಜಿ ನಾಯಕಿ ರಾಣಿ ರಾಂಪಾಲ್ ಅವರನ್ನು ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸಲು ಆಯ್ಕೆ ಮಾಡಲಾಗಿರುವ ಸಂಭವನೀಯರ ತಂಡಕ್ಕೆ ಆಯ್ಕೆ ಮಾಡಿಲ್ಲ.

ಚೀನಾದ ಹ್ಯಾಂಗ್‌ಝೌನಲ್ಲಿ ಸೆ. 23ರಿಂದ ನಡೆಯುವ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಭಾರತ ಮಹಿಳೆಯರ ಹಾಕಿ ತಂಡದ ಆಯ್ಕೆ ಶಿಬಿರದಲ್ಲಿ 34 ಮಂದಿ ಪಾಲ್ಗೊಳ್ಳಲಿದ್ದಾರೆ.

ಭಾರತ ತಂಡದ ಮಾಜಿ ನಾಯಕಿಯೂ ಆಗಿರುವ ರಾಣಿ, ಈಚೆಗೆ ರಾಷ್ಟ್ರೀಯ ತಂಡದ ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ವಿರುದ್ಧ ವಾಗ್ದಾಳಿ ನಡೆಸಿದ್ದರು. ಉತ್ತಮ ಪ್ರದರ್ಶನದ ಹೊರತಾಗಿಯೂ ಎರಡು ವರ್ಷಗಳಿಂದ ತನ್ನನ್ನು ರಾಷ್ಟ್ರೀಯ ತಂಡಕ್ಕೆ ಯಾಕೆ ನಿರ್ಲಕ್ಷಿಸಲಾಗುತ್ತಿದೆ ಎಂಬುದಕ್ಕೆ ಉತ್ತರ ನೀಡಬೇಕು ಎಂದು ಒತ್ತಾಯಿಸಿದ್ದರು.

ಈ ಮಧ್ಯೆ ಪ್ರತಿಕ್ರಿಯಿಸಿರುವ ಶೋಪ್‌ಮನ್, 'ನಾವು ಇತ್ತೀಚಿನ ಸ್ಪರ್ಧೆಗಳಲ್ಲಿ ತಂಡವಾಗಿ ಬೆಳೆಯುತ್ತಿದ್ದೇವೆ ಮತ್ತು ನಿರಂತರವಾಗಿ ಕಲಿಯುತ್ತಿದ್ದೇವೆ. ಏಷ್ಯನ್ ಗೇಮ್ಸ್‌ಗೆ ತಯಾರಿಯ ನಿಟ್ಟಿನಲ್ಲಿ ಮುಂಬರುವ ಶಿಬಿರ ಮಹತ್ವದ್ದಾಗಿದೆ.

ರಾಣಿ ರಾಂಪಾಲ್

ಅಲ್ಲದೆ, 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಥಾನ ಪಡೆಯುವಲ್ಲಿಯೂ ಈ ಟೂರ್ನಿ ನಮಗೆ ಪ್ರಮುಖವಾದುದು. ಶಿಬಿರದಲ್ಲಿ ಆಟಗಾರರು ಸುಧಾರಿಸಬೇಕಾದ ಕ್ಷೇತ್ರಗಳ ಬಗ್ಗೆ ಆದ್ಯತೆ ನೀಡಲಾಗುತ್ತದೆ' ಎಂದಿದ್ದಾರೆ.

ರಾಷ್ಟ್ರೀಯ ಶಿಬಿರವು ಭಾನುವಾರದಿಂದ ಸೆ. 18ರವರೆಗೆ ನಡೆಯಲಿದೆ. ಸೆ.27ರಂದು ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಮಹಿಳಾ ಹಾಕಿ ತಂಡ ಅಭಿಯಾನ ಆರಂಭಿಸಲಿದೆ. 'ಎ' ಗುಂಪಿನಲ್ಲಿರುವ ಭಾರತವು ಕೊರಿಯಾ, ಮಲೇಷ್ಯಾ, ಹಾಂಗ್‌ಕಾಂಗ್, ಚೀನಾ, ಸಿಂಗಪುರ ವಿರುದ್ಧ ಆಡಲಿದೆ.

ಭಾರತದ ತಂಡವು ಈಚೆಗೆ ಸ್ಪ್ಯಾನಿಷ್ ಹಾಕಿ ಫೆಡರೇಷನ್‌ನ 100ನೇ ವರ್ಷದ ಅಂಗವಾಗಿ ಆಯೋಜಿಸಿದ್ದ ಅಂತರರಾಷ್ಟ್ರೀಯ ಹಾಕಿ ಟೂರ್ನಿಯನ್ನು ಗೆದ್ದು, ಆತ್ಮವಿಶ್ವಾಸದಲ್ಲಿದೆ.

ಸಂಭವನೀಯರ ಪಟ್ಟಿ:

ಗೋಲ್‌ಕೀಪರ್ಸ್: ಸವಿತಾ ಪೂನಿಯಾ, ರಜನಿ ಎತಿಮಾರ್ಪು, ಬಿಚು ದೇವಿ ಖರಿಬಮ್, ಬನ್ಸಾರಿ ಸೋಲಂಕಿ; **ಡಿಫೆಂಡರ್ಸ್:** ದೀಪ್ ಗ್ರೇಸ್ ಎಕ್ಕಾ, ಗುರ್ಜಿತ್ ಕೌರ್, ನಿಕ್ಕಿ ಪ್ರಧಾನ್, ಉದಿತಾ, ಇಶಿಕಾ ಚೌಧರಿ, ಅಕ್ಷತಾ ಅಬಾಸೊ ಧೇಕಲೆ, ಜ್ಯೋತಿ ಚೆಟ್ರಿ, ಮಹಿಮಾ ಚೌಧರಿ; **ಮಿಡ್‌ಫೀಲ್ಡರ್ಸ್:** ನಿಶಾ, ಸಲೀಮಾ ಟೆಟೆ, ಸುಶೀಲಾ ಚಾನು ಪುಖ್ರಂಬಾಮ್, ಜ್ಯೋತಿ, ನವಜ್ಯೋತ್ ಕೌರ್, ಮೋನಿಕಾ, ಮರಿಯಾನಾ ಕುಜೂರ್, ಸೋನಿಕಾ, ನೇಹಾ, ಬಲಜೀತ್ ಕೌರ್, ರೀನಾ ಖೋಖರ್, ವೈಷ್ಣವಿ ಫಾಲ್ಕೆ, ಅಜ್ಮಿನಾ ಕುಜೂರ್; **ಫಾರ್ವರ್ಡ್ಸ್:** ಲಾಲ್ರೆಮ್ಸಿಯಾಮಿ, ನವನೀತ್ ಕೌರ್, ವಂದನಾ ಕಟಾರಿಯಾ, ಶರ್ಮಿಳಾ ದೇವಿ, ದೀಪಿಕಾ, ಸಂಗೀತಾ ಕುಮಾರಿ, ಮುಮ್ತಾಜ್ ಖಾನ್, ಸುನೆಲಿಟಾ ಟೊಪ್ಪೊ, ಬ್ಯೂಟಿ ಡಂಗ್‌ಡಂಗ್.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ಬಿಟಿಸಿ) ಶನಿವಾರ ನಡೆದ ಕರ್ನಾಟಕ ಮೈಲ್ ಚಾಂಪಿಯನ್‌ಷಿಪ್ ಕಪ್‌ನಲ್ಲಿ ಗೆದ್ದ 'ಎವಾಲ್ಡೊ' ಕುದುರೆಯ ಮಾಲೀಕ ಕೆ.ಮನೋಜ್ ಅವರಿಗೆ ಬಿಟಿಸಿ ವ್ಯವಸ್ಥಾಪಕ ಸಮಿತಿ ಸದಸ್ಯ ಸಿ.ಎ.ಪ್ರಶಾಂತ್ ಟ್ರೋಫಿ ವಿತರಿಸಿದರು. (ಎಡದಿಂದ) ಸ್ಟೀವರ್ಡ್‌ಗಳಾದ ಸತೀಶ್ ಎನ್.ಗೌಡ, ಅರವಿಂದ್ ರಾಘವನ್, ನವಲ್ ಆರ್.ನಾರಿಯಲ್‌ವಾಲಾ, ಎ.ಸಿ.ಸತೀಶ್ ಚಂದ್ರ ಮತ್ತು ದರ್ಶನ್ ಲೋಕೇಶ್ (ಸಮಿತಿ ಸದಸ್ಯರು) ಇದ್ದರು

ಇನ್‌ಸ್ಟಾಗ್ರಾಮ್ ಸಂಭಾವನೆ: ವರದಿ ಅಲ್ಲಗಳೆದ ಕೊಹ್ಲಿ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮ ಇನ್‌ಸ್ಟಾಗ್ರಾಮ್‌ನಲ್ಲಿ ಮಾಡುವ ಪೋಸ್ಟ್‌ವೊಂದಕ್ಕೆ ಪಡೆಯುವ ಸಂಭಾವನೆ ಬಗ್ಗೆ ಹರಿದಾಡುತ್ತಿರುವ ಸುದ್ದಿಯನ್ನು ಭಾರತ ಕ್ರಿಕೆಟ್ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಅಲ್ಲಗಳೆದಿದ್ದಾರೆ.

ಕೊಹ್ಲಿ ಅವರು ಇನ್‌ಸ್ಟಾಗ್ರಾಮ್‌ನಲ್ಲಿ ಮಾಡುವ ಪ್ರತಿಯೊಂದು ಪ್ರಾಯೋಜಿತ ಪೋಸ್ಟ್‌ಗೆ ₹ 11.4 ಕೋಟಿ ಸಂಭಾವನೆ ಪಡೆಯುವರು ಎಂಬ ಸುದ್ದಿ ಹರಿದಾಡಿತ್ತು. ಅದು 'ಸುಳ್ಳು' ಎಂದು ಅವರು ಸ್ಪಷ್ಟಪಡಿಸಿದ್ದಾರೆ.

'ನಾನು ಜೀವನದಲ್ಲಿ ಗಳಿಸಿರುವ ಎಲ್ಲದಕ್ಕೂ ಕೃತಜ್ಞನಾಗಿದ್ದೇನೆ. ಸಾಮಾಜಿಕ ಮಾಧ್ಯಮದ ಗಳಿಕೆಯ ಬಗ್ಗೆ ಹರಿದಾಡುತ್ತಿರುವ ಸುದ್ದಿಗಳು ನಿಜವಲ್ಲ' ಎಂದು ತಮ್ಮ 'ಎಕ್ಸ್' (ಟ್ವಿಟರ್) ಖಾತೆಯಲ್ಲಿ ಅವರು ಶನಿವಾರ ಪೋಸ್ಟ್ ಮಾಡಿದ್ದಾರೆ.

ಇನ್‌ಸ್ಟಾ ಗ್ರಾಮ್ ಪೋಸ್ಟ್‌ಗಳ ನಿರ್ವಹಣೆ ಮಾಡುವ 'ಹಾಪರ್ ಎಚ್‌ಕ್ಯು' ಸಂಸ್ಥೆಯು, ಇನ್‌ಸ್ಟಾಗ್ರಾಮ್ ಪೋಸ್ಟ್‌ನಿಂದ ಅತಿಹೆಚ್ಚು ಸಂಭಾವನೆ ಪಡೆಯುವ ಸೆಲೆಬ್ರಿಟಿಗಳ ಪಟ್ಟಿಯನ್ನು ಪ್ರಕಟಿಸಿತ್ತು. ಕೊಹ್ಲಿ ಅವರು 14ನೇ ಸ್ಥಾನದಲ್ಲಿದ್ದಾರೆ ಎಂದಿತ್ತು.

ಡುರಾಂಡ್ ಕಪ್ ಟೂರ್ನಿ: ಈಸ್ಟ್ ಬೆಂಗಾಲ್‌ಗೆ ಜಯ

ಕೋಲ್ಕತ್ತ (ಪಿಟಿಐ): ಈಸ್ಟ್ ಬೆಂಗಾಲ್ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 1–0 ಅಂತರದಿಂದ ಸಾಂಪ್ರದಾಯಿಕ ಎದುರಾಳಿ ಮೋಹನ್ ಬಾಗನ್ ತಂಡದವರನ್ನು ಮಣಿಸಿದರು.

60ನೇ ನಿಮಿಷದಲ್ಲಿ ನಂದಕುಮಾರ್ ಶೇಖರ್ ಗಳಿಸಿದ ಗೋಲಿನ ನೆರವಿನಿಂದ ಬೆಂಗಾಲ್ ತಂಡ ಗೆಲುವು ಸಾಧಿಸಿತು. ಈ ಮೂಲಕ ಬಾಗನ್ ತಂಡದ ಕ್ವಾರ್ಟರ್ ಫೈನಲ್‌ಗೆ ಸುಗಮವಾಗಿ ಪ್ರವೇಶಿಸುವ ಕನಸನ್ನು ಕೊಂಚ ತಡೆಹಿಡಿಯಿತು.

ಮೋಹನ್ ಬಾಗನ್ ತಂಡವನ್ನು ಈಸ್ಟ್ ಬೆಂಗಾಲ್ ತಂಡವು ನಾಲ್ಕೂವರೆ ವರ್ಷಗಳಿಂದ ಸೋಲಿಸಿರಲಿಲ್ಲ. ಇದೀಗ 1658 ದಿನಗಳ ಕಾಯುವಿಕೆಯ ನಂತರ ಬೆಂಗಾಲ್ ಜಯ ಸಾಧಿಸಿದೆ.

2019ರ ಜನವರಿ 27ರಂದು ಐ–ಲೀಗ್ ಟೂರ್ನಿಯ ಪಂದ್ಯದಲ್ಲಿ ಕೊನೆಯ ಬಾರಿ ಬಾಗನ್ ತಂಡವನ್ನು 2–0ಯಿಂದ ಸೋಲಿಸಿತ್ತು. ನಂತರದ ಒಟ್ಟು 9 ಪಂದ್ಯಗಳಲ್ಲಿ 1 ಡ್ರಾ ಆಗಿತ್ತು. 8 ಪಂದ್ಯಗಳಲ್ಲಿ ಬೆಂಗಾಲ್ ತಂಡ ಪರಾಭವಗೊಂಡಿತ್ತು.

ಇನ್ನಷ್ಟು ಕ್ರೀಡಾ ಸುದ್ದಿಗಳು 8

ಬಿಡಿಎಫ್‌ಎ ಆಶ್ರಯದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಅಗ್ನಿಪುತ್ರ ತಂಡ

ಫುಟ್‌ಬಾಲ್: ಅಗ್ನಿಪುತ್ರ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್ ನುನ್‌ಜಾಮ ಅವರ ಅದ್ಭುತ ಆಟದ ಬಲದಿಂದ ಎಫ್.ಸಿ ಅಗ್ನಿಪುತ್ರ ತಂಡವು ಬಿಡಿಎಫ್‌ಎ ಆಶ್ರಯದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯದಲ್ಲಿ 2–1ರಿಂದ ಸ್ಟೂಡೆಂಟ್ಸ್ ಯೂನಿಯನ್ ಎಫ್.ಸಿ ತಂಡವನ್ನು ಮಣಿಸಿ, ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಶನಿವಾರ ನಡೆದ ಪಂದ್ಯದಲ್ಲಿ ಲಾಲ್ ನುನ್‌ಜಾಮ ಅವರು 36ನೇ ನಿಮಿಷದಲ್ಲಿ ಮೊದಲ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಅದಾದ 10 ನಿಮಿಷದಲ್ಲಿ ಲಾಲ್ ಅವರು (45 + 1ನೇ) ಮತ್ತೊಂದು ಬಾರಿ ಚೆಂಡನ್ನು ಗುರಿ ಸೇರಿಸಿ ಗೋಲಿನ ಅಂತರ ಹೆಚ್ಚಿಸಿದರು. 71ನೇ ನಿಮಿಷದಲ್ಲಿ ಸ್ಟೂಡೆಂಟ್ಸ್ ಯೂನಿಯನ್ ತಂಡದ ಪ್ರಾಣೇಂದ್ರ ಸಿಂಗ್ ಗೋಲು ದಾಖಲಿಸಿ ಸೋಲಿನ ಅಂತರವನ್ನು ತಗ್ಗಿಸಿದರು.

ಪ್ರಶಸ್ತಿ ಪಡೆದ ಅಗ್ನಿಪುತ್ರ ತಂಡವು ಟ್ರೋಫಿಯೊಂದಿಗೆ ₹ 25 ಸಾವಿರ, ರನ್ನರ್‌ಅಪ್ ಆದ ಸ್ಟೂಡೆಂಟ್ಸ್ ಯೂನಿಯನ್ ತಂಡ ಟ್ರೋಫಿಯೊಂದಿಗೆ ₹ 15 ಸಾವಿರ ಬಹುಮಾನ ಪಡೆಯಿತು.

ಪುಣೆ ರೇಸ್

ಕೂಲ್ ರೈಡರ್ ಗೆಲ್ಲುವ ನಿರೀಕ್ಷೆ

ಯೊಹಾನ್ ಜೆಡ್ ಪೂನಾವಾಲ ಟರ್ಫ್ ಕ್ಲಬ್ ಟ್ರೋಫಿ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೂಲ್ ರೈಡರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಟನ್ನಿಂಗ್ ವಿಶ್ಯೂಯಲ್ 6, ಫ್ಯಾಶನ್ ಐಕಾನ್ 2, ಪ್ರಿನ್ಸ್ ಓ ವಾರ್ 8
2ನೇ ರೇಸ್: ಫೈಟಾನ್ 7, ಪೋರ್ಟೋಫಿನೊ ಬೇ 5, ಎಸ್ಪರಾಂಜ 1
3ನೇ ರೇಸ್: ಸಿಮ್ ಸಿಮ್ 6, ದೌಲತ್ ಮಾಯ್ 3, ಗ್ಯಾಲಪಿಂಗ್ ಅಹೆಡ್ 5
4ನೇ ರೇಸ್: ರೇಸಿಂಗ್ ರೊಮಾನ್ಸ್ 7, ಜಫೀರಾ 10, ಕೊಲ್ಲಾಟರಲ್ 5
5ನೇ ರೇಸ್: ಕೂಲ್ ರೈಡರ್ 3, ಅಹೆಡ್ ಆಫ್ ಮೈ ಟೈಮ್ 1, ಜೋಕ್ವಿನ್ 2
6ನೇ ರೇಸ್: ಇಟ್ಸ್ ಮೈ ಟೈಮ್ 6, ಪ್ಲೇಸ್ ವೆಂಡೋಮ್ 5, ಗೋಲ್ಡನ್ ಕಿಂಗ್ಡಮ್ 5
7ನೇ ರೇಸ್: ಜನರಾಸಿಟಿ 8, ಐರಿಶ್ ಗೋಲ್ಡ್ 10, ಔಟ್‌ಲ್ಯಾಂಡರ್ 11

ಉತ್ತಮ ಬೆಟ್: ರೇಸಿಂಗ್ ರೊಮಾನ್ಸ್

ಜಾಕ್‌ಪಾಟ್ 3,4,5,6,7 ಟ್ರಿಬಲ್ 4,5,6

ಯಂಗ್ ಓರಿಯನ್ಸ್ ತಂಡಕ್ಕೆ ಜಯ

ಬೆಂಗಳೂರು: ಸುಮಂತ್ ಮತ್ತು ಆರನ್ ಅವರ ಆಟದ ಬಲದಿಂದ ಯಂಗ್ ಓರಿಯನ್ಸ್ ಎಸ್.ಸಿ ತಂಡವು ಪ್ರೊ.ಎನ್.ಸಿ. ಪರಪ್ಪ ಸ್ಮಾರಕ ಎವರ್ ರೋಲಿಂಗ್ ಟ್ರೋಫಿಯ ರಾಜ್ಯ 'ಎ' ಡಿವಿಷನ್‌ನ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ 112–53ರಿಂದ ಬಿಎಸ್‌ಎನ್‌ಎಲ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಯಂಗ್ ಓರಿಯನ್ಸ್ ತಂಡವು 59 ಪಾಯಿಂಟ್‌ಗಳ ಅಂತರದಿಂದ ಜಯ ಸಾಧಿಸಿತು. ಸುಮಂತ್ (32), ಆ್ಯರನ್ (21) ಮಿಂಚಿದರು.

ಇನ್ನೊಂದು ಪಂದ್ಯದಲ್ಲಿ ಬೀಗಲ್ಸ್ ಬಿ.ಸಿ ತಂಡವು 88–74ರಿಂದ ಭಾರತ್ ಎಸ್.ಯು ತಂಡವನ್ನು ಮಣಿಸಿತು.

ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿ ಇಂದಿನಿಂದ; ಮೊದಲ ದಿನ ಎರಡು ಪಂದ್ಯಗಳು

ಮಯಂಕ್ ಬಳಗಕ್ಕೆ ವೈಶಾಖ ಪಡೆ ಸವಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರದಿಂದ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಆರಂಭವಾಗಲಿದೆ.

ಆಗಸ್ಟ್ 29ರವರೆಗೆ ಟೂರ್ನಿ ನಡೆಯಲಿದ್ದು ಆರು ತಂಡಗಳು ಹಣಾಹಣಿ ನಡೆಸಲಿವೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಪ್ರತಿದಿನವೂ ಎರಡು ಪಂದ್ಯಗಳು ನಡೆಯಲಿವೆ.

ಉದ್ಘಾಟನೆ ದಿನದಂದು ಮಧ್ಯಾಹ್ನ ನಡೆಯುವ ಪಂದ್ಯದಲ್ಲಿ ಮಯಂಕ್ ಅಗರವಾಲ್ ನಾಯಕತ್ವದ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ವೇಗಿ ವೈಶಾಖ ವಿಜಯ ಕುಮಾರ್ ನಾಯಕತ್ವದ ಗುಲ್ಬರ್ಗ ಮಿಸ್ಟಿಕ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಸಂಜೆಯ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಹಾಗೂ ಮೈಸೂರು ವಾರಿಯರ್ಸ್ ಹಣಾಹಣಿ ನಡೆಸಲಿವೆ.

ಮಯಂಕ್ ನಾಯಕತ್ವದಲ್ಲಿ ದಕ್ಷಿಣ ವಲಯ ತಂಡವು ಈಚೆಗಷ್ಟೇ ದೇವಧರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು. ದುಲೀಪ್ ಟ್ರೋಫಿ ಟೂರ್ನಿಯಲ್ಲಿಯೂ ಅವರು ತಂಡದ ಉಪನಾಯಕರಾಗಿದ್ದರು.

ಅವರ ಸಾರಥ್ಯದ ಬೆಂಗಳೂರು ತಂಡದಲ್ಲಿ ಅನುಭವಿ ಅಭಿಮನ್ಯು ಮಿಥುನ್, ಪವನ್ ದೇಶಪಾಂಡೆ, ಯುವ ಆಟಗಾರರಾದ ವಿದ್ಯಾಧರ್ ಪಾಟೀಲ ಮತ್ತು ಶುಭಾಂಗ್ ಹೆಗಡೆ ಇದ್ದಾರೆ.

ಗುಲ್ಬರ್ಗ ತಂಡದಲ್ಲಿ ದೇವದತ್ತ ಪಡಿಕ್ಕಲ್ ಅವರು ಬ್ಯಾಟಿಂಗ್ ವಿಭಾಗದ ಪ್ರಮುಖ ಶಕ್ತಿಯಾಗಿದ್ದಾರೆ. ಕಳೆದ ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಪ್ರತಿನಿಧಿಸಿದ್ದ ವೈಶಾಖ ದೇಶಿ ಕ್ರಿಕೆಟ್‌ನಲ್ಲಿಯೂ ಉತ್ತಮವಾಗಿ ಬೌಲಿಂಗ್ ಮಾಡಿ ಗಮನ ಸೆಳೆದಿದ್ದರು. ತಂಡವನ್ನು ಪ್ರಶಸ್ತಿಯತ್ತ ಮುನ್ನಡೆಸಲು ಸಿದ್ಧರಾಗಿದ್ದಾರೆ.

ಮನೀಷ್–ಕರುಣ್ ಜಿದ್ದಾಜಿದ್ದಿ

ಕರ್ನಾಟಕ ಕ್ರಿಕೆಟ್‌ನ ಇಬ್ಬರು ಪ್ರಮುಖ ಬ್ಯಾಟರ್‌ಗಳಾದ ಮನೀಷ್ ಪಾಂಡೆ ಮತ್ತು ಕರುಣ್ ನಾಯರ್ ಅವರ ನಾಯಕತ್ವದ ಬಳಗಗಳು ಸಂಜೆಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಮನೀಷ್ ಪಾಂಡೆ

ಮನೀಷ್ ಪಾಂಡೆ ಹುಬ್ಬಳ್ಳಿ ಟೈಗರ್ಸ್ ಮತ್ತು ಕರುಣ್ ನಾಯರ್ ಮೈಸೂರು ವಾರಿಯರ್ಸ್ ತಂಡಗಳ ನಾಯಕತ್ವ ವಹಿಸಿದ್ದಾರೆ. ಇಬ್ಬರೂ ಆಟಗಾರರು ಭಾರತ ತಂಡದಲ್ಲಿ ಆಡಿರುವ ಅನುಭವಿಗಳು.

ಹುಬ್ಬಳ್ಳಿ ತಂಡದಲ್ಲಿ ಈಚೆಗೆ ದೇಶಿ ಕ್ರಿಕೆಟ್‌ನಲ್ಲಿ ಗಮನ ಸೆಳೆದಿದ್ದ ವೇಗಿ ವಿದ್ವತ್ ಕಾವೇರಪ್ಪ, ಸ್ಪಿನ್ನರ್ ಕೆ.ಸಿ. ಕಾರಿಯಪ್ಪ, ಪ್ರವೀಣ ದುಬೆ ಮತ್ತು ಲವನೀತ್ ಸಿಸೊಡಿಯಾ ಇದ್ದಾರೆ. ಮೈಸೂರು ತಂಡವು ಎಲ್ಲ ವಿಭಾಗಗಳಲ್ಲಿ ಉತ್ತ ಆಟಗಾರರನ್ನು ಹೊಂದಿದೆ. ಐರ್ಲೆಂಡ್ ಪ್ರವಾಸಕ್ಕೆ ತೆರಳುವ ಮುನ್ನ ಬೌಲರ್ ಪ್ರಸಿದ್ಧ ಕೃಷ್ಣ ಅವರು ಆಡುವ ಸಾಧ್ಯತೆ ಇದೆ. ಸ್ಪಿನ್ನರ್ ಜೆ. ಸುಚಿತ್, ಬ್ಯಾಟರ್ ಆರ್. ಸಮರ್ಥ್, ಕೆ. ಶಶಿಕುಮಾರ್ ಮತ್ತು ಮನೋಜ್ ಬಾಂಢಗೆ ಅವರು ತಂಡದಲ್ಲಿರುವ ಪ್ರಮುಖರಾಗಿದ್ದಾರೆ.

ಅಂಕಿ ಅಂಶ

- 6 ಸ್ಪರ್ಧಿಸಲಿರುವ ತಂಡಗಳು
- 33 ಒಟ್ಟು ಪಂದ್ಯಗಳು
- 17 ದಿನಗಳು

ಇಂದಿನ ಪಂದ್ಯಗಳು

- ಗುಲ್ಬರ್ಗ ಮಿಸ್ಟಿಕ್ಸ್–ಬೆಂಗಳೂರು ಬ್ಲಾಸ್ಟರ್ಸ್ (Vs) ಆರಂಭ: ಮಧ್ಯಾಹ್ನ 1
- ಹುಬ್ಬಳ್ಳಿ ಟೈಗರ್ಸ್–ಮೈಸೂರು ವಾರಿಯರ್ಸ್ (Vs) ಆರಂಭ: ಸಂಜೆ 5.30
- ಲೈವ್: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್